
Page 23

ఎం.ఎం. రామస్వాములు

రామస్వామి గారి



॥ ಶ್ರೀಗುರು ಸಿದ್ಧಲಿಂಗಾಯನಮಃ ॥

ಎಡೆಯೂರು

ಶ್ರೀ ಸಿದ್ಧಲಿಂಗೇಶ್ವರ ಚರಿತ್ರೆ

[ಹೇರಂಬ ಕವಿಯ ಸಾಂಗತ್ಯ ಕಾವ್ಯದ ಸಾರ]

ಗದ್ಯಾನುವಾದ :
ರಾಜಶೇಖರ ಶಾಸ್ತ್ರಿಗಳು, ನೆಲಮಂಗಲ.

ಪ್ರಕಾಶಕರು :
ಶ್ರೀ ತೋಂಟದ ಸಿದ್ಧಲಿಂಗೇಶ್ವರ ಕೈಂಕರ್ಯ ಸೇವಾ ಸಂಘ,
ಎಡೆಯೂರು – ಗದಗ.

೧೯೦೪, ಭಾದ್ರಪದ ಶು.೪ ಬೆಲೆ : ೪–೦೦

ಪ್ರಕಾಶಕರು :

ವ್ಹಿ. ಎಲ್. ಅಂಗಡಿ,
ಗೌ. ಕಾರ್ಯದರ್ಶಿ,
ಶ್ರೀ ತೋಂಟದ ಸಿದ್ಧಲಿಂಗೇಶ್ವರ
ಕೈಂಕರ್ಯ ಸೇವಾ ಸಂಘ,
ಎಡೆಯೂರು-ಗದಗ.

ಐದನೆಯ ಮುದ್ರಣ, ೧೯೮೨

೫೦೦೦ ಪ್ರತಿಗಳು

ಬೆಲೆ : ೪-೦೦

ಮುದ್ರಣ :

ಪ್ರಭು ಪ್ರಿಂಟಿಂಗ ಪ್ರೆಸ್,
ಗದಗ.

॥ ಶ್ರೀ ಸಿದ್ಧಲಿಂಗ ಪ್ರಸೀದ ॥

ಶ್ರೀ ಮ. ನಿ. ಪ್ರ. ಮಹಾಂತಸ್ವಾಮಿಗಳು,

ಚಿತ್ತರಗಿ ಸಂಸ್ಥಾನಮಠ, ಇಲಕಲ್ಲ ಅವರ

ಮುನ್ನುಡಿ

☆

ಮಹಾ ಮಹಿಮರಾದ ಶ್ರೀ ಎಡೆಯೂರ ಜಗದ್ಗುರು ತೋಂಟದ ಸಿದ್ಧಲಿಂಗ ಮಹಾ ಶಿವಯೋಗಿಗಳನ್ನು ಕುರಿತು ಬರೆದ ಈ ಸಿದ್ಧಲಿಂಗೇಶ್ವರ ಸಾಂಗತ್ಯವು ಅತ್ಯಂತ ಮಹತ್ವಪೂರ್ಣವಾದ ಕೃತಿಯಾಗಿದೆ. ಇದನ್ನು ಬರೆದವರು ಹೇರಂಬ ಕವಿಗಳು. ಇವರು ವೈಷ್ಣವರಾದರೂ ಮಹಾಮಹಿಮರ ಕೃತಿಯನ್ನು ಭಕ್ತಿ, ವಿಶ್ವಾಸದಿಂದ ಬರೆದು ಪುಣ್ಯಜೀವಿಗಳಾಗಿದ್ದಾರೆ. ಈ ಕೃತಿಯು ಪದ್ಯಾತ್ಮಕವಾಗಿರುವದರಿಂದ ಬಹುಜನರಿಗೆ ತಿಳಿಯಲೆಂಬ ಸದುದ್ದೇಶವನ್ನಿಟ್ಟು ಕೊಂಡು ಕೈಂಕರ್ಯ ಸೇವಾ ಸಂಘದವರು ಗದ್ಯದಲ್ಲಿ ಬರೆಯಿಸಿ,ನಾಡಿನ ಜನತೆಗೆ ಮಹದುಪಕಾರ ಮಾಡಿದ್ದಾರೆ.

ಚರಕುಲ ಸಾರ್ವಭೌಮರಾದ ಎಡೆಯೂರ ಜಗದ್ಗುರು ಶ್ರೀ ತೋಂಟದ ಸಿದ್ಧಲಿಂಗ ಮಹಾ ಶಿವಯೋಗಿಗಳವರು ಮಹಾನುಭಾವಿಗಳು, ಶಿವಯೋಗ ಸಂಪತ್ತನ್ನು ಸಂಗಳಿಸಿಕೊಂಡವರು. ಆಸೇತು ಹಿಮಾಚಲ ಪರ್ಯಂತವಾಗಿ ತಮ್ಮ ಚರತಿಂಥಿಣಿಯೊಡನೆ ವಸಂತ ಮಾಸದ ಗಾಳಿಯಂತೆ ಸಂಚರಿಸಿ, ಸಕಲ ಜೀವಾವಳಿಗೆ ಲೇಸನೇ ಬಯಸಿದ ಪುಣ್ಯ ಪುರುಷರಿವರು. ಬಸವಾದಿ

ಪ್ರಮಥರ ಮಾರ್ಗಾನುವರ್ತಿಗಳು. ಅರುಹಿನ ತಿರುಕರಿಗೆ ಷಟ್‌ಸ್ಥಲ ಜ್ಞಾನ ಸಾರಾಮೃತವನ್ನು ಉಣಬಡಿಸಿದ ವಿರಾಗ ವಿಭುಗಳು. ದೀನದಲಿತೋದ್ಧಾರ ಕ್ಕಾಗಿ ಎಡೆಯೂರಲ್ಲಿ ನಿರ್ವಿಕಲ್ಪ ಸಮಾಧಿಯನ್ನೈದಿದ ನಿರಾಳ ನಿಶ್ಚಿಂತರು. ಶಿವನ ಅಪರಾವತಾರಿಗಳಾದ ಈ ಮಹಿಮರ ಶಿವಯೋಗ ಸಂಪತ್ತು ಇಂದಿಗೂ ಎಂದಿನಂತೆ ಎಡೆಯೂರ ಕ್ಷೇತ್ರದಲ್ಲಿ ಜಾಜ್ವಲ್ಯಮಾನವಾಗಿ ಬೆಳಗುತ್ತಲೇ ಇದೆ.

ಸಮಾಜಪ್ರೇಮಿ ಲಿಂ. ಹಾನಗಲ್ಲ ಕುಮಾರ ಶಿವಯೋಗಿಗಳವರ ಮನದ ದುಗುಡವನ್ನು ಎಡೆಯೂರ ಕ್ಷೇತ್ರದಲ್ಲಿ ಹೋಗಲಾಡಿಸಿ, "ಇಂದಿಗೂ ನಾನು ಶಿವಯೋಗ ಸಮಾಧಿಯಲ್ಲಿದ್ದೇನೆ" ಎಂದು ಅಭಯ ವಚನವನ್ನಿತ್ತು ಎಚ್ಚರಿಸಿದ ಮಹಾ ವಿಭೂತಿಗಳು.

ಅಂತೆಯೇ ಈ ಪಾವನ ತಪೋಭೂಮಿ ಆ ಪುಣ್ಯ ಪುರುಷನ ನಿಜ ವಾಸದಿಂದಾಗಿ ಜಂಗಮಲಿಂಗ ಕ್ಷೇತ್ರವಾಗಿ ಪರಿಣಮಿಸಿದೆ. ಭಕ್ತಿಪ್ರಿಯ ನಾದ ಎಡೆಯೂರ ಮಹಾ ಶಿವಯೋಗಿಯು ತನ್ನತ್ತ ಇಂದಿಗೂ ಎಲ್ಲರನ್ನು ಆಕರ್ಷಿಸುತ್ತಲೇ ಇದ್ದಾನೆ. ದೇಶ ವಿದೇಶಗಳಿಂದಲೂ ಭಕ್ತಿ ಸಂಪನ್ನರು ಕ್ಷೇತ್ರಕ್ಕೆ ಬಂದು ಭಕ್ತಿ ಸಮರ್ಪಣೆ ಮಾಡುತ್ತಲೇ ಇದ್ದಾರೆ. ಮಹಾ ಮಹಿಮನ ದರ್ಶನಾಪೇಕ್ಷಿಗಳಾಗಿ ಬರುವ ಭಕ್ತ ಸಂದೋಹ ಅಗಣಿತವಾಗಿದೆ; ಅಸಂಖ್ಯವಾಗಿದೆ.

ಈ ಪುಣ್ಯತಮವಾದ ಜಂಗಮಲಿಂಗ ಕ್ಷೇತ್ರದಲ್ಲಿ ಕಳೆದ ೩೩ ವರ್ಷಗ ಳಿಂದ, ಶ್ರೀ ತೋಂಟದ ಸಿದ್ಧಲಿಂಗೇಶ್ವರ ಕೈಂಕರ್ಯ ಸೇವಾ ಸಂಘ,ಎಡೆಯೂರು-ಗದಗ ಇವರು ಯಾತ್ರಾರ್ಥಿಗಳಿಗೆ ಮಹಾ ದಾಸೋಹವನ್ನು ನಡೆಯಿಸಿಕೊಂಡು ಬರುತ್ತಿರುವದು ಅತ್ಯಂತ ಔಚಿತ್ಯಪೂರ್ಣವಾಗಿದೆ. ಈ ಮಹಾ ದಾಸೋಹದ ವ್ಯವಸ್ಥೆ ಗಾಗಿ ನಮ್ಮವರೇ ಆದ, ಗದುಗಿನ ಶ್ರೀಮಾನ್ ವ್ಹಿ. ಎಲ್. ಅಂಗಡಿಯವರು ತುಂಬ ಪರಿಶ್ರಮಿಸುತ್ತಲೇ ಇರುತ್ತಾರೆ. ಅವರ ಶ್ರಮ ಈ ಪವಿತ್ರ ಕಾರ್ಯ ದಿಂದಾಗಿ ಸಾರ್ಥಕಗೊಂಡಿದೆ. ಎ ಡೆ ಯೂ ರ ಮ ಹಾ ಸ್ವಾ ಮಿ ಸೇವೆಗಾಗಿ ಶ್ರೀ ವ್ಹಿ. ಎಲ್. ಅಂಗಡಿಯವರು ಮೀಸಲಿಕ್ಕಿದ ಮಹಾ ಭಕ್ತರಾಗಿದ್ದಾರೆ.

ನಾನು ಮಾಡಿದೆ ಎಂಬ ಅಭಿಮಾನವಿಲ್ಲ. ಎಲ್ಲವೂ ಎಡೆಯೂರ ಸ್ವಾಮಿಯ ದೆಂದೇ ಅರಿತು ಆಚರಿಸುವ ಗುಪ್ತ ಶರಣರಾಗಿ ಇರುವ ಶ್ರೀ ಅಂಗಡಿಯವರ ಈ ದಾಸೋಹ ಸೇವೆ ನಮಗೆ ಸಂತೋಷವನ್ನುಂಟು ಮಾಡಿದೆ. ಮಹಾಸ್ವಾಮಿಯ ದಾಸೋಹ ವೈಭವ ನಿರಂತರವಾಗಿ ನಾಡವರ ಸೇವೆ–ಸಹಕಾರಗಳಿಂದ ಜರುಗಲೆಂದು ಶ್ರೀ ಎಡೆಯೂರೇಶ್ವರನನ್ನು ಪ್ರಾರ್ಥಿಸುತ್ತೇವೆ.

— ಇತಿ ಶಿವಂ ಭೂಯಾತ್ —

ಪ್ರಕಾಶಕರ ನಿವೇದನೆ

★

ಶ್ರೀ ತೋಂಟದ ಸಿದ್ಧಲಿಂಗೇಶ್ವರ ಕೈಂಕರ್ಯ ಸೇವಾ ಸಂಘ, ಎಡೆಯೂರು-ಗದಗ ಈ ಸಂಘದ ವತಿಯಿಂದ ಶ್ರೀ ಸ್ವಾಮಿಯ ಬಗೆಗಿನ ಹಲವಾರು ಹೊತ್ತಿಗೆಗಳನ್ನು ಮುದ್ರಿಸಿ, ಭಕ್ತ ಮಹಾಜನಗಳಿಗೆ ಅರ್ಪಿಸುತ್ತಾ ಇರುವದು ತಮಗೆಲ್ಲ ತಿಳಿದ ವಿಷಯವೇ ಆಗಿರುತ್ತದೆ. ನಾವು ಅರ್ಪಿಸುತ್ತಾ ಇರುವ ಶ್ರೀ ಸ್ವಾಮಿಯ ಬಗೆಗಿನ ಭಕ್ತಿಪೂರ್ವಕವಾಗಿರುವ ಪುಸ್ತಕಗಳನ್ನು ಭಕ್ತ ಮಹಾಜನಗಳು ಅಭಿಮಾನದಿಂದ ಕೊಂಡುಕೊಂಡು ನಮ್ಮ ಕಾರ್ಯಕ್ಕೆ ಹೆಚ್ಚಾಗಿ ಪ್ರೋತ್ಸಾಹನ ಕೊಡುತ್ತಾ ಇರುವುದು ನಮಗೆ ಬಹು ಸಂತಸವನ್ನುಂಟು ಮಾಡಿದೆಯಲ್ಲದೆ, ಇನ್ನೂ, ಹೆಚ್ಚು ಹೆಚ್ಚಾಗಿ ಶ್ರೀ ಸ್ವಾಮಿ ಬಗೆಗಿನ ಪುಸ್ತಕಗಳನ್ನು ಪ್ರಕಟಿಸಲು ಪ್ರೇರಕಶಕ್ತಿಯಾಗಿ ನಮಗೆ ಸ್ಫೂರ್ತಿ ನೀಡಿದೆ.

ಪ್ರಸ್ತುತ "ಶ್ರೀ ಸಿದ್ಧಲಿಂಗೇಶ್ವರ ಚರಿತ್ರೆ" ಗ್ರಂಥವನ್ನು ಖ್ಯಾತರಾದ ಶ್ರೀ ಹೇರಂಬ ಕವಿಗಳು ಪದ್ಯಾತ್ಮಕವಾಗಿ ರಚಿಸಿದ್ದಾರೆ. ಶ್ರೀಸಾಮಾನ್ಯನಿಗೂ ತಿಳಿಯಲೆಂಬ ಸದುದ್ದೇಶವನ್ನಿಟ್ಟುಕೊಂಡು ಕೈಂಕರ್ಯ ಸೇವಾ ಸಂಘದವರು ಶ್ರೀ ರಾಜಶೇಖರ ಶಾಸ್ತ್ರಿಗಳು, ನೆಲಮಂಗಲ ಅವರಿಂದ ಈ ಗ್ರಂಥವನ್ನು ಗದ್ಯದಲ್ಲಿ ಬರೆಸಿದ್ದಾರೆ. ಹೇರಂಬ ಕವಿಗಳು ವೈಷ್ಣವ ಮತದವರಾದರೂ ಶ್ರೀ ಸ್ವಾಮಿಯ ಮೇಲಿನ ಭಕ್ತಿಭಾವದಿಂದ ಕಾವ್ಯ ರಚಿಸಿರುವುದು ನಮಗೆಲ್ಲ ಅಭಿಮಾನಾಸ್ಪದವಾಗಿರುವುದರಿಂದ ನಾವಿದನ್ನು ಪ್ರಕಟಿಸಲು ಹೆಮ್ಮೆ ಪಡುತ್ತೇವೆ.

ನಮ್ಮ ದೇಶದ ಮಾಜಿ ಉಪರಾಷ್ಟ್ರಪತಿಗಳಾದ ಮಾನ್ಯ ಶ್ರೀ ಬಿ. ಡಿ. ಜತ್ತಿ ಅವರು ಕೆಲವರುಷಗಳ ಹಿಂದೆ ಶ್ರೀಕ್ಷೇತ್ರದ ವ್ಯವಸ್ಥಾಪಕ ಕಮಿಟಿಯನ್ನು ರಚಿಸಿ, ಹಲವಾರು ರೀತಿಯಿಂದ ಕಾರ್ಯಗಳನ್ನು ಮಾಡಲಿಕ್ಕೆ ನಮಗೆ ವ್ಯವಸ್ಥಿತ ಅನುಕೂಲತೆ ಮಾಡಿಕೊಟ್ಟಿರುವುದನ್ನು ನಾವಿಲ್ಲಿ ಹೆಮ್ಮೆಯಿಂದ ಸ್ಮರಿಸಿಕೊಳ್ಳುತ್ತೇವೆ.

ಶ್ರೀ ಸಿದ್ಧಲಿಂಗೇಶ್ವರ ಕ್ಷೇತ್ರದ ವ್ಯವಸ್ಥಾಪಕ ಕಮಿಟಿಯ ಚೇರಮನ್‌ರಾದ ಶ್ರೀ ಎಸ್. ಎಸ್. ಮೀನಾಕ್ಷಿಸುಂದರಂ, ಡಿ.ಸಿ., ತುಮಕೂರು ಇವರು ಹಾಗೂ ಕಮಿಟಿಯ ಸರ್ವ ಸದಸ್ಯರು ಈ ಗ್ರಂಥವನ್ನು ಮುದ್ರಣಗೊಳಿಸಿ ಪ್ರಕಾಶಿಸಲಿಕ್ಕೆ ಕಮಿಟಿಯ ಪರವಾಗಿ ಕೈಂಕರ್ಯ ಸೇವಾ ಸಂಘಕ್ಕೆ ಅನುಮತಿ ಇತ್ತಿರುವದರಿಂದ ಅವರೆಲ್ಲರಿಗೂ ಕೃತಜ್ಞತೆಗಳನ್ನು ಅರ್ಪಿಸಲು ನನಗೆ ಬಹು ಸಂತೋಷವಾಗುತ್ತದೆ.

ಇಳಕಲ್ಲ ಚಿತ್ತರಗಿ ಸಂಸ್ಥಾನ ಮಠದ ಶ್ರೀಗಳವರು ಬಿಡುವಿಲ್ಲದ ಕಾರ್ಯ ಕ್ರಮಗಳಲ್ಲಿ ನಿರತರಾಗಿದ್ದರೂ ಸಹ ನನ್ನ ವಿನಂತಿಗೆ ಮಾನ್ಯತೆ ನೀಡಿ ಮುನ್ನುಡಿ ಬರೆದುಕೊಟ್ಟದ್ದಕ್ಕಾಗಿ ಶ್ರೀಗಳವರ ವಾತ್ಸಲ್ಯವನ್ನು ಸ್ಮರಿಸಿ, ಅವರ ಪಾದಾರ ವಿಂದಗಳಿಗೆ ಶಿರಬಾಗಿಸದೆ ಇರಲಾರೆ.

ಇಂತಹ ಗ್ರಂಥಗಳನ್ನು ಮುದ್ರಿಸಿ, ಅಲ್ಪ ಲಾಭ ಬರುವಂತೆ ಪ್ರಕಟಿಸಿ, ಬಂದ ಲಾಭವನ್ನು ಪೂರ್ಣವಾಗಿ ಶ್ರೀ ಕ್ಷೇತ್ರದಲ್ಲಿ ನಡೆಯುವ ನಿತ್ಯ ದಾಸೋಹ ಖರ್ಚಿಗಾಗಿ ವಿನಿಯೋಗಿಸುತ್ತೇವೆ ಎಂದು ತಮ್ಮೆಲ್ಲರಿಗೆ ತಿಳಿಯಪಡಿಸುವುದು ನನ್ನ ಕರ್ತವ್ಯವೆಂದು ಭಾವಿಸುತ್ತೇನೆ.

ಕೊನೆಯದಾಗಿ ಈ ಗ್ರಂಥವನ್ನು ಭಕ್ತಿಪೂರ್ವಕವಾಗಿ ಮುದ್ರಿಸಿಕೊಟ್ಟ ಗದುಗಿನ ಪ್ರಭು ಪ್ರಿಂಟಿಂಗ ಪ್ರೆಸ್ಸಿನವರಿಗೆ ಶ್ರೀ ಸ್ವಾಮಿ ಕೃಪೆ ಮಾಡಲಿ ಎಂದು ಹಾರೈಸುತ್ತೇನೆ.

ಗದಗ,
ತಾ. ೨೨–೮–೮೨

ವ್ಹಿ. ಎಲ್. ಅಂಗಡಿ,
ಗೌ. ಕಾರ್ಯದರ್ಶಿ

ಕರುಣಾಳು ಯಡೆಯೂರವಾಸ

ರಾಗ: ಮಿಶ್ರಪಹಡಿ ತಾಳ : ದೀಪಚಂದಿ

ಕರುಣಾಳು ಯಡೆಯೂರವಾಸ ಸಿದ್ಧಲಿಂಗೇಶ ।
ಪೊರೆಯೋ ಹೇ ಪರಮೇಶ ದೇವಾಧಿದೇವ ||ಪಲ್ಲವಿ||

ಭವದಲ್ಲಿ ಬಂದೆ ಗತಿನೀನು ಮುಂದೆ ।
ತವ ಸೇವೆಯೊಂದೆ ಬೇಡುವೆನು ತಂದೆ ದೇವಾಧಿದೇವ ||೧||

ಭಕ್ತಿಯ ಪಥವ ಮುಕ್ತಿಯ ನಿಲವ ।
ತೋರಿಸಿ ಅಭವ ಕೃಪೆಯಾಗು ದೇವ ದೇವಾಧಿದೇವ ||೨||

ವಿರತಿಯ ಭಾನು ಶರಣು ಸುರದೇನು ।
ಪರಶಿವನು ನೀನು ಶರಣೆಂಬೆ ನಾನು ದೇವಾಧಿದೇವ ||೩||

ಶಿವಮಂತ್ರ ಪ್ರಾಣ ನೀನೇ ಪ್ರಮಾಣ ।
ತವನಾಮ ಸ್ಮರಣ ಭವತಾಪ ಹರಣ ದೇವಾಧಿದೇವ ||೪||

ತನು ಮನ ಧನವು ನಿನಗೆ ಅರ್ಪಣವು ।
ಕರುಣೆ ನಿನ್ನೊಲವು ಇರಲೆನಗೆ ಬಲವು ದೇವಾಧಿದೇವಾ ||೫||

ಜಗದೇಕ ಗುರುವೆ ಜಗವ ತುಂಬಿರುವೆ ।
ನೆನಿಸಿದಲ್ಲಿರುವೆ ಹೇ ಕಲ್ಪತರುವೆ ದೇವಾಧಿದೇವ ||೬||



ಅನಾದಿ ನಿರಂಜನ ಜಗದ್ಗುರು
ತೋಂಟದ ಶ್ರೀ ಸಿದ್ಧಲಿಂಗೇಶ್ವರರ ನಿರ್ವಿಕಲ್ಪ ಸಮಾಧಿ, ಯಡೆಯೂರು

ಎಡೆಯೂರು

ಶ್ರೀ ಸಿದ್ಧಲಿಂಗ ಶಿವಯೋಗಿಗಳ

ಸಾಂಗತ್ಯ ಪುರಾಣದ ಗದ್ಯಾನುವಾದ

ದುರಿತ ತಮಃ ಪತಂಗನಮಳಾರ್ಥ ವಿವೇಚನ ಸತ್ಪ್ರಸಂಗ ನೀ
ಶ್ವರ ಲಸದಂತರಂಗ ನಭವಾಗಮವಾರಿಜ ದಿವ್ಯಭೃಂಗನ
ಕ್ಷರ ಪರಲಿಂಗಸಂಗನತಿಶಾಂತಿ ನಿರಸ್ತ ಜಡಾನುಷಂಗನೊ
ಲ್ದುರುತರ ಸಿದ್ಧಲಿಂಗ ಯತಿತುಂಗನೊಡರ್ಚುಗೆ ಸಜ್ಜನೇಷ್ಟಮಂ ॥

ವಿಜಯನಗರ ಸಾಮ್ರಾಜ್ಯ ಹಂಪೆಯ ಹಿರಿಯಮಠ ವಿರೂಪಾಕ್ಷೇಶ್ವರ ದೇವಾಲಯದ ಪ್ರಾಕಾರದಲ್ಲೂ ಸಿದ್ಧಲಿಂಗ ಶಿವಯೋಗಿಗಳ ಭಕ್ತ ತಿಂತಿಣಿಯವರಾದ ನೂರೊಂದು ವಿರಕ್ತರೂ ವಾಸಿಸುತ್ತ ಸದಾಕಾಲದಲ್ಲೂ ತಮ್ಮ ಗುರುಗಳಾದ ಶ್ರೀ ಸಿದ್ಧಲಿಂಗ ಶಿವಯೋಗಿಗಳ ಧ್ಯಾನ ಸ್ತೋತ್ರ ಮಂತ್ರಪೂರಿತವಾದ ಪಾರಾಯಣವನ್ನು ಮಾಡುತ್ತಿರುವುದನ್ನು ಆಗಿನ ವಿಜಯನಗರದ ಪ್ರಭುವಾದ ಯಲಹಂಕ ವಂಶದ ಬೈಯಮಾಂಬೆ ಎಂಬ ರಾಣಿಯ ಸುಪುತ್ರನಾದ ಮುದ್ದುಕೃಷ್ಣರಾಜನು ಈ ವಿಚಾರವನ್ನು ತಿಳಿದುಕೊಂಡು ತನ್ನ ರಾಜ್ಯದ ಆಸ್ಥಾನ ಪಂಡಿತರಾಗಿದ್ದ ಕಾಶ್ಯಪಗೋತ್ರ ಆಶ್ವಲಾಯನ ಸೂತ್ರದ ವೈಷ್ಣವ ಹೇರಂಬ ವರಕವಿ ಎಂಬವರಿಗೆ, ಸಿದ್ಧಲಿಂಗ ಶಿವಯೋಗಿಯ ಜೀವನ ಚರಿತ್ರೆಯನ್ನು ಸಾಂಗ

ವಾಗಿ ನನಗೆ ಮನಮುಟ್ಟುವಂತೆ ಬರೆದು ಹೇಳಬೇಕೆಂದು ಕೇಳಿಕೊಂಡಿದ್ದಕ್ಕೆ ಒಪ್ಪಿ ಪುರಾಣದ ಪ್ರಾರಂಭವನ್ನು ಕೈಲಾಸದ ಅರಮನೆಯ ಶಿವನ ಒಡ್ಡೋಲಗದ ವೈಭವದೊಡನೆ ಪ್ರಾರಂಭಿಸುತ್ತಾನೆ.

ಕೈಲಾಸದಲ್ಲಿ ವಜ್ರಖಚಿತವಾದ ಕಂಬದಿಂದೊಪ್ಪುವ ಸಭಾಮಂಟಪದ ಮಧ್ಯಭಾಗದಲ್ಲಿ ರತ್ನ ಖಚಿತವಾದ ಸಿಂಹಾಸನವಿದ್ದು ಅದರ ಮೇಲೆ ಶಿವನು ಮಂಡಿಸಿ ಎಡ ತೊಡೆಯಮೇಲೆ ಗೌರಿದೇವಿ, ಮುಂಭಾಗದಲ್ಲಿ ಕುಮಾರ ಸ್ವಾಮಿ, ವಿಘ್ನೇಶ್ವರರು, ಎಡಬಲದ ಆಸನದಲ್ಲಿ ಹರಿಬ್ರಹ್ಮರು ಮಂಡಿಸಿದ್ದು ಯಕ್ಷ, ಕಿನ್ನರ, ಕಿಂಪುರುಷರು, ಅಷ್ಟದಿಕ್ಪಾಲಕರು, ನವಗ್ರಹಗಳು, ಅತ್ರಿ, ಕಶ್ಯಪ, ಗೌತಮ, ಭಾರಧ್ವಜರಾದಿಯಾಗಿ ತಪಸ್ವಿಗಳು, ಸಪ್ತಋಷಿಗಳು ಸಪ್ತ ಮಾತೃಕೆಯರು, ದೇವೇಂದ್ರಾದಿ ಮೂವತ್ತುಮೂರುಕೋಟಿ ದೇವತೆಗಳು ಮರುದ್ಗಣರು, ರುದ್ರಗಣರು, ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತು, ಸಭೆಯು ಅಲಂಕಾರವಾಗಿತ್ತು. ಗಂಧರ್ವರು ಯಕ್ಷರು ಛತ್ರ ಚಾಮರಾದಿ ಗಳನ್ನು ಹಿಡಿದು ಓಲೈಸುತ್ತಿದ್ದರು. ರಾತ್ರಿಂಚರರು ಕೈದೀವಟಿಗೆಯನ್ನು ಹಿಡಿದು ಪ್ರಕಾಶಗೊಳಿಸುತ್ತಿದ್ದರು. ಭೃಂಗೀಶನೂ ಅಪ್ಸರ ಸ್ತ್ರೀಯರೂ ಶಿವನ ಒಡ್ಡೋಲಗದ ಮುಂದೆ ನಾಟ್ಯವಾಡುತ್ತಿದ್ದರು. ಆ ಸಭೆಯಲ್ಲಿ ಶಿವನ ಮುಂಭಾಗದಲ್ಲಿ ನಿರಂಜನ ಗಣಾಧೀಶ್ವರರು ಕುಳಿತಿದ್ದರು. ನಂದೀಶ್ವರನು ಬೆತ್ತವನ್ನು ಹಿಡಿದು ಸಂಜ್ಞೆಯಿಂದಲೇ ಶಾಂತಗೊಳಿಸುತ್ತ ಎಲ್ಲಾ ಸ್ಥಾನದವರನ್ನು ಗದ್ದಲ ಮಾಡದಂತೆ ನೋಡಿಕೊಳ್ಳುತ್ತಿದ್ದನು. ಇಂತಹ ಯಾವ ಶಿವನ ಒಡ್ಡೋಲಗಕ್ಕೆ ತುಳಸೀಪತ್ರೆಯ ಹಾರವನ್ನು ಹಾಕಿಕೊಂಡು ಕೈಯಲ್ಲಿ ವೀಣೆಯನ್ನು ಬಾರಿಸುತ್ತ ಶಿವಧ್ಯಾನ ಮಾಡುತ್ತಾ ಹಂಸವನ್ನು ಏರಿ ಆಕಾಶಮಾರ್ಗದಿಂದ ಶಿವಸಭೆಗೆ ಬಂದು; ಶಿವನೇ, ಸಾಕ್ಷಾತ್ ಪರಬ್ರಹ್ಮ ಸ್ವರೂಪನೇ, ಸತ್ ಚಿತ್ ಆನಂದ ಮೂರ್ತಿಯೇ, ನಿಷ್ಕಲ ಬ್ರಹ್ಮನೇ, ಸೃಷ್ಟಿ, ಸ್ಥಿತಿ, ಲಯಕರ್ತನೇ, ಧರ್ಮೋದ್ಧಾರಕನೇ, ಭಕ್ತವತ್ಸಲನೇ ಎಂದು ಸ್ತೋತ್ರ ಮಾಡುತ್ತಾ ನಿಟ್ಟುಸಿರಿನಿಂದ ಶಿವನ ಪಾದಕ್ಕೆ ನಮಸ್ಕರಿಸಿ ನಿಂತಿರುವ ನಾರದನನ್ನು ನೋಡಿ, ಏನಯ್ಯಾ ಎಲ್ಲೆಲ್ಲಿ ಸಂಚಾರ ಮಾಡಿಕೊಂಡು ಬಂದಿರಿ, ಏನೇನು ವಿಶೇಷವನ್ನು ಕಂಡಿರಿ ಎಂದು ಕೇಳಿದಾಗ, ಪರಮಾತ್ಮ! ಈರೇಳು

ಲೋಕಗಳನ್ನು ಸಂಚರಿಸಿ ಭೂಲೋಕಕ್ಕೆ ಬಂದು ನೋಡಿದಾಗ ಅಲ್ಲಿ ಮ್ಲೇಂಛರು ಚಾರ್ವಾಕರು ಹೆಚ್ಚಿ ಶಿವಧರ್ಮವೇ ಇಲ್ಲದೆ ಕಳುವು, ಸುಲಿಗೆ, ದರೋಡೆ, ಶಿಶುಹತ್ಯೆ, ಗೋಹತ್ಯೆ, ಪರಸ್ತ್ರೀಯರ ಮಾನಭಂಗ, ಮಧ್ಯ ಮಾಂಸಾಹಾರಗಳ ಯಥೇಚ್ಛತೆ, ಶಿವಲಾಂಛನ, ಶಿವ ದೇವಾಲಯಗಳನ್ನು ನಾಶಪಡಿಸುವುದು ಮುಂತಾದುವನ್ನು ನೋಡಿ, ಶಿವನ ಧರ್ಮವೇ ಹಾಳಾಯಿತಲ್ಲಾ ಎಂಬ ದುಃಖ ದಿಂದ ಇದ್ದ ಸಂಗತಿಯನ್ನು ಸನ್ನಿಧಿಯರಲ್ಲಿ ಅರಿಕೆ ಮಾಡಿ ಶಿವಧರ್ಮೋದ್ಧಾರ ಕ್ಕೋಸ್ಕರ ಭೂಲೋಕಕ್ಕೆ ತಾವೇ ದಯಮಾಡಿಸಬೇಕೆಂದು ಬಿನ್ನವಿಸಿ ಪ್ರಾರ್ಥಿಸಿದ ನಾರದರ ಶಿರವಿಡಿದೆತ್ತಿ ಮನಸ್ಸಿನಲ್ಲಿ ಕೋಪಾರೂಢರಾಗಿ ನಮ್ಮ ಅಂಶೀಭೂತ ರಾದ,ನಿರಂಜನ ಗಣಾಧೀಶ್ವರರನ್ನು ಶಿವಧರ್ಮೋದ್ಧಾರಕ್ಕೋಸ್ಕರ ಭೂಲೋಕಕ್ಕೆ ಕಳುಹಿಸಿ ಕ್ರಮಪಡಿಸುತ್ತೇನೆಂದು ನಾರದರಿಗೆ ಸಮಾಧಾನ ಹೇಳಿ, ಸಂಜ್ಞೆ ಯಿಂದಲೇ ಸಮೀಪದಲ್ಲಿದ್ದ ನಿರಂಜನಗಣಾಧೀಶ್ವರರನ್ನು ಬರಮಾಡಿಕೊಂಡು, ಕೆಟ್ಟು ಹೋಗುತ್ತಿರುವ ಶಿವಧರ್ಮವನ್ನು ಉದ್ದರಿಸಲು ಸಾಕಾದಷ್ಟು ರುದ್ರ ಗಣದೊಡನೆ ಭೂಲೋಕಕ್ಕೆ ಹೋಗಿ ಶಿವಧರ್ಮೋದ್ಧಾರ ಮಾಡಬೇಕೆಂದು ಅಪ್ಪಣೆ ಕೊಡಿಸಿದನು. ಶಿರಸಾ ವಂದಿಸಿ ಒಪ್ಪಿಕೊಂಡು ಭೂಲೋಕ ಮಾರ್ಗ ವಿಡಿದು ಪ್ರಯಾಣಸಿದ್ಧರಾದಾಗ ದೇವದುಂದುಭಿಗಳು ಮೊಳಗಿದವು. ಪುಷ್ಪ ವೃಷ್ಟಿಯಾಯಿತು. ದೇವಾಧಿದೇವತೆಗಳೆಲ್ಲರು ಉಘೇ ಉಘೇ ಎಂದು ಜಯ ಘೋಷ ಮಾಡುತ್ತಿದ್ದರು. ಆಗ ಪುಷ್ಪಕವನ್ನೇರಿ ವಿಪುಲವಾದ ರುದ್ರಗಣದೊಡನೆ ಭೂಲೋಕಕ್ಕೆ ಬರುತ್ತಿರುವ ದಾರಿಯಲ್ಲಿ ಭೂಲೋಕದ ವಿಸ್ತಾರವನ್ನು ತಿಳಿಯು ವಂತೆ ಹೇಳಬೇಕೆಂದು ರುದ್ರಗಣರು ಕೇಳಿಕೊಂಡಾಗ ತಿಳಿದಷ್ಟನ್ನುಸಂಕ್ಷೇಪವಾಗಿ ಹೇಳುತ್ತಾ ಬರುವಾಗ ಕಾವೇರಿ, ಕಪನೀ ನದಿಗಳ ದಕ್ಷಿಣ ದಿಗ್ಭಾಗದಲ್ಲಿರುವ ವಾಣಿಜ್ಯಪುರದ ಹರದನಹಳ್ಳಿಯ ಉದ್ಯಾನವನದಲ್ಲಿ ಮಾಯದಿಂದ ತಂಗಿದರು. ವಾಣಿಜ್ಯಪುರದ ಈ ಪೂರ್ವವೃತ್ತಾಂತವನ್ನು ಮುಂದೆ ವಿವರಿಸುತ್ತೇನೆ.

ಶ್ರೀ ಸಿದ್ಧಲಿಂಗೇಶ್ವರರ ಜನನ

ಗಿರಿ, ವನ ಹಾಗೂ ಪ್ರಜೆಗಳಿಂದ ಸಿಬಿಡವಾದ ಕರ್ನಾಟಕ ಮಾತೆಯ ಲೀಲಾ ಕುಸುಮದಂತೆ ಕಾವೇರಿ ನದಿಯು ಪಶ್ಚಿಮದಿಂದ ಪೂರ್ವಕ್ಕೆ, ಕಿರಿದರಿಂದ ಹಿರಿಮೆಗೆ, ಕಾಡಿನಿಂದ ಕಡಲೆಡೆಗೆ ಹರಿಯುತ್ತಿದೆ. ಅಲ್ಲಲ್ಲಿ ತಂಗುತ್ತಾ ಅಲ್ಲಲ್ಲಿ ಕುಪ್ಪಳಿಸುತ್ತಾ ಗಂಭೀರವಾಗಿ ಹರಿಯುತ್ತಾ ನಾನಾವಿಧ ಗಮನಗಳಿಂದ ಎಳೆಯ ಹುಡುಗಿಯಂತೆ ನಲಿಯುತ್ತಿದೆ. ಕೆಲವೆಡೆ ಸೌಮ್ಯದಿಂದ ಕೆಲವೆಡೆ ಘೋರ್ಗರಿತವಾಗಿ ಹುಡುಗನೂ ಅಲ್ಲ ಮುದಿಯನೂ ಅಲ್ಲವೆಂಬಂತೆ ಕಾಣುತ್ತಿದೆ. ದಡಗಳೆರಡರಲ್ಲೂ ತನ್ನ ಕಡೆಗೆ ಬರುವ ನದೀಬಾಲೆಯರನ್ನು ತನ್ನಲ್ಲಿ ಸೇರಿಸಿಕೊಂಡು, ಕಟ್ಟೆ, ಕಾಲುವೆಗಳಿಂದ ತನ್ನ ಜೀವನವನ್ನು ದಾರಿಯುದ್ದಕ್ಕೂ ಬೇಡಿದವರಿಗೆ ಕೊಡುತ್ತಾ ಪರಮೋಪಕಾರಿಯಾಗಿ ಬಾಳುತ್ತಿರುವ ಈ ಕಾವೇರಿಯೇ ಕನ್ನಡ ನಾಡಿನ ಶ್ರೀಗೌರಿ; ಅದೃಷ್ಟದ ದಾರಿ. ಈ ಕಾವೇರಿ ನದಿಯ ದಡದಲ್ಲಿರುವ ಅನೇಕಾನೇಕ ಪುಣ್ಯಕ್ಷೇತ್ರಗಳಂತೆ ಗಜಾರಣ್ಯವೂ ಒಂದು ಪುಣ್ಯವನ.

ಹಿಂದಿನ ಕಾಲದಲ್ಲಿ ಈಗಿನಂತೆ ವ್ಯಾಪಾರದ ಸರಕುಗಳನ್ನು ಸಾಗಿಸಲನುಕೂಲವಾದ ರೈಲು, ಮೋಟಾರುಗಳಿರಲಿಲ್ಲ. ಕೆಲವು ಕಡೆ ಸರಿಯಾದ ದಾರಿಗಳೇ

ಇರಲಿಲ್ಲ. ಪೋಲೀಸರ ಕಾವಲು ಕಟ್ಟಳೆ ಇರಲಿಲ್ಲ. ಕಳ್ಳಕಾಕರ ಭಯ ಬಹಳ ವಿದ್ದುದರಿಂದ ವ್ಯಾಪಾರಗಾರರು ಗುಂಪುಗುಂಪಾಗಿ ತಕ್ಕ ಸಿಬ್ಬಂದಿಯೊಡನೆ ಶುಭಮುಹೂರ್ತ ನೋಡಿ ಮನೆ ಬಿಡುತ್ತಿದ್ದರು. ಸಾಮಾನುಗಳನ್ನೆಲ್ಲಾ ಚೀಲಗಳಲ್ಲಿ ತುಂಬಿ, ಅವನ್ನು ಎತ್ತು, ಕುದುರೆ, ಒಂಟೆ ಮುಂತಾದ ಸಾಕು ಪ್ರಾಣಿಗಳ ಮೇಲೆ ಹೇರಿಕೊಂಡು ದೂರದೂರದ ನಗರಗಳಿಗೆ ಹೋಗಿ ಮಾರಿ ಲಾಭಗಳಿಸುತ್ತಿದ್ದರು.

ಅದರಂತೆ ಒಂದು ಸಾರಿ ಬಹುಜನ ವರ್ತಕರು ಸೇರಿ ಒಂದು ಲಕ್ಷಹೇರು ಅಡಿಕೆ ಕೊಂಡು ಎತ್ತುಗಳ ಮೇಲೆ ಹೇರಿ ಮಧುರೆಯ ಕಡೆಗೆ ವ್ಯಾಪಾರಕ್ಕೆ ಹೊರಟರು. ಹಲವು ದಿನಗಳವರೆಗೆ ಅವರ ಪ್ರಯಾಣ ಸುಗಮವಾಗಿ ಮುಂದುವರಿಯುತ್ತಿರಲು, ಮುಂದೆ ಘೋರಾರಣ್ಯ ಸಿಕ್ಕಿತು. ಆಗ ಮಟ ಮಟ ಮಧ್ಯಾಹ್ನ. ಪ್ರಯಾಣಿಕರ ಹಸಿವು ಬಾಯಾರಿಕೆಗಳು ಅತಿಯಾದವು. ಅವರ ಪುಣ್ಯಕ್ಕೆ ಸಮೀಪದಲ್ಲೇ ಒಂದು ದೊಡ್ಡ ಆಲದ ಮರವು ಕಣ್ಣಿಗೆ ಗೋಚರಿಸಿತು. ಆಗ ಆ ವರ್ತಕರೆಲ್ಲರೂ ಆ ಮರದ ನೆರಳಿನಲ್ಲಿ ಬೀಡುಬಿಟ್ಟು ಊಟ ಮುಗಿಸುವುದೆಂದು ತೀರ್ಮಾನಿಸಿ, ಅಲ್ಲಿ ತಂಗಿದರು. ಆ ಘೋರಾ ರಣ್ಯದಲ್ಲಿ ನೀರಿಗಾಗಿ ಪರಿತಪಿಸಿ ಹುಡುಕುತ್ತಿದ್ದಾಗ ಅವರಿಗೆ ಒಂದು ಸಣ್ಣ ಸರೋವರವೂ ಗೋಚರಿಸಿತು. ಆಗ ಅವರ ಸಂತೋಷ ಹೇಳತೀರದು. ಆ ಸರೋವರದ ನೀರು, ಈಶ್ವರನ ತಲೆಯ ಮೇಲಿಂದ ಇಳಿದು ಬಂದ ಗಂಗಾ ಜಲವೋ ಎಂಬಂತೆ ತಿಳಿಹಾಲಿನೋಪಾದಿಯಲ್ಲಿತ್ತು. ಆ ವರ್ತಕರೆಲ್ಲರೂ ಸಮೃದ್ಧವಾಗಿ ಜಲವನ್ನು ಕುಡಿದು ತಮ್ಮ ಬಾಯಾರಿಕೆಯನ್ನು ಹೋಗ ಲಾಡಿಸಿಕೊಂಡು ಅಡಿಗೆ ಮಾಡಲು ಅವರೊಡನೆ ಕರೆತಂದಿದ್ದ ಊಳಿಗದವರಿಗೆ ಆಜ್ಞಾಪಿಸಿ ಎಲ್ಲಾ ಶ್ರೇಷ್ಠವರ್ತಕರೂ ವಿಶ್ರಾಂತಿ ಪಡೆಯುತ್ತಿದ್ದರು.

ಊಳಿಗದವರು ಪಾತ್ರೆಗಳನ್ನು ತೊಳೆದು ನೀರು ತುಂಬಿದರು. ಆ ಮರದ ಕೆಳಗೆ ಒಂದು ಕಲ್ಲುಗುಂಡು ನೆಲದಲ್ಲಿ ಹೂತಿರುವುದು ಅವರಿಗೆ ಗೋಚರಿಸಿತು. ಅದರ ಜೊತೆಗೆ ಇನ್ನೆರಡು ಗುಂಡು ಜೋಡಿಸಿ ಪಾತ್ರೆ ಏರಿಸಿ ಒಲೆ ಹಚ್ಚಿದರು. ಆದರೆ ಒಲೆ ಉರಿದಂತೆಲ್ಲಾ ಬೆಂಕಿ ಆರುತ್ತಾ ಬಂತು. ಇದೇನೆಂದು ಪಾತ್ರೆಯನ್ನು ಪರೀಕ್ಷಿಸಿದರು. ಪಾತ್ರೆಯಲ್ಲಿ ತೂತು ಸಹ

ಇರಲಿಲ್ಲ. ಬೆಂಕಿ ಹಾಕಿದರೆ ಮೊದಲಿದ್ದ ಗುಂಡಿನಿಂದ ನೀರು ಜಿನುಗಿ ಬೆಂಕಿ ಆರುತ್ತಿರುವುದು ಅವರಿಗೆ ಗೋಚರಿಸಿತು. ಹಸಿವು ಜಾಸ್ತಿಯಾಗುತ್ತಿದ್ದುದರಿಂದ ಬೇರೆಯ ಕಡೆಗೆ ಒಲೆಯನ್ನು ಮಾಡಿಕೊಂಡು ಅಡಿಗೆ ಮಾಡಿದರು. ಈ ಮಧ್ಯೆ ನೀರು ಜಿನುಗುತ್ತಿದ್ದ ಗುಂಡಿನ ಸುತ್ತಲೂ ಒಬ್ಬಿಬ್ಬರು ಕಡ್ಡಿಯಿಂದ ಕೆದಕುತ್ತಾ ಬಂದರು. ಕೆದರಿ ಮಣ್ಣನ್ನು ಬಿಡಿಸಿದಂತೆಲ್ಲಾ ಅದು ಒಂದು ಲಿಂಗವಾಗಿರುವುದು ಗೋಚರಿಸಿತು. ಆಗ ಆ ವರ್ತಕರೆಲ್ಲರೂ ಸೇರಿ ಭಯ ಭಕ್ತಿಯಿಂದ ಆ ಲಿಂಗಕ್ಕೆ ಅಮೃತೇಶ್ವರನೆಂದು ಹೆಸರಿಟ್ಟು ಪೂಜಿಸಿ, ನೈವೇದ್ಯ–ಆರತಿಗಳನ್ನು ಮಾಡಿ ನಮಸ್ಕರಿಸಿ ತಾವೂ ಕುಳಿತು ಊಟೋಪಚಾರಗಳನ್ನು ಮುಗಿಸಿದರು ಅನಂತರ ಪದ್ಧತಿಯಂತೆ ಎಲೆ ಹಣ್ಣುಗಳನ್ನು ಹಿಡಿದು ಅಡಿಕೆಗಾಗಿ ಹೇರಿಗೆ ಕೈಹಾಕಿದರು. ಹೇರಿನಲ್ಲಿ ತಂದ ಅಡಿಕೆಯಲ್ಲಾ ಅಳಲೇಕಾಯಾಗಿವೆ. ಯಾರ ಹೇರು ತಡಕಿದರೂ ಅಳಲೇಕಾಯೇ ಆಗಿರುವುದನ್ನು ಕಂಡ ವರ್ತಕರು,ಅಡಿಕೆಗೆ ಧಾರಣೆ ಹೆಚ್ಚು, ಅಳಲೆಯ ಕಾಯಿಗೆ ಧಾರಣೆ ಕಡಿಮೆಯಾದುದರಿಂದ ಎಲ್ಲರೂ ದಿಗ್ಭ್ರಾಂತರಾಗಿ, ಇದು ಯಾರ ಮಾಯೆಯೋ ಎಂದು ಬೆಚ್ಚಿ ಬೆದರಿದರು. ಕಡೆಗೆ ಧೈರ್ಯದಿಂದ ಅಲ್ಲಿ ಗೋಚರಿಸಿದ ಲಿಂಗುವಿಗೆ, "ಸ್ವಾಮಿ, ನೀನು ಅಮೃತೇಶ್ವರನಲ್ಲ. ಅಳಲೇಶ್ವರ ನಮ್ಮ ಹೇರುಗಳು ಮೊದಲಿನಂತೆ ಅಡಿಕೆಯ ಹೇರುಗಳಾದರೆ, ಬಂದ ಲಾಭದಲ್ಲಿ ನಿನ್ನ ಗುಡಿಕಟ್ಟಿಸುತ್ತೇವೆ" ಎಂದು ಒಮ್ಮತದಿಂದ ಹರಸಿಕೊಂಡರು. ಆಗ ಅಳಲೆಯ ಕಾಯೆಲ್ಲವೂ ಎಂದಿನಂತೆ ಅಡಿಕೆಯಾದವು. ಎಲ್ಲರೂ ಆನಂದದಿಂದ ತಾಂಬೂಲ ಸವಿದು ಆ ಅಳಲೇಶ್ವರ ಲಿಂಗಕ್ಕೆ ತಮ್ಮ ಮುಂದಿನ ಪ್ರಯಾಣ ಮತ್ತು ವ್ಯಾಪಾರವೆಲ್ಲವೂ ಸುಗಮವಾಗಿ ನಡೆಯಲೆಂದು, ಭಯ–ಭಕ್ತಿಯಿಂದ ಪ್ರಾರ್ಥಿಸಿ, ನಮಸ್ಕರಿಸಿ ಹೇರುಗಳನ್ನು ಹೇರಿ ಮುಂದಕ್ಕೆ ಪ್ರಯಾಣ ಮಾಡಿದರು.

ಹಲವು ದಿನಗಳವರೆಗೆ ಪ್ರಯಾಣ ಮಾಡಿ ಸುಖವಾಗಿ ಮಧುರಾ ಪಟ್ಟಣವನ್ನು ಸೇರಿದರು ಅಡಕೆಯನ್ನೂ ಮಾರಿದರು. ಪ್ರತಿಯೊಬ್ಬರಿಗೂ ಐದರಷ್ಟು ಆರರಷ್ಟು ಲಾಭ ಸಿಕ್ಕಿತು. ಎಲ್ಲರೂ ಸಂತುಷ್ಟರಾಗಿ ಅಲ್ಲಿಂದಲೇ ಶಿಲ್ಪಿಗಳನ್ನೂ ಹಿಂದಿಟ್ಟುಕೊಂಡು ಆ ಅಳಲೇಶ್ವರ ಲಿಂಗದ ಬಳಿಗೆ ಬಂದು ಶಿವಾಲಯವನ್ನು ಕಟ್ಟಿಸಿ, ಗೋಪುರ ಪ್ರಾಕಾರಗಳನ್ನೂ ನಿರ್ಮಿಸಿದರು. ಪೂಜೆಗೆ ಅರ್ಚಕ

ನನ್ನು ನಿಯಮಿಸಿ ವಾದ್ಯ, ನೈವೇದ್ಯ ನಂದಾದೀಪಗಳ ಏರ್ಪಾಡು ಮಾಡಿ ತಾವೂ ಮನೆಗಳನ್ನು ಕಟ್ಟಿಕೊಂಡು ಅಲ್ಲೇ ನಿಂತರು. ಸುತ್ತಮುತ್ತಲಿನ ಕುಶಲ ಕಲೆಗಾರರೂ, ವರ್ತಕರೂ, ರೈತರೂ ಎಲ್ಲರೂ ಕೂಡಿ ಆ ಊರು ಎರಡು ಯೋಜನದಂತೆ ಬೆಳೆಯಿತು. ಆಗ ಆ ಗ್ರಾಮವು ಹರದ (ವಾಣಿಜ್ಯ ಖಣಜ) ಹಳ್ಳಿ (ಅಥವಾ ವಾಣಿಜ್ಯಪುರಿ) ಎಂದು ಹೆಸರಾಯಿತು. ಅದೇ ಲಿಂಗವು ಬೇಡಿ ದವರಿಗೆ ಬೇಡಿದುದನ್ನು ಕೊಡುತ್ತಾ ಅಮೃತಲಿಂಗೇಶ್ವರನೆಂದು ಪ್ರಸಿದ್ಧಿ ಪಡೆಯಿತು. ಅದರ ಬಂಗಾರದ ಕಲಶಗಳು ಬಹುದೂರದವರೆಗೆ ಹೊಳೆಯುತ್ತಾ ಇದು ಹರದನಹಳ್ಳಿಯಲ್ಲ, ನಾಗರಿಕರ ಪಳ್ಳಿ, ಸಂಪತ್ತಿನ ದಿಳ್ಳಿ, ಸಂತೋಷದ ಬಳ್ಳಿ ಎಂದು ಹೇಳುವಂತೆ ನಗುತ್ತಾ ನಿಂತು ಕೈಚಾಚಿ ಕರೆಯುತ್ತಿರುವವೋ ಎಂಬಂತೆ ಗೋಚರಿಸುತ್ತಿದ್ದವು.

ಈ ವರ್ತಕರ ಗುಂಪು ಹೆಚ್ಚಾಗಿ ಬೆಳೆದು ಸಮಯಾಚಾರಕ್ಕೆ ಜಂಗಮ ಮೂರ್ತಿ ಇಲ್ಲದುದನ್ನು ಮನಗಂಡು ಒಂದು ಮಠವನ್ನು ಕಟ್ಟಿಸಿ ಅದರಲ್ಲಿ ನಿರಂಜನ ವಂಶದವರಾದ ಅನಾದಿ ಗಣೇಶ್ವರರೆಂಬವರನ್ನು ಕರೆತಂದು ಪಟ್ಟ ಗಟ್ಟಿ ನಿಲ್ಲಿಸಿದರು. ಅವರ ಹದಿನೆಂಟನೆಯ ತಲೆಯ ಸ್ವಾಮಿಗಳು ತಪಸ್ವಿ ಗಳಾಗಿರಲು ಆ ಮಠಕ್ಕೆ ಅವರ ಹೆಸರಿನಿಂದ ಗೋಸಲ ಮಠವೆಂದು ಹೆಸರಾ ಯಿತು. ನಮ್ಮ ಕಥಾನಾಯಕನ ಕಾಲವಾದ ೧೫ನೇ ಶತಮಾನಕ್ಕೆ ಅಲ್ಲಿ ೧೮ನೇ ತಲೆಯ ಮಹಾತ್ಮ ಚನ್ನಬಸವ ದೇಶಿಕೇಂದ್ರರು ಅಧಿಕಾರಿಗಳಾಗಿದ್ದರು.

ಅದೇ ಗ್ರಾಮದಲ್ಲಿ ಮಲ್ಲಿಕಾರ್ಜುನಯ್ಯ ಜ್ಞಾನಾಂಗನೆಯೆಂಬ ದಂಪತಿಗಳಿ ದ್ದರು. ಸಮವಯಸ್ಸು, ಸಮರೂಪ ಸಮವರ್ತನೆ, ನಡೆನುಡಿ, ನಿಜ ನೀತಿ, ನ್ಯಾಯ ಸದಾಚಾರಗಳಲ್ಲಿ ಒಬ್ಬರಿಗಿಂತ ಒಬ್ಬರು ಅತಿಶಯರಾಗಿ ಎಡೆಬಿಡದೆ ಮೃದುನುಡಿಯ ಧ್ಯಾನದಲ್ಲಿ ಕಾಲಕಳೆಯುತ್ತಿರುವರು. ಅಂತಹ ದಂಪತಿಗಳಿಗೆ ಬಹುದಿನಗಳಾದರೂ ಮಕ್ಕಳಾಗಲಿಲ್ಲ. ನೆರೆಹೊರೆಯವರು ಹಂಗಿಸಹತ್ತಿದರು. ಆಗ ಆ ದಂಪತಿಗಳು ಬಹು ಚಿಂತಾಕ್ರಾಂತರಾದರು.

ಜ್ಞಾನಾಂಗನೆ— ನಾವಿನ್ನೆಂಥಾ ಪಾಪಿಗಳಿರಬಹುದು ?

ಮಲ್ಲಿಕಾರ್ಜುನ— ಪಾಪವಿಲ್ಲವೆಂದೇ ವ್ಯಸನಪಡುತ್ತಿದ್ದೇವಲ್ಲಾ.

ಜ್ಞಾನಾಂಗನೆ— ಪಾಪಗಳು ಪಾಪವಾದದ್ದಾವಾಗ ?

ಮಲ್ಲಿಕಾರ್ಜುನ— ಹೌದು, ಮಕ್ಕಳು ಸತ್ಪುತ್ರರಾದರೆ ಪಾಪ ಹೋಗುತ್ತೆ. ದುಷ್ಪುತ್ರರಾದರೆ ಪಾಪ ಬರುತ್ತೆ. ಅವರೂ ಪಾಪಿಗಳಾಗಿ ನಾವೂ ಪಾಪಿಗಳಾಗಬೇಕಾಗುತ್ತದೆ. ಒಂದು ಸಂತಾನವು ಹಿಂದಿನ ಇಪ್ಪತ್ತೊಂದು ತಲೆ, ಮುಂದಿನ ಇಪ್ಪತ್ತೊಂದು ತಲೆ ಹಾದಿ ಕಾಯುತ್ತಾಕುತಿರುತ್ತಾನೆ. ಅವನೇ ಅವರ ಸ್ವರ್ಗ, ನರಕಗಳ ನಿರ್ಮಾಪಕ.

ಜ್ಞಾನಾಂಗನೆ— ಅದು ದೈವೇಚ್ಛೆ, ನಮ್ಮ ಯತ್ನವೇನಿದೆ ?

ಮಲ್ಲಿಕಾರ್ಜುನ—ಲಿಂಗವ್ರತವು ಬ್ರಹ್ಮನ ಹಣೆಯ ಬರಹದ ಮೇಲೆ ಮೂರು ಗೆರೆ ವಿಭೂತಿಯನ್ನು ಬಳಿದಳಿಸಿ "ತ್ರಿಯಾಯುಷಂ-ತ್ರಿಯಾಯುಷಂ" ಎನ್ನುವಂಥಾದ್ದು. ಮಾನವನು ದೈವದ ಕೈಗೊಂಬೆಯಲ್ಲ. ಇದು ಕರ್ಮಭೂಮಿ. ಕರ್ಮದಿಂದ ತನ್ನ ದಾರಿಯನ್ನು ತಾನು ನಿರ್ಮಿಸಿ ಕೊಳ್ಳಬಲ್ಲ ಸಾಮಾರ್ಥ್ಯ ಮಾನವನಿಗಿದೆ. ಆದುದರಿಂದಲೇ "ದೈವಂ ಮಾನೀಷ ರೂಪೇಣ" ಎಂದರೆ ಮಾನವನು ಎರಡನೆಯ ದೈವ ಸ್ವರೂಪನು ಎಂದು ಹಿರಿಯರು ಹೇಳಿದ್ದಾರೆ.

ಜ್ಞಾನಾಂಗನೆ— ಹಾಗಾದರೆ ನಾವು ಮಕ್ಕಳಿಗಾಗಿ ಯಾವ ಯಾವ ವ್ರತ ವನ್ನು ಮಾಡಲಿಲ್ಲ ?

ಮಲ್ಲಿಕಾರ್ಜುನ— ಹಾಗಲ್ಲ, ಬೆಳಿಗ್ಗೆ ಎದ್ದು ಮನೆಯಲ್ಲಿ ಅಕ್ಕಿ, ಬೇಳೆ ಕೊಟ್ಟು ಹೋಗಿ ಮಧ್ಯಾಹ್ನ ಬಂದು ಹೋಳಿಗೆ ನೀಡೆಂದರೆ ಹೇಗೆ ಬರುತ್ತದೆ ? ಅಕ್ಕಿ, ಬೇಳೆಯಿಂದಾಗುವ ಅನ್ನ, ಸಾರು ಮಾತ್ರ ಸಿದ್ಧ ವಾಗಿರುತ್ತದೆ. ಹೋಳಿಗೆ ಬೇಕಿದ್ದರೆ ಹೋಳಿಗೆಗೆ ತಕ್ಕ ಸಾಮಾನು ಗಳನ್ನು ಕೊಟ್ಟು ಹೋಗಬೇಕಾಗಿತ್ತು. ಅಂದರೆ ಹಿಂದೆ ಮಾಡಿ ದುದನ್ನು ಈಗ ಉಣಬೇಕು. ಮುಂದೆ ಉಣಬೇಕಾದುದನ್ನು ಈಗ ಗಳಿಸಿಡಬೇಕು.

ಜ್ಞಾನಾಂಗನೆ— ಹಿಂದಿನದನ್ನು ಬದಲಾಯಿಸಲಾಗದ ಮೇಲೆ ಮೊದಲೆ ನೀವು ಹೇಳಿದ ವ್ರತವಿಶೇಷವೇನಾದ ಹಾಗಾಯಿತು ?

ಮಲ್ಲಿಕಾರ್ಜುನ— ಈಗ ನಾವು ಅದನ್ನು ಹಿಡಿದೇ ಕಾರ್ಯ ಗೆಲ್ಲಬೇಕು.

ಜ್ಞಾನಾಂಗನೆ— ಅದು ಹೇಗೆ ?

ಮಲ್ಲಿಕಾರ್ಜುನ— ಹೇಗೇನು, ಒಲೆ ಹಚ್ಚಿ ಜೇಳೆ ಬೇಯಲಿಲ್ಲವೆಂದರೇನರ್ಥ. ಬೇಳೆ ಬೇಯುವಷ್ಟು ಕಾವು ಒದಗಲಿಲ್ಲವೆಂದಲ್ಲವೆ ? ಅದರಂತೆ ನಮ್ಮ ನಿಷ್ಠೆಯು ಸಾಲದು. ಆದುದರಿಂದಲೇ ಸಫಲವಾಗಲಿಲ್ಲ.

ಜ್ಞಾನಾಂಗನೆ— ಸಫಲವಾಗುವ ದಾರಿ ?

ಮಲ್ಲಿಕಾರ್ಜುನ— ದಾರಿ ತೋರುತ್ತೇನೆ, ಬಾ ಏಳು.

ಎಂದು ಹೇಳುವನು. "ಹೊಳೆಯ ತನಕ ಓಟ–ದೊರೆಯ ತನಕ ದೂರು" ಎಂಬಂತೆ ಜ್ಞಾನಾಂಗನೆಯನ್ನು ಜೊತೆಯಲ್ಲಿ ಕರೆದುಕೊಂಡು ಮಲ್ಲಿಕಾರ್ಜುನ ದೇವರ ಮಠಕ್ಕೆ ಬರುವರು. ಸ್ವಾಮಿಗಳ ದರ್ಶನವಾಗುವದು. ಶುಭ್ರ ಮನಸ್ಸಿನಿಂದ ನಮಸ್ಕರಿಸಿ ತಮ್ಮ ಅಂತರಂಗವನ್ನು ವಿಶದಪಡಿಸುವರು. ಸ್ವಾಮಿಗಳು ಯೋಗದೃಷ್ಟಿಯಿಂದ ನೋಡಿ, ಇಲ್ಲಿ ನಿಮಗೆ ಮಕ್ಕಳ ಫಲವಿಲ್ಲ. ಆದರೆ ನನ್ನನ್ನು ಆಶ್ರಯಿಸಿ ಬಂದಿರುವ ನಿಮ್ಮನ್ನು ನಿರಾಶೆಗೊಳಿಸಲಾರೆ. ನಮ್ಮ ಮಠಕ್ಕೆ ತಕ್ಕ ವಟುವು ಬೇಕಾಗಿದೆ. ಇದು ನಿರಂಜನ ಸಂತತಿಯ ಪರಂಪರೆ. ನಿರಂಜನ ಜಂಗಮವು ಅಯೋನಿಜ. ಅದನ್ನು ಭೂಮಿಗೆ ಕರೆತರುವ ಶಕ್ತಿ ನಿಮ್ಮಲ್ಲಿದ್ದರೆ ಅದಕ್ಕೆ ದಾರಿ ತೋರಿಸಲು ಸಿದ್ಧನಾಗಿದ್ದೇನೆ.

ಮಲ್ಲಿಕಾರ್ಜುನ— (ಜ್ಞಾನಾಂಗನೆಯ ಮುಖ ನೋಡಿ) ಅಪ್ಪಣೆಯಾದರೆ ಹೆಣಗಾಡುವೆವು.

ಗುರುಗಳು— ಅರ್ಧ ಸಮ್ಮತಿಯು ಕಾರ್ಯಸಿದ್ಧಿಯ ಲಕ್ಷಣವಲ್ಲ.

ಮಲ್ಲಿಕಾರ್ಜುನ— ತಮ್ಮ ಆಶೀರ್ವಾದ ಬಲ ಒಂದಿದ್ದರೆ ಸಾಧಿಸುವೆವು.

ಗುರುಗಳು— ನೋಡಿ, ಇದು ಸಣ್ಣ ವಿಷಯವಲ್ಲ.

ಮಲ್ಲಿಕಾರ್ಜುನ— ವಿಷಯ ಬಂಡವಾಳವನ್ನು ಮನೋಭಾಂಡಕ್ಕೆ ತುಂಬಿ, ಕೃತಶಕ್ತಿಯನ್ನು ಕರುಣಿಸಿ.

ಗುರುಗಳು— "ತಸ್ಮಾತ್ ಸರ್ವಜ್ಞಾತ್ ಸರ್ವ ಶಕ್ತೇಃ ಪರಬ್ರಹ್ಮಣಸ್ಸಾಕ್ಷಾತ್ ಪ್ರಕೃತಿಃ" ಎಂಬ ಸೃಷ್ಟಿವಚನದಲ್ಲಿ ಪರಾತ್ಪರ ವಸ್ತುವು ಒಂದಿದೆ. ಅದೇ

ಶಿವತತ್ವ. ಅದು ಒಂದೇ ಅನಂತಕಾಲ ತಾನೇ ತಾನಾಗಿತ್ತು. ಅದಕ್ಕೆ ಸರ್ವಜ್ಞತ್ವ, ಸರ್ವಶಕ್ತಿತ್ವಗಳೆಂಬ ಎರಡು ಮಹಾಶಕ್ತಿಗಳಿವೆ. ಒಂದು ಸಮಯದಲ್ಲಿ ಅವೆರಡೂ ವಿಜೃಂಭಿಸಿದವು. ಆಗ ಆ ವಸ್ತುವಿನ ಐದು ಮುಖಗಳಲ್ಲೊಂದಾದ ಊರ್ಧ್ವಮುಖದಲ್ಲಿ ಆ ನಿರಂಜನ ಗಣಾಧೀಶ್ವರನ ಮೂರ್ತಿ ರೂಪುಗೊಂಡಿತು. ಇದು ನಿರಾಕಾರ ಪರಬ್ರಹ್ಮದ ಸಾಕಾರ ರೂಪು. ಇದು ಪ್ರಕೃತಿ ಮಾಯೆಗಿಂತ ಮುಂಚೆಯೇ ಆ ಶಿವತತ್ವದಲ್ಲಿದ್ದ ವಸ್ತು. ಅದಕ್ಕೆ ಅಲ್ಲೇ ಜನನ, ಅಲ್ಲೇ ಲಯ. ಅದು ಈ ಲೋಕದ ಮಾಯರಂಜನೆಗೊಳಗಾಗುವುದಿಲ್ಲವಾದುದರಿಂದ ಅದಕ್ಕೆ ನಿರಂಜನವೆಂದು ಹೆಸರು. ಈ ಮಾಯೆಯಲ್ಲಿರುವ ಅಶುದ್ಧ ಅಶಾಶ್ವತ ಸಾವು ರೂಪುಗಳಿಗೆ ಹಿಂದಿನ ಚಿತ್ಕಳೆ, ಚಿದ್ಬಿಂದು, ಚಿನ್ನಾದದ ಬಂಡವಾಳವದಕ್ಕೆ ಸ್ವಾಭಾವಿಕವಾದುದರಿಂದ ಆ ಪರಮಸುಖವನ್ನು ಬಿಟ್ಟು ಈ ವಿಲಯದುಃಖಕ್ಕೆ ಆಶೆಪಡುವುದೇ ಅಲ್ಲ. ಇದು ಲೀಲಾ ವಿನೋದಕ್ಕಾಗಿ ಜಗದ್ಧಿತಾರ್ಥವಾಗಿ ಭೂಮಿಗೆ ಬರುವುದಲ್ಲದೇ ದೇಹ ಭ್ರಮೆಯಿಂದ ಪಾಶ ವಿಶೇಷದಿಂದ ಬರುವುದಲ್ಲ. ಅದು ಮಹಾಜ್ಞಾನ ಚಿತ್ತಿನಲ್ಲಿ ಜನಿಸಿ, ಜ್ಞಾನಚಿತ್ತಿನಲ್ಲಿ ರಮಿಸಿ, ಅಲ್ಲೇ ಅಡಗುವುದು. ಅದರ ಶಕ್ತಿ ಅಪರಮಿತ. ಪ್ರಪಂಚವೆಲ್ಲವೂ ಅವನು ಆಗೆಂದರೆ ಆಗುವುದು, ಹೋಗೆಂದರೆ ಹೋಗುವುದು. ಆ ಅರಿವೇ ನೀನಾಗಿದ್ದೀಯೆ. ಆದ್ದರಿಂದ ನಿನ್ನಲ್ಲಿರುವ ಆ ಅಂಕುರವನ್ನು ಕುಡಿದಾಗಿಸು.

ಮಲ್ಲಿಕಾರ್ಜುನ— ಕೃತಾರ್ಥರಾದೆವು.

ಗುರುಗಳು— (ದಂಪತಿಗಳಿಬ್ಬರಿಗೂ ಮಂತ್ರವನ್ನುಪದೇಶಿಸಿ) ಈ ಮಂತ್ರವನ್ನು ಕೋಟಿ ಜಪಮಾಡಿದರೆ ಸಿದ್ಧಿಯಾಗುತ್ತದೆ. ಇದರೊಡನೆಯೇ ನಿಮ್ಮ ಇಷ್ಟಾರ್ಥವೂ ಸಿದ್ಧಿಯಾಗುತ್ತದೆ. ಶುಭಮಸ್ತು.

ಎಂದು ದಂಪತಿಗಳ ಮಂಡೆಯ ಮೇಲೆ ವರದ ಹಸ್ತವನ್ನಿಟ್ಟು ಹರಸಿ ಕಳುಹಿಸಿದರು. ದಂಪತಿಗಳು ಅಲ್ಲಿಂದ ಮನೆಗೆ ಬಂದು ಮನೆಯ ಕಾವಲಿನ ಏರ್ಪಾಡು ಮಾಡಿ ತಪೋವನಕ್ಕೆ ಹೊರಟರು.

ಹರದನಹಳ್ಳಿಯ ಉತ್ತರ ದಿಕ್ಕಿನಲ್ಲಿ ಒಂದು ಹೂ ತೋಟ. ಅದರಲ್ಲಿ ಸಜ್ಜಾದ ಮಂಟಪಗಳ ಸಾಲು. ಆ ವನದಲ್ಲಿ ಶುಭ್ರ ಜಲದಿಂದ ಶಾಂತವಾಗಿ ಹರಿಯುತ್ತಿರುವ ಪುಷ್ಕರಣೀ ನದಿಯಿಂದ ಕೂಡಿದ ಆ ಪರಿಶುದ್ಧವಾದ ಸ್ಥಳವೇ ತಮ್ಮ ತಪಸ್ಸಿನ ಸಿದ್ಧಿಗೆ ತಕ್ಕ ಸ್ಥಳವೆಂದು ಸತಿಪತಿಗಳಿಬ್ಬರೂ ನಿಶ್ಚಯಿಸಿ ಅಲ್ಲಿಗೆ ಬಂದರು. ಬರುವಾಗ—

ಜ್ಞಾನಾಂಗನೆ— ಶಕುನಗಳು ಶುಭಕರಗಳಾಗಿರುವವು.

ಮಲ್ಲಿಕಾರ್ಜುನ— ಹೌದೌದು, ಅಗೋ ವೃಷಭಧ್ವನಿ.

ಜ್ಞಾನಾಂಗನೆ— ಅಗೋ ಕಲಶ ಕನ್ನಡಿ.

ಮಲ್ಲಿಕಾರ್ಜುನ— ಅಲ್ಲಿ ನೋಡು, ಕರುವಿನೊಡನೆ ಹಸುವು ಬರುತ್ತಿದೆ.

ಜ್ಞಾನಾಂಗನೆ—ಅಗೋ ಶಿವಾಲಯದಲ್ಲಿ ಪಂಚಮಹಾವಾದ್ಯಗಳು ಮೊಳಗುತ್ತಿವೆ. ಶಿವಘೋ-ಶಿವಘೋ- ಈ ಶಸ್ತ್ರಾಸ್ತ್ರಗಳ ಬಾಧೆಗೆ ಸಿಕ್ಕದ ಮಗನಾಗಬೇಕು.

ಮಲ್ಲಿಕಾರ್ಜುನ— ಮಹಾತ್ಮನಿಂದಲೇ ಅದು ಸಾಧ್ಯ. ಬಯಸಿದರೆ ಬಯಸಿದ್ದಾಗುವ ಮಹಸೀಯರಿಂದಲೇ ಜಗದುಪಕಾರವು ಸಾಧ್ಯವಲ್ಲದೇ ಕರ್ಮಕೂಪದಲ್ಲಿ ಬಿದ್ದಿರುವನು ಜಗತ್ತನ್ನುದ್ಧರಿಸಲಾರ.

ಜ್ಞಾನಾಂಗನೆ— ಈ ಪರಧರ್ಮಾಂಧಕಾರದ ಹಾವಳಿ ನಾಶವಾಗುವುದು ಸಾಧ್ಯವೆ?

ಮಲ್ಲಿಕಾರ್ಜುನ— ಜ್ಞಾನ ನೇತ್ರದ ಬೆಳಕಿನಲ್ಲಿ ಅಂಧಕಾರವು ನಿಲ್ಲುವದಿಲ್ಲ.

ಜ್ಞಾನಾಂಗನೆ— ಈ ಶಸ್ತ್ರಾಸ್ತ್ರಗಳ ಭೀತಿಯೋ?

ಮಲ್ಲಿಕಾರ್ಜುನ— ಇವು ಹೇಡಿಯ ಸಾಧನಗಳು. ಜನರನ್ನೆದುರಿಸಿ ಅವರಲ್ಲಿದ್ದುದನ್ನು ಕಸಿದುಕೊಳ್ಳಲು ಈ ಆಯುಧಗಳನ್ನು ಉಪಯೋಗಿಸುತ್ತಿದ್ದಾರೆ. ಕರುಣರಸವಿಲ್ಲದ್ದರಿಂದ ಅಧಿಕಾರ ದರ್ಪದಿಂದ, ಸಮಯ ಬಂದರೆ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸಿಯೇ ಬಿಡುತ್ತಾರೆ. ಕೈಲಾಗದುದನ್ನು ಕತ್ತಿಯಿಂದ ಮಾಡಿ ಮುಗಿಸುತ್ತಾರೆ.

ಜ್ಞಾನಾಂಗನೆ— ಆದರೂ ಶಸ್ತ್ರಾಸ್ತ್ರಗಳು ದೇಹ ಘಾತಕಗಳೂ, ಪ್ರಾಣಹಾರಕಗಳೂ ಆಗಿವೆ.

ಮಲ್ಲಿಕಾರ್ಜುನ— ಅಹುದಾದರೂ ಶಸ್ತ್ರಬಲ-ದೇಹಬಲದಿಂದ ಇವರ ಹಾವಳಿಯನ್ನು ತಡೆಯಲಾಗುವದಿಲ್ಲ. ರಕ್ತ ಪಿಪಾಸಿಗಳ ರಾಕ್ಷಸ ನೃತ್ಯವು ಇವರಿಗೆ ಮೈಯೊಗ್ಗಿದೆ. ಇದು ಅಜ್ಞಾನದ ಆಚಾರ, ಇದು ತಿಳುವಳಿಕೆಗೆ ಜಗ್ಗುವದಲ್ಲ. ದರ್ಪದಿಂದಲೇ ಇದು ಮಣಿಯಬೇಕು. ದಬ್ಬಾಳಿಕೆ ಮಿತಿಮೀರಿದೆ.

ಜ್ಞಾನಾಂಗನೆ— ಈ ಬಲವಂತ ನುಂಗದ ತುತ್ತಾಗಿದೆಯಲ್ಲ.

ಮಲ್ಲಿಕಾರ್ಜುನ— ಇದು ಕಾಲದ ಮಹಿಮೆ.

ಜ್ಞಾನಾಂಗನೆ— ಇದಕ್ಕೆ ಪರಿಹಾರವೇ ಇಲ್ಲವೇ ? ಕತ್ತಲಿನಿಂದ ಬೆಳಕಿಗೆ ಹೋಗಲು ಸಾಧ್ಯವೇ ಇಲ್ಲವೆ ?

ಮಲ್ಲಿಕಾರ್ಜುನ— ಕತ್ತಲೂ ಶಾಶ್ವತವಲ್ಲ. ಬೆಳಕೂ ಶಾಶ್ವತವಲ್ಲ. ಕತ್ತಲಾದ ಮೇಲೆ ಬೆಳಕು; ಬೆಳಕಾದ ಮೇಲೆ ಕತ್ತಲು. ಕತ್ತಲೆಂದು ಕಳವಳಬೇಕಿಲ್ಲ. ಬೆಳಕೆಂದು ಬಳಲಿಕೆ ಬೇಕಿಲ್ಲ. ಪ್ರಪಂಚವೇ ದ್ವಂದ್ವಾತ್ಮಕ ತಲೆ-ಬಾಲ, ಕಷ್ಟ-ಸುಖ, ಆದಿ-ಅಂತ್ಯ, ಗಂಡು-ಹೆಣ್ಣು, ಜನನ-ಮರಣ, ಧರ್ಮ-ಕರ್ಮ, ಒಂದರ ನೆರಳು ಇನ್ನೊಂದು, ಒಂದಾದ ಮೇಲೆ ಇನ್ನೊಂದು ಬರಲೇಬೇಕು.

ಜ್ಞಾನಾಂಗನೆ— ಬರುತ್ತದೆಯೇ ?

ಮಲ್ಲಿಕಾರ್ಜುನ— ಬಂದೇ ಬರುತ್ತದೆ.

ಜ್ಞಾನಾಂಗನೆ— ಯಾವಾಗಲೋ ಏನೋ ?

ಮಲ್ಲಿಕಾರ್ಜುನ— ಬರುವಂತೆ ಮಾಡುವದು ನಮ್ಮ ಕೈಯಲ್ಲಿದೆ.

ಜ್ಞಾನಾಂಗನೆ— ಅದು ಹೇಗೆ ?

ಮಲ್ಲಿಕಾರ್ಜುನ— ಪ್ರಯತ್ನದಿಂದ, ದೃಢಸಂಕಲ್ಪದಿಂದ, ಸಾಧನೆಯಿಂದ.

ಜ್ಞಾನಾಂಗನೆ— ಹಾಗಾದರೆ, ಈ ಜಂಜಾಟಗಳೆಲ್ಲಾ ದರ್ಪದಿಂದ ಹತೋಟಿಗೆ ಬರುವವೆನ್ನುವಿರಾ ?

ಮಲ್ಲಿಕಾರ್ಜುನ— ಹೌದು, ಕತ್ತಿಯ ಎದುರಿಗೆ ಕತ್ತಿಯ ಶಕ್ತಿಯನ್ನು ಮೀರಿದ ಶಕ್ತಿಯು ಎದುರಿಗೆ ಬಿದ್ದಾಗ ಕತ್ತಿಯು ಕೆಳಕ್ಕೆ ಬಿದ್ದೇ ಬೀಳುವುದು. ಆಗ ಆ ಮಹಾಶಕ್ತಿಗೆ ವಿಜಯವಾಗುವುದು.

ಜ್ಞಾನಾಂಗನೆ— ಅಂತಹ ಶಕ್ತಿಯಾವುದು ? ಎಲ್ಲಿದೆ ?

ಮಲ್ಲಿಕಾರ್ಜುನ— ಇದೆ, ಭಾರತೀಯರು ತಪಸ್ವಿಗಳಲ್ಲವೆ ? ಅವರ ತಪಸಿದ್ಧಿಯಲ್ಲಿ ಅಷ್ಟಮಹಾಸಿದ್ಧಿಗಳಡಗಿವೆ. ಆ ಸಿದ್ಧಿಗಳಲ್ಲಿ ಅದ್ಭುತ ಶಕ್ತಿಯಿದೆ. ಅಗಸ್ತ್ಯರು ಸಮುದ್ರವನ್ನು ಕುಡಿದಿಲ್ಲವೇ ? ಪತಿವ್ರತೆಯರು ಸೂರ್ಯ-ಚಂದ್ರರನ್ನು ತಡೆದು ನಿಲ್ಲಿಸಿಲ್ಲವೆ ? ಜಹ್ನುಋಷಿಯು ಗಂಗೆಯನ್ನು ಆಪೋಶನ ಮಾಡಲಿಲ್ಲಿವೆ ? ಭಗೀರಥನು ದೇವಲೋಕದಿಂದ ಗಂಗೆಯನ್ನು ತರಲಿಲ್ಲವೇ ? ದೂರ್ವಾಸನು ಇಂದ್ರನ ಐಶ್ವರ್ಯವನ್ನು ಸಮುದ್ರದ ಪಾಲು ಮಾಡಲಿಲ್ಲವೆ ? ಆ ತಪಸ್ಸಿದ್ಧರು ನೆನೆದದ್ದು ಆಗುತ್ತೆ.

ಜ್ಞಾನಾಂಗನೆ— ಅಂಥ ಮಹಸೀಯನ ಅಗತ್ಯವಿದೆ ಈಗಿನ ಭಾರತಕ್ಕೆ. ಈ ಪ್ರಪೀಡಿತ ದೀನದಲಿತರಿಗೆ ಆ ಮಹಾವಿಭೂತಿಯ ಅಗತ್ಯವಿದೆ. ಈ ಕರ್ತವ್ಯ ದಿಗ್ಮೂಢರಿಗೆ ಆ ಬೆಳಕಿನ ಅಗತ್ಯವಿದೆ. ಅದಾವಾಗ ಬಂದೀತೋ, ಅದನ್ನಾವಾಗ ಕಂಡೇವೋ ?

ಮಲ್ಲಿಕಾರ್ಜುನ— ಬರಿ ಬಾಯಿಮಾತಿನಿಂದ ಹೊಟ್ಟೆ ತುಂಬುವುದಿಲ್ಲ ಸಾಮಗ್ರಿ ಜೋಡಿಸಿ, ಅಡಿಗೆ ಮಾಡಿ, ಊಟ ಮಾಡಿದಾಗ ಅಲ್ಲವೇ ಹಸಿವಡಗಿ, ಹೊಟ್ಟೆ ತುಂಬುವುದು.

ಜ್ಞಾನಾಂಗನೆ— ಹೌದೌದು, ಬೇಗ-ಬೇಗ ನಡೆಯಿರಿ.

ಮಲ್ಲಿಕಾರ್ಜುನ— ಅವಸರ ಪಡಬೇಡ, ಇದು ಸಾಮಾನ್ಯ ಕಾರ್ಯವಲ್ಲವೆಂದು ಗುರುಗಳು ಹೇಳಿದುದನ್ನು ಮರೆತೆಯಾ ? ಅವಸರದಿಂದ ಕೈಕಾಲು ಬಿದ್ದು ಹೋಗುವವು. ಒಂದು ಹೋಗಿ ಇನ್ನೊಂದಾಗಿ ಬಿಡಬಹುದು. "ಆತುರ

ಗಾರನಿಗೆ ಬುದ್ಧಿ ಮಂಕು" ಎಂಬ ಗಾದೆಯೇ ಇದೆಯಲ್ಲ. ಸಿಥಾಸವಾಗಿ ಆಲೋಚಿಸಿ ಶ್ರದ್ಧೆಯಿಂದ ನಮ್ಮ ಇಷ್ಟವು ಇಷ್ಟದಂತೆ ಸಿದ್ಧಿಯಾಗುವ ವರೆಗೂ ದುಡಿದರೆ ಆ ಕಾರ್ಯ ಸಿದ್ಧಿಸುತ್ತದೆ.

ಜ್ಞಾನಾಂಗನೆ— ಇದಕ್ಕೆ ಮೊದಲು ನಾವೇನು ಮಾಡಬೇಕು ?

ಮಲ್ಲಿಕಾರ್ಜುನ— ಮೊದಲು ಪ್ರಬಲವಾದ, ಅಚಲವಾದ ಸತ್ಸಂಕಲ್ಪವನ್ನು ಮಾಡಬೇಕು.

ಜ್ಞಾನಾಂಗನೆ— ಏನು ಸಂಕಲ್ಪವೆನ್ನುತ್ತೀರಿ ? ನಮಗೆ ಪುತ್ರವರ ದೊರೆಯ ಬೇಕೆಂದು ತಾನೇ ?

ಮಲ್ಲಿಕಾರ್ಜುನ— ಅಷ್ಟೇ ಅಲ್ಲ, ಅವನು ಅಂತಹ ಶಕ್ತನಲ್ಲದಿದ್ದರೆ ಮೃತ್ಯು ಮರಣಕ್ಕೆ ತುತ್ತಾಗಿ ದುಃಖದಾಯಕನಾಗಬಹುದು. ಗುರುಗಳ ವಚನವೂ ಸುಳ್ಳಾಗಬಹುದು.

ಜ್ಞಾನಾಂಗನೆ— ಅದಕ್ಕೆ....

ಮಲ್ಲಿಕಾರ್ಜುನ— ಜಗತ್ತನ್ನೆಲ್ಲಿ ಆಡಿಸಿ, ಕುಣಿಸುತ್ತಿರುವ ಮೂಲ ವಸ್ತುವೇ ಜಗತ್ತಿಗಿಳಿದು ಬರಬೇಕು. ಅದು ಜಗದ ಜಂಜಡರೂಪಿ ವಿಷಯ ಕಳಂಕ ವಿಲ್ಲದ ಪರಂಜ್ಯೋತಿ. ಅದಕ್ಕೆ ಅಗೋಚರವಾದ ಸರ್ವಜ್ಞತ್ವ, ಸರ್ವ ಕರ್ತೃತ್ವಗಳು ಸ್ವಭಾವತಃ ಸಹಾಯಕವಾಗಿವೆ.

ಜ್ಞಾನಾಂಗನೆ— ಹಾಗೆ ಅಗೋಚರವಾದ ಅಶರೀರ ಶಕ್ತಿಗಳಿರುವುದಕ್ಕೆ ಸಶರೀರ ವಾದ ಶಕ್ತಿಗಳೇ ಸಹಾಯಕವಾಗಿರುವುದು ಒಳ್ಳೆಯದಲ್ಲವೇ ?

ಮಲ್ಲಿಕಾರ್ಜುನ— (ನಕ್ಕು) ನೀನು ಸಶರೀರಿಯಾದುದರಿಂದ ಶರೀರಕ್ಕೆ ಇಷ್ಟೊಂದು ಮಹತ್ವ ಕೊಡುತ್ತಿದ್ದೀಯ.

ಜ್ಞಾನಾಂಗನೆ— ಶರೀರವಿಲ್ಲದೆ ಏನು ತಾನೆ ಮಾಡಲು ಸಾಧ್ಯವಿದೆ ?

ಮಲ್ಲಿಕಾರ್ಜುನ— ಬೆಂಕಿಗೆ ಶರೀರವಿದೆಯೇ ? ಪ್ರಪಂಚವನ್ನೆಲ್ಲಾ ಶೋಷಿ ಸುವುದಲ್ಲವೇ ? ನೀರಿಗೆ ಕೈಯಿದೆಯೇ ? ಪ್ರಪಂಚವನ್ನೆಲ್ಲಾ ಪೋಷಿಸು ವುದಿಲ್ಲವೇ ? ಗಾಳಿಗೆ ಕಾಲಿದೆಯೇ ? ಜಗತ್ತಿನಲ್ಲೆಲ್ಲಾ ಓಡಾಡು ತ್ತಿಲ್ಲವೆ ?

ಜ್ಞಾನಾಂಗನೆ— ನೀವು ಹೇಳುತ್ತಿರುವುದೆಲ್ಲವೂ ದೇವತೆಗಳಾದ ಅಗ್ನಿ, ಇಂದ್ರ, ವಾಯುಗಳಿಗೆ ಹೋಲಿಸಿದ್ದು. ಅದರಲ್ಲೂ ಸಹ ವಾಯುವಿಲ್ಲದ ಅಗ್ನಿ ದಹಿಸಲಾರದು, ಅಗ್ನಿಯಿಲ್ಲದೆ ಜಲೋತ್ಪತ್ತಿಯಾಗದು. ಹೀಗೆ ಎಲ್ಲ ಕಾರ್ಯವೂ ಶರೀರದಿಂದಲೇ ನಡೆಯುತ್ತದೆ.

ಮಲ್ಲಿಕಾರ್ಜುನ— ನೀನು ಎಲ್ಲವನ್ನೂ ಶರೀರದಿಂದಲೇ ಅಳೆಯುತ್ತಿದ್ದೀಯೆ. ಶರೀರಕ್ಕೂ ಈ ಆತ್ಮನೇ ಚೇತನ. ಅವನಿಲ್ಲದ ಶರೀರ ಮರದ ತುಂಡು, ಮೃತಕಳೇಬರ. ಏಳಲಾರದು, ಕಣ್ಣು ಬಿಡಲಾರದು, ಮಾತನಾಡ ಲಾರದು, ಕೇಳಲಾರದು, ಉಸಿರಾಡಲಾರದು, ಏನೇನೂ ಮಾಡಲಾರದು. ಈ ಶಕ್ತಿಗಳು ಆ ಮಹಾಪುರುಷನ ಶರೀರವನ್ನೇ ಆಶ್ರಯಿಸಿ ಅವನ ಆಜ್ಞಾಪಾಲಕರಾಗಿ ಕೆಲಸ ಮಾಡುವವು. ಆ ಮಹಾಪುರುಷನು ಅವಿಲ್ಲದಿದ್ದರೂ ಸಂಕಲ್ಪ ಮಾತ್ರದಿಂದ ಕೇವಲ ತನ್ನಿಚ್ಛೆಯಿಂದಲೇ ಬೇಕಾದುದನ್ನೆಲ್ಲಾ ಮಾಡಬಲ್ಲನು. ಅವನು ಆಗೆಂದುದು ಆಗುತ್ತದೆ. ಹೋಗೆಂದುದು ಹೋಗುತ್ತದೆ. ಇವನ ಸಂಕಲ್ಪವೇ ಜಗದುತ್ಪತ್ತಿ. ವಿಕಲ್ಪವೇ ಪ್ರಳಯ.

ಜ್ಞಾನಾಂಗನೆ— (ನಗುವಳು)

ಮಲ್ಲಿಕಾರ್ಜುನ— ಏನದು ?

ಜ್ಞಾನಾಂಗನೆ— ಇಂತಹ ಸಹಾಯವಿರುವಾಗ ಆತನೂ ಸಿದ್ಧಪುರುಷನಾಗಿರ ಬೇಕು. ಹುಚ್ಚನ ಕೈಗೆ ಚಂದ್ರಾಯುಧ ಸಿಗುವುದು ಅಪಾಯಕಾರಿ ಎನಿಸುತ್ತದೆ.

ಮಲ್ಲಿಕಾರ್ಜುನ— ಹೌದೌದು, ನಿನ್ನ ಊಹೆ ಅಕ್ಷರಶಃ ಸತ್ಯ. ಆದುದರಿಂದಲೇ ಗುರುಗಳು ಆ ನಿರಂಜನ ವಂಶದ ಕುಡಿಯೇ ಇದಕ್ಕೆ ತಕ್ಕುದು, ಅದನ್ನು ಕರೆತರುವುದು ಸಾಮಾನ್ಯವಲ್ಲವೆಂದದ್ದು.

ಜ್ಞಾನಾಂಗನೆ— ನಿರಂಜನ ವಂಶವೆಂದರೆ — ನಮ್ಮ ಹಾಗೆ ಮಾನವರೇ ಅಲ್ಲವೆ ?

ಮಲ್ಲಿಕಾರ್ಜುನ— ಮಾನವಾಕಾರವೇ ಆದರೂ ವಸ್ತು ಅದಲ್ಲ. ನಮ್ಮಲ್ಲಿರುವ ವಸ್ತು ಜೀವಾತ್ಮ. ಇವನು ಆ ಶಿವತತ್ತ್ವದಿಂದ ಏಳನೆಯ ತಲೆಯವನು. ಮಾಯಾ ಮೋಹಗಳಿಗೆ ಒಳಗಾದವನು. ಅವರದು ಕೇವಲ ಶಿವನ ತತ್ತ್ವವೇ. ಅದು ಮಾಯೆಗಿಂತಲೂ ಆಚಿನದು. ಅದಕ್ಕೆ ಅನೀತಿ, ಅಜ್ಞಾನ, ಸೋಲು ಎಂಬುದಿಲ್ಲವೇ ಇಲ್ಲ. ಅವನ ರೂಪು ಅಂತಶ್ಚಕ್ಷುವಿಗೆ ಮಾತ್ರ ಗೋಚರಿಸುವಂಥದು. ಈ ಹೊರಗಿನ ಕಣ್ಣಿಗೆ ಮನುಷ್ಯಾಕಾರ ಮಾತ್ರಕಾಣುವುದು

ಜ್ಞಾನಾಂಗನೆ— ಆ ಅಂತಶ್ಚಕ್ಷುವು ವಿಕಾಸವಾಗುವುದು ಹೇಗೆ ?

ಮಲ್ಲಿಕಾರ್ಜುನ— ಅದೇ ನಮ್ಮ ತಪಸ್ಸಿನ ಮುಖ್ಯೋದ್ದೇಶ. ಪ್ರಾಣವಾಯುವಿನ ಸುಳುಹನ್ನನುಸರಿಸಿ ಮನಸ್ಸನ್ನು ಸುಷುಮ್ನ ನಾಡಿಗೆ ಸೇರಿಸಿದರೆ ಒಳಗೆ ಜ್ಞಾನಚಕ್ಷುವು ಅರಳುತ್ತದೆ. ಅಲ್ಲಿಂದ ಷೋಡಶಾಧಾರ ಸ್ಥಾನಗಳನ್ನು ಹೊಕ್ಕು ಶೋಧಿಸುತ್ತಾ ಬಂದರೆ ಸಿದ್ಧಾಂತ ರಹಸ್ಯವು ವೇದ್ಯವಾಗುತ್ತದೆ. ಅಂತಹ ಪಿಂಡಗಳೆರಡೂ ಒಂದೇ ಆದುದರಿಂದ ಹೊರಗಿನ ವಿಷಯಗಳೆಲ್ಲವೂ ಒಳಗೆ ಕಾಣುತ್ತವೆ.

ಜ್ಞಾನಾಂಗನೆ— ಹಾಗಾದರೆ ಈ ಗುರುಗಳ ಮಂತ್ರದ್ದೇನೂ ಕೆಲಸವಿಲ್ಲ.

ಮಲ್ಲಿಕಾರ್ಜುನ— ಅದು ನಾವೆಗೆ ಹುಟ್ಟು ಇದ್ದ ಹಾಗೆ. ಮನಸ್ಸನ್ನು ಮುಂದಕ್ಕೆ ನಡೆಯಿಸಿ ಉದ್ದಿಷ್ಟ ಸ್ಥಳವನ್ನು ಸೇರಿಸುತ್ತದೆ. ನಮ್ಮ ಸಂಕಲ್ಪವನ್ನು ಮರೆಯದಂತೆ ಜ್ಞಾಪಿಸುತ್ತದೆ. ಹರಿದಾಡುವ ಮನಸ್ಸು ತುಡುಗು ಪಶುವಿದ್ದಂತೆ. ಅದನ್ನು ಕಟ್ಟುವ ಗೂಟದಂತಿದೆ ಈ ಮಂತ್ರ. ಈ ಮಂತ್ರವೇ ನಮಗೆ ಸಿದ್ಧಿಯ ದೀವಟಿಗೆ. ಇನ್ನೂ ಹೇಳುತ್ತಿದ್ದರೆ ಕೇಳುತ್ತಿದ್ದರೆ ಮುಗಿಯುವುದಿಲ್ಲ. ಸಾಧನೆ ಮಾಡೋಣ, ಸಿದ್ಧಿ ಪಡೆಯೋಣ. ಇದೇ ನಮ್ಮ ಸಾಧನೆಗೆ ತಕ್ಕ ಗರಡಿ.

ಎಂದು ಹೂವಿನ ತೋಟದ ಒಳಹೊಕ್ಕರು ಅಲ್ಲಿದ್ದ ಮಂಟಪವನ್ನು ಚೊಕ್ಕಟ ಮಾಡಿ ಕಂದಮೂಲ, ಫಲಪುಷ್ಪ ಜಲಗಳನ್ನು ಸಂಗ್ರಹಿಸಿ ಮಿಂದು ಮಡಿಯುಟ್ಟು ಆನಂದದಿಂದ ಶಿವಾರ್ಚನೆ ಮಾಡಿ ಮಂತ್ರ ಜಪದಲ್ಲಿ

ಲೀನರಾದರು. ಮೊದಮೊದಲು ಒಂದೇ ಊಟದಲ್ಲಿದ್ದರು. ಬರುಬರುತ್ತಾ ಫಲಹಾರಕ್ಕೆ ನಿಂತರು. ಕ್ರಮವಾಗಿ ಪರ್ಣಾಹಾರಕ್ಕಿಳಿದರು. ಕಡೆಕಡೆಗೆ ಗಾಳಿಯನ್ನೇ ಆಹಾರವನ್ನಾಗಿ ಮಾಡಿಕೊಂಡು ತಪಸ್ಸಿದ್ಧಿಯ ಅಂತರ್ಮುಖಿ ಗಳಾದರು. ಅಂತರಂಗದಲ್ಲಿ ನವಚಕ್ರಗಳನ್ನು ಶೋಧಿಸಿ ತ್ರಿಕೂಟದಲ್ಲಿ ನಿಂತರು. ಆ ಚಿದ್ವಸ್ತುವಿನ ಸಾಕ್ಷಾತ್ಕಾರದಿಂದ ಮೈ ಬೆವತು ರೋಮಾಂಚನಗೊಂಡು ಪಂಚೇಂದ್ರಿಯನಷ್ಟವಾಗಿ ತಾವೇ ತಾವಾದರು.

ಮಂತ್ರ ಮಹಿಮೆಯಿಂದ ಆ ವಸ್ತುವಿನ ವಿಸ್ತಾರವನ್ನಡಗಿಸಿ ಪಂಚ ಬ್ರಹ್ಮಮೂರ್ತಿಯನ್ನಾಗಿ ಮಾಡಿದರು. ಆ ಮೂರ್ತಿಯನ್ನು ಅಮೂರ್ತನ ನ್ನಾಗಿ ಮಾಡಿ ಕೇವಲ ಚಿತ್ಪ್ರಭೆಯನ್ನಾಗಿ ಮಾಡಿದರು. ಹೀಗೆ ಶಿವಲಿಂಗ ಶಿವತತ್ವಗಳಲ್ಲಿ ಅನುಭವ ಸಿದ್ಧರಾದರು. ಗುರುಕರುಣವಾದ ಮಹಾ ಮಂತ್ರ ದಿಂದ ಪುನಃ ಲಿಂಗರೂಪದಲ್ಲಿ ಶಿವರೂಪವನ್ನು ಆಹ್ವಾನಿಸತೊಡಗಿದರು. ಒಂದೆರಡು ಮೂರು ನಾಲ್ಕೈದಂಗಗಳು ಸಿದ್ಧವಾದವು. ಪಂಚಬ್ರಹ್ಮ ಮೂರ್ತಿಯು ಸಾಕಾರವಾಗಿ ಪಂಚಮುಖ–ತ್ರಿನೇತ್ರ-ದಶಭುಜ-ಗಂಗೆ–ಗೌರಿ ಚಂದ್ರಕಲೆ–ಉರಗಭೂಷಣ-ಶೂಲ-ಡಮರುಗ-ವರದಾಭಯ ಹಸ್ತಗಳುಳ್ಳ ವನಾಗಿ ನಂದಿಯನ್ನೇರಿ ಪರೋಕ್ಷದಲ್ಲಿ ಪ್ರತ್ಯಕ್ಷನಾದನು. ಯಥೋಚಿತ ಉಪಚಾರಗಳನ್ನು ಮಾಡಿದರು.

ಶಿವ— ಸಂತುಷ್ಟನಾದೆನು. ನಿಮ್ಮಿಷ್ಟವೇನು ?

ಮಲ್ಲಿಕಾರ್ಜುನ ಮತ್ತು ಜ್ಞಾನಾಂಗನೆ— ರಾಕ್ಷಸಶಕ್ತಿಯು ಬೆಳೆದು,ಆಯುಧವೇ ಕಡೆಯ ತೀರ್ಮಾನವಾಗಿದೆ ಪ್ರಭೋ. ಭಾರತದಲ್ಲಿ ಧರ್ಮವು ಮಾಯ ವಾಗಿದೆ. ಗೋವಧೆ ಹೆಚ್ಚಿದೆ. ಸತಿಯರ ಮಾನರಕ್ಷಣೆ, ಪ್ರಜೆಗಳ ಪ್ರಾಣ ಧನಗಳ ರಕ್ಷಣೆ ಕಷ್ಟವಾಗಿದೆ. ಇದನ್ನು ಮೀರಿ ನಿಲ್ಲುವ ಆತ್ಮಶಕ್ತಿ ಪೂರ್ಣವಾಗಿ ಭಾರತಮಾತೆಯನ್ನು ಈ ಅಂಧಕಾರದಿಂದ ದಿವ್ಯ ಪ್ರಭೆಗೆ ಕರೆತರತಕ್ಕ ಸಿದ್ಧಪುರುಷನನ್ನು ಭೂಮಿಗೆ ಕಳಿಸಿಕೊಟ್ಟು ದೀನದಲಿತರ ಆರ್ತನಾದವನ್ನು ಅಡಗಿಸಿ, ಆನಂದ ಧ್ವನಿಗೂಡಿಸಬೇಕು. ಅವನ ಬಾಲ್ಯ ಪೋಷಣೆಯ ಭಾರ ನಮ್ಮದಾಗಿರಬೇಕು.

ಶಿವ— ಇದರಲ್ಲಿ ನಿಮ್ಮ ಸ್ವಾರ್ಥವೇನು ?

ಮಲ್ಲಿಕಾರ್ಜುನ ಮತ್ತು ಜ್ಞಾನಾಂಗನೆ— ಲೋಕ ಕಲ್ಯಾಣವೇ ನಮ್ಮ ಕಲ್ಯಾಣ. ಶಾಂತವಾಗಿರುವ ದೇಶದಲ್ಲಿ ನಾವೂ ಶಾಂತರಾಗಿರಬಹುದು. ಲೋಕದಲ್ಲಿ ಪ್ರಮುಖರಾದ ರಾಜರು ಇಲ್ಲವಾದರು. ಹೊರಗಿನವರ ಆಡಳಿತದಿಂದ ಪ್ರಜೆಗಳು ಬಳಲಿ ಬೆಂಡಾಗಿ ಜೀವಶ್ಯವಗಳಾಗಿದ್ದಾರೆ. ಈ ಪ್ರಜಾ ಕೋಟಿಯ ನಗುಮುಖವನ್ನು ಕಾಣುವುದು, ಭಾರತಮಾತೆಯ ಧರ್ಮಾವತಾರವನ್ನು ನೋಡುವುದು ನಮ್ಮ ಸ್ವಾರ್ಥ.

ಶಿವ— ಹೊರಗಿನವರೂ ಮನುಷ್ಯರೆ ತಾನೇ ?

ಮಲ್ಲಿಕಾರ್ಜುನ— ಇರಬಹುದು; ರೂಪಿನಲ್ಲಿ ಮನುಷ್ಯರೇ ಅಂತರಂಗದಲ್ಲಿ ಹುಲಿಗಳು, ಸಿಂಹಗಳು, ಕರಡಿಗಳು. ಭಾರತದ ಧರ್ಮಸೂಕ್ಷ್ಮದ ಪರಿಚಯ ಅವರಿಗಿಲ್ಲ. ಮರುಭೂಮಿಗಳಲ್ಲಿದ್ದು ಬಂದವರು. ಗೋಹತ್ಯ, ನರಹತ್ಯ, ಊರುಗಳಿಗೆ ಬೆಂಕಿ ಹಚ್ಚುವುದು, ಹೆಂಗಸರ ಮಾನಭಂಗ ಮಾಡುವುದು, ಮನೆ ಮನೆ ದೋಚುವುದು, ದೇವಾಲಯಗಳನ್ನು ಕೆಡಹುವುದು, ಮೂರ್ತಿಗಳನ್ನು ಒಡೆಯುವುದು, ಸಣ್ಣ ಪುಟ್ಟ ತಪ್ಪಿಗೆ ಕೈಕಾಲು ಕತ್ತರಿಸುವುದು, ಕಣ್ಣು ಕೀಳಿಸುವುದು ಇವೇ ಅವರಸಾಮಾನ್ಯ ಕರ್ಮವಾಗಿದೆ. ಅವರಿಗೆ ದೇಶ ಕಾಲ ಪರಿಸ್ಥಿತಿಯ ಪಕ್ವವನ್ನರಿಯದ ಅಧಿಕಾರ ದರ್ಪ, ಹಣದ ಹಸಿವು.

ಶಿವ— ಹಿಂದಿನ ಮಹಾ ಮಹಾ ಪ್ರಯತ್ನಗಳೆಲ್ಲವೂ ಲೋಕೋದ್ಧಾರಕ್ಕಾಗಿಯೇ ನಡೆದಿವೆಯಾದರೂ, ಅವು ತಾತ್ಕಾಲಿಕ ಫಲಪ್ರದಗಳಾದವೇ ಹೊರತು ಶಾಶ್ವತವಾಗಿ ನಿಲ್ಲಲಿಲ್ಲ. ಜನರ ಅಜ್ಞಾನ ಪ್ರವಾಹ ರೂಪವಾದದ್ದು, ನಿಮ್ಮ ಇಷ್ಟದಂತೆಯೆ ಆಗಲಿ. ತುಕ್ಕುಹಿಡಿದಿರುವ ಕತ್ತಿಯನ್ನು ಸ್ವಲ್ಪ ಮಸೆದರೆ ಮಿಂಚೀತು.

ಮಲ್ಲಿಕಾರ್ಜುನ ಮತ್ತು ಜ್ಞಾನಾಂಗನೆ— ಕೃತಾರ್ಥರಾದೆವು (ನಮಸ್ಕರಿಸುವರು.)

ವರದ ಹಸ್ತವನ್ನು ಅವರ ತಲೆಯಮೇಲಿಟ್ಟು ಶಿವನು ಅಗೋಚರನಾಗುವನು.

ಅಂತರಂಗದಲ್ಲಿ ಯೋಗನಿದ್ರೆಯಲ್ಲಿ ಶಿವದರ್ಶನವೆಂಬ ಕನಸಾಯಿತು. ಅಭಯವರ ದೊರೆಯಿತು. ಕನಸು ಬಂದ ಮೇಲೆ ನಿದ್ರೆ ಹರಿದು ಎಚ್ಚರವಾಗುವಂತೆ ಸ್ಥೂಲಶರೀರಾಭಿಮಾನವು ಬಂದಿತು. ಮುಚ್ಚಿದ ಕಣ್ಣು ತೆರೆದರು. ಎದುರು ಬದರಿಗೆ ಕೂತಿದ್ದ ಇಬ್ಬರು ಒಂದೇ ಬಾರಿ ಕಣ್ಣು ಬಿಟ್ಟು ಪರಸ್ಪರ ನೋಡುತ್ತಾರೆ ಅವರ ಮಧ್ಯದಲ್ಲಿ ಯೋಗಮುಖದಲ್ಲಿ ಕಾಣಿಸಿದ ಆನಂದ ಮೂರ್ತಿಯೇ ಶಿಶುರೂಪವನ್ನು ಧರಿಸಿ ಬಾಲಕನಾಗಿ ಕಾಣಿಸಿತು.

ಶ್ರೀ ಸಿದ್ಧಲಿಂಗೇಶ್ವರರ ಬಾಲ್ಯ

ಅಂತರಂಗದಲ್ಲಿ ಕೊಟ್ಟ ಶಿವನ ವರವು ತಕ್ಷಣ ಸಿದ್ಧಿಸಿ ಶಿಶುವಾಗಿರುವು ದನ್ನು ಕಂಡು ಆನಂದಿಸಿದರು. ಮಗುವನ್ನು ಮುದ್ದಾಡಿದರು. ಜ್ಞಾನಾಂಬೆಯ ಎದೆಯಲ್ಲಿ ಹಾಲು ಚಿಮ್ಮಲು ಮಗುವಿಗೆ ಕುಡಿಸಿದಳು. ಆ ಮಗುವಿಗೆ ಹಣೆಯಲ್ಲಿ ಭಸಿತ, ಕೊರಳಲ್ಲಿ ರುದ್ರಾಕ್ಷಿ, ಕಂಠದಲ್ಲಿ ಶಿವಲಿಂಗ, ಎರಡು ಭುಜ ಗಳಲ್ಲಿ ತ್ರಿಶೂಲ, ಡಮರುಗದ ರೇಖೆ, ಹಸ್ತಗಳಲ್ಲಿ ಅಭಯ ವರದ ಪದ್ಮ ವೃಷಭರೇಖೆಗಳು, ಮುಂಗೈ ಕಂಕಣದಲ್ಲಿ ನಾಗರೇಖೆ, ಪಾದದಲ್ಲಿ ಜಂಗು ರೇಖೆಗಳುಳ್ಳದ್ದಾಗಿ ಎರಡು ಕೈಗಳುಳ್ಳ ವಿಷ್ಣುವಿನಂತೆ, ಒಂದು ಮುಖವುಳ್ಳ ಬ್ರಹ್ಮನಂತೆ, ಉರಿಗಣ್ಣಿಲ್ಲದ ರುದ್ರನಂತೆ, ತ್ರಿಗುಣಗರ್ಭದ ಓಂಕಾರರೂಪಿ ನಂತೆ ಕಾಣಿಸಿತು. ಜಗತ್ತನ್ನು ತುಂಬಿರುವ ಪಾಪತಮೋರಾಶಿಯನ್ನು ಓಡಿಸಿ ಬೆಳಗುವ ನನ್ನ ಗುರುವಾದ ಶಂಭುಲಿಂಗನನ್ನು ಕಾಣಬೇಕೆಂದು ಬಂದವನಂತೆ ಸೂರ್ಯನುದಯಿಸಿದನು. ಭೂದೇವಿಯೆಂಬ ಶಿವಭಕ್ತೆಯು ತಲೆಯಲ್ಲಿ ಆರುತಿಯನ್ನು ಹೊತ್ತು ಆ ಶಿಶುವಿಗೆ ಬೆಳಗುತ್ತಿರುವಂತೆ ಉದ ಯಾದ್ರಿಯಲ್ಲಿ ಸೂರ್ಯನು ಬೆಳಗಿದನು. ಆ ಸೂರ್ಯನು ಬಂದು ತನ್ನ ಸಹಸ್ರಕರಗಳಿಂದ ಶಿವಶಿಶುವಿನ ಚರಣಗಳಿಗೆ ನಮಿಸಲು, ಹರನು ದೊಡ್ಡವ

ನಾಗೆಂದು ಹರಸಿದಂತೆ ಸೂರ್ಯಬಿಂಬವು ಬೆಳೆಯುತ್ತಿತ್ತು. ಈ ದಂಪತಿಗಳು ಆ ಮಗುವನ್ನು ಕುರುಡನು ಕಂಡ ಬೆಳಕಿನಂತೆ, ದರಿದ್ರನು ಕಂಡ ನಿಧಿಯಂತೆ ಕಚ್ಚಿ ಮುದ್ದಾಡುತ್ತಿರುವಾಗ ಆ ಮಗುವು "ಶಿವಶರಣರೆಂದು ಮೆಚ್ಚಿ ನಿಮ್ಮಿಷ್ಟದಂತೆ ಬಾಲಕನಾಗಿ ಬಂದಿದ್ದೇನೆ. ನನ್ನನ್ನು ಮನೆಗೆ ಕರೆದುಕೊಂಡು ನಡೆಯಿರಿ" ಎಂದಿತು. ಆಗಲೂ ಶರಣದಂಪತಿಗಳು ಆಶ್ಚರ್ಯಪಟ್ಟು ಎಚ್ಚರ ಗೊಂಡು ಲಗುಬಗೆಯಿಂದ ಸನ್ನದ್ಧರಾದರು. ಮಲ್ಲಿಕಾರ್ಜುನನು ಹೂಗಳನ್ನು ಕಿತ್ತುತಂದು ಜ್ಞಾನಾಂಗನೆಯ ಮಡಿಲಿಗೆ ತುಂಬಿ ಅದರಲ್ಲಿ ಮಗುವನ್ನು ಮಲ ಗಿಸಿ ಮನೆಯಕಡೆ ತಿರುಗಿದರು. ದೇವತೆಗಳು ಹೂಮಳೆಗರೆದರು.

ಒಂದೆರಡು ಹೆಜ್ಜೆಯಿಡುವುದರೊಳಗಾಗಿ ನಿರಂಜನ ಸಿದ್ಧನು ವನದಿಂದ ಮನೆಗೆ ಬರುವನೆಂದು ಕೈಲಾಸದಲ್ಲ ದೇವದುಂದುಭಿಯು ಮೊಳಗುವಂತೆ ಗಂಭೀರವಾದ ಸಿಂಹಘರ್ಜನೆಯು ಕೇಳಿಬಂದಿತು. ಇದೇನೆಂದು ದಂಪತಿಗಳು ಮಗುವನ್ನು ಮಧ್ಯಮಾಡಿಕೊಂಡು ಶಿವನನ್ನು ಧ್ಯಾನಿಸುತ್ತಾ ಸುತ್ತಮುತ್ತಲೂ ನೋಡಿದರು. ಬಿರುಗಾಳಿ ಬೀಸಿ ಕೆಂಧೂಳೇಳುತ್ತಿದೆ, ದೂರದಲ್ಲಿ ಆನೆಯೊಂದು ಆರ್ಭಟಿಸುತ್ತಾ ಬೆನ್ನಟ್ಟಿ ಬರುತ್ತಿರುವ ವಜ್ರಕ್ಕೆ (ಸಿಡಿಲು ವಜ್ರಾಯುಧ) ಹೆದರಿ ಓಡಿಬರುತ್ತಿರುವ ಬೆಟ್ಟದಂತೆ ಓಡೋಡಿ ಬರುತ್ತಿದೆ. ಬಂದ ಆನೆಯು ಇವರನ್ನು ಪ್ರದಕ್ಷಿಣೆ ಮಾಡಿ ನಮಿಸಿ ನಡುಗುತ್ತಾ ಇವರ ಮರೆಯಲ್ಲಿ ನಿಂತಿತು. ಅದರ ಬೆನ್ನಟ್ಟಿ ಉರಿಗಣ್ಣು ಬಿಡುತ್ತಾ ವಜ್ರದಂತಿರುವ ಕೋರೆ ಹಲ್ಲುಗಳನ್ನು ತೋರುತ್ತಾ ಮೊನೆಯಾದ ಉಗುರುಗಳಿಂದ ನೆಲವನ್ನು ಕೆರೆಯುತ್ತಾ ಬಾಲ ದಿಂದ ನೆಲವನ್ನಪ್ಪಳಿಸುತ್ತಾ, ಬರಸಿಡಿಲಿನಂತೆ ನೆಗೆದು ಹಾರುತ್ತಾ, ನಾಲಗೆ ನೀಡುತ್ತಾ ಒಂದು ಸಿಂಹವೂ ಬಂದಿತು. ಮೊದಲೇ ಹೆದರಿದ ಇವರು ಇದೇನೋ ಮಹಾ ಮೃತ್ಯುವು ಸನ್ನಿಹಿತವಾಯಿತೆಂದು ಶಿವನನ್ನು ಧ್ಯಾನಿಸುತ್ತಾ ಕಣ್ಮುಚ್ಚಿ ನಿಂತರು.

ಇವರ ಮರೆಯಲ್ಲಿದ್ದ ಆನೆಯನ್ನು ಕಂಡ ಸಿಂಹವು ಕೊಲ್ಲಲೆಂದು ಮುನ್ನುಗ್ಗಿ ಹಾರುವದು. ಮಾಂತ್ರಿಕನು ಹಾಕಿದ ಗೆರೆಯ ದಾಟಲಾರದ ಪ್ರತಿ ಮಾಂತ್ರಿಕನಂತೆ ಆ ಮಗುವಿನ ಪ್ರಭಾವಲಯದ ಬಳಿಗೆ ಬಂದು ನಿಸ್ತೇಜ ವಾಗುವುದು. ಕಡೆಗೊಮ್ಮೆ ತನ್ನ ಸರ್ವಶಕ್ತಿಯನ್ನೂ ಬಿಟ್ಟು ಆನೆಯಮೇಲೆ

ಹಾರಬೇಕೆಂದು ಹವಣಿಸುತ್ತಿರುವಾಗ ಆ ಶಿವಶಿಶುವಿನ ಅಂತಃಕರಣದ ತೇಜಸ್ಸುಗಳೇ ಬಾಣಗಳಾಗಿ ಸಿಂಹದೊಡನೆ ಸೆಣಸಿದವು. ಅದರ ದೃಷ್ಟಿಯನ್ನು ಮಂಕುಗವಿಸಿದವು. ಆ ತೇಜೋಬಾಣಗಳು ಸಾವಿರಾರು ಸಂಖ್ಯೆಯಲ್ಲಿ ಸಿಂಹವನ್ನು ತಾಗುತ್ತಿರಲು, ಅವರ ಸುತ್ತಲೂ ಪುಟ್ಟ ಚಂಡಿನಂತೆ ತಿರುಗಿ ನೆಗೆಯುತ್ತಾ, ಹಾರಿ ಅಬ್ಬರಿಸುತ್ತಾ ಆನೆಯನ್ನು ಮುಟ್ಟುವುದು ಸಾಧ್ಯವಾಗದಿರಲು ಕಡೆಯ ಪ್ರಯತ್ನವೆಂದು ಮುನ್ನುಗ್ಗುವಾಗ ಆ ಶಿವಶಿಶುವು ಶರಭರೂಪಿನಿಂದ ಕಾಣಿಸಿಕೊಂಡನು. ಆಗ ಆ ಸಿಂಹದ ಜಂಘಾಬಲವುಡುಗಿ ಕಂಗೆಟ್ಟು ಆಕಾಶಕ್ಕೆರಗಿ ತಿರ್ರನೆ ತಿರುಗುತ್ತಾ ಅಣೆತಪ್ಪಿಬಿದ್ದು ಪ್ರಾಣ ಬಿಟ್ಟಿತು. ಆಗ ಅದರ ಸಿಂಹರೂಪ ಹೋಗಿ ಕಿನ್ನರ ಪುರುಷನರೂಪ ಬಂತು. ಇತ್ತ ಆನೆಯೂ ಸತ್ತು ಕಿನ್ನರ ಸ್ತ್ರೀಯ ರೂಪವನ್ನು ತಾಳಿ ನಿಂತಿತು. ಈ ಸ್ತ್ರೀ ಪುರುಷರಿಬ್ಬರೂ ಕೈ ಜೋಡಿಸಿ ಬಂದು ಶಿವಶಿಶುವನ್ನು ನಮಸ್ಕರಿಸಿ,

ನಮೋ ನಮೋ ನಿರಂಜನ ನಮೋ ನಮೋ ಶಿಖಾಂಜನಾ ।
ನಮೋ ಭವಾಬ್ಧಿಭಂಜನಾ ನಮೋ ಕೃಪಾಬ್ಧಿಚಿದನಾ ॥೧॥

ನಮೋ ಶಿವಾಬ್ಧಿ ಚಂದಿರಾ, ನಮೋ ನಿರಂಜನಾಂಕುರಾ ।
ನಮೋದ್ಧಿಮಂದಿರಾ, ನಮೋ ನಮುಜ್ಞಾನಾಗರಾ ॥೨॥

ನಾಮರೂಪಾಧಿಕೃತಾ, ಕಾಮಕಾಲ ವಿರಹಿತಾ ।
ಕರ್ಮಮಲ ವಿವರ್ಜಿತಾ, ಸ್ವಾಮಿ ನೀನೆ ಕೇವಲಾದಿ ಶಾಶ್ವತ ॥೩॥

ಶಿವ ಹೃತಾಬ್ಧಿಚಂದಿರಾ, ಶಿವಗುಣಾದಿ ಮಂದಿರಾ ।
ಶಿವನ ಚರಿತ ಬಂಧುರಾ, ಶಿವನೇ ರಾಜಶೇಖರಾ ॥೪॥

ಆದಿಗಾದಿ ನೀ ಬಲಾ, ಅನಾದಿ ವಸ್ತು ನೀ ಬಲಾ ।
ನಾದ ಚಿಂತನಾದಿ ನಿರ್ಮಲಾ, ನಾದ ನಿರಂಜನ ನಿಶ್ಚಲಾ ॥೫॥

ನಮೋ ನಮೋ ನಿರಂಜನ, ನಮೋ ನಮೋ ಸುಖಾಂಜನಾ ।
ನಮೋ ಭವಾಬ್ಧಿ ಭಂಜನಾ, ನಮೋ ಶಿವಾಬ್ಧಿ ರಂಜನಾ ॥

ಎಂದು ಸ್ತುತಿಸುತ್ತಿರುವಲ್ಲಿ ಶರಣ ದಂಪತಿಗಳು ಕಣ್ತೆರೆದು ನೋಡಿದರು. ಆನೆ ಸಿಂಹಗಳು ಸತ್ತುಬಿದ್ದಿವೆ. ಈ ಗಂಡು ಹೆಣ್ಣುಗಳು ಸೇರಿ ಮಗುವನ್ನು

ಸ್ತುತಿಸುತ್ತಿದ್ದಾರೆ. ಇದನ್ನು ನೋಡಿ ಆಶ್ಚರ್ಯಪಟ್ಟು, ನೀವಾರು ಇದೇನೆಂದು ಕೇಳಿದರು. ಆಗಲವರು ಸಾಷ್ಟಾಂಗವೆರಗಿ ವಂದಿಸಿ ಹೇಳಿದರು —

ಹಿಂದೊಮ್ಮೆ ಶಿವನ ವರವನ್ನು ಪಡೆದ ಜಾನುಮಂಡಲನೆಂಬ ರಾಕ್ಷಸನು ಲಂಕೆಯನ್ನಾಳುತ್ತಾ ಲೋಕ ಕಂಟಕನಾದನು. ಅವನನ್ನು ಕೊಲ್ಲಲು ಶಿವನು ತನ್ನ ಬೆವರಿನಿಂದ ಮುಕ್ತಋಷಿಯೆಂಬವನನ್ನು ನಿರ್ಮಿಸಿ ಕಳುಹಿಸಿದನು. ಅವನು ಬರುತ್ತಾ ಹಾಲು ಸಿಹಿ ನೀರಿನ ಸಮುದ್ರದ ನಡುವಿರುವ ಶಾಲ್ಮಲೀ ದ್ವೀಪದಲ್ಲಿ ಆದಿ ಋತುವಾದ ಜಯೆಯೆಂಬ ಕಿನ್ನರಿಯು ಸ್ನಾನಮಾಡಿ ತಲೆ ಒರೆಸಿಕೊಳ್ಳುತ್ತಿರಲು, ಅವಳನ್ನು ಕಂಡು ಮೋಹಿಸಿದನು. ಅವರೀರ್ವರ ಮೋಹದ ಮಗನಾದ ನನ್ನನ್ನು ಜಯಾಂಗದನೆನ್ನುವರು. ಇವಳು ನನ್ನನ್ನು ಕೈ ಹಿಡಿದ ವಿಜಯ.

ಜಾನುಮಂಡಲನು ನನ್ನ ತಂದೆಯಿಂದ ಹತನಾದ ಬಳಿಕ ಲಂಕೆಗೆ ಶುಂಭ ನಿಶುಂಭರು ಅರಸರಾಗಿ ಲೋಕ ಕಂಟಕರಾಗಲು ಅವರನ್ನು ಶ್ರೀಹರಿಯು ಸಂಹರಿಸಿದನು. ಅವರ ನಂತರ ಬಂದ ಮಾಲಿ ಸುಮಾಲಿಗಳೂ ಲೋಕ ಕಂಟಕರಾಗಿ ಹರಿಯಿಂದ ಸಂಹೃತರಾದರು. ಅವರಾದ ಮೇಲೆ ಲಂಕೆಗೆ ಕುಬೇರನು ಅರಸನಾದನು. ಪೌಲಸ್ತ್ಯ ವಂಶದ ರಾವಣನು ಆ ಕುಬೇರನನ್ನು ಲಂಕೆಯಿಂದ ಓಡಿಸಿ ತಾನೇ ಅರಸನಾದನು. ಲಂಕೆಯಿಂದ ಬಂದ ಕುಬೇರನು ಶಂಕರನನ್ನು ಮೆಚ್ಚಿಸಲು ತಪಸ್ಸು ಮಾಡಬೇಕೆಂದಿರುವಾಗ ನಾವು ಕಾಣಿಸಿ ಕೊಂಡೆವು. ನಮ್ಮ ಕಥೆಯನ್ನು ಕೇಳಿ ಒಪ್ಪಿ ತನ್ನ ಸೇವೆಗೆ ನಿಲ್ಲಿಸಿಕೊಂಡು ತಾನು ಅಳಕಾಪುರವನ್ನಾಳಬೇಕೆಂದು ಶಿವನನ್ನು ಕುರಿತು ತಪಸ್ಸಿಗಾರಂಭಿ ಸಿದನು.

ನಾವು ಅವರ ಸೇವೆಗೆ ಮನವೊಪ್ಪಿಸಿಕೊಂಡು ಪರಶಿವನ ಪೂಜೆಗೆ ದಿನ ದಿನವೂ ದ್ವೀಪಾಂತರಗಳಲ್ಲಿ ಸಂಚರಿಸಿ ಹೂಗಳನ್ನು ತಂದುಕೊಡುತ್ತಿದ್ದೆವು. ಸಾವಿರದಳದ ಕಮಲವಿರುವದೆಂದು ಕೇಳಿ ಒಂದು ದಿನ ಪುಷ್ಕರ ದ್ವೀಪಕ್ಕೆ ಹೋದೆವು. ಅಲ್ಲಿರುವ ಒಂದು ಪಾವನ ಸರೋವರದಲ್ಲಿ ಆ ಪುಷ್ಕರಕ್ಷೇತ್ರಾಧಿ ಪತಿಯಾದ ಪುಷ್ಕರೇಶ್ವರ ಲಿಂಗವಿರುವುದು. ಆ ಕೊಳದಲ್ಲಿ ದಿನಕ್ಕೊಂದು ಕಮಲ ಅರಳಿ ಆ ಲಿಂಗ ಪೂಜೆಗೆ ಹೋಗುವುದು. ಅದನ್ನರಿಯದೇ ಹೂ

ಕಿತ್ತೆವು. ದೈವವಶಾಯೆಯಿಂದ ಮದನ ಬಾಧಾಪೀಡಿತರಾಗಿ ಆ ಹೂವು ಬುಟ್ಟಿಯು ಕೈಯಲ್ಲಿದ್ದಂತೆಯೇ ಕೂಡಿದೆವು. ಚಿಮ್ಮಿದರೆ ಒಡೆಯುವ ಪ್ರಾಯ, ಪಕ್ಕದಲ್ಲಿ ಮುದ್ದುಮೋಹದ ಮಡದಿ ಇರುವಾಗ ತಪಸ್ವಿಗಳೂ ಸೋಲುವರೆಂದಮೇಲೆ ನಾವೆಷ್ಟರವರು ? ನಮ್ಮ ಕೈಯಲ್ಲಿದ್ದ ಹೂವನ್ನು ಕಂಡು ಶಿವನು ಕೋಪಿಸಿ "ಹರಿ ಕರಿ" (ಸಿಂಹ ಆನೆ)ಗಳಾಗಿ ಸಂಚರಿಸಿರಿ ಎಂದು ಶಾಪ ಕೊಟ್ಟನು. ನಾವು ನಡುನಡುಗಿ ಪಾದಗಳಿಗೆರಗಿ ಪರಿಹಾರಕ್ಕೆ ವರವನ್ನು ಬೇಡಿಕೊಂಡೆವು. ಆಗ ದಯೆ ಬಂದು "ನಮಗಿಂತಲೂ ಅಧಿಕಾರದ ನಿರಂಜನ ಗಣಾಧಿಪರು ಭೂಮಿಗೆ ಬರುವರು. ಬಂದಾಕ್ಷಣವೇ ನಿಮಗೆ ಈ ಶಾಪವು ಪರಿಹಾರವಾಗುವದು" ಎಂದು ಆಶೀರ್ವದಿಸಿದನು. ಆ ಶಿವಶಾಪವಿಡಿದು ಭೂಮಿಯಲ್ಲಿ ಹಲಕಾಲ ಸಂಚರಿಸಿದೆವು. ಈಗ ನಿಮ್ಮಿಂದ ಮಹಾತ್ಮರ ಸಂದರ್ಶನವಾಯಿತು. ಈ ಮಹನೀಯನಿಂದ ನಮ್ಮ ಶಾಪವು ನಷ್ಟವಾಯಿತು. ಬ್ರಹ್ಮರ್ಷಿ ದೇವರ್ಷಿಗಳಿಗೂ ಸಿಗದ ಈ ನಿರಂಜನ ಮೂರ್ತಿಯು ನಿಮಗೆ ಯೋಗಮುಖದಿಂದ ಸಿಕ್ಕಿರುವರು. ನೀವೇ ಧನ್ಯರು. ನಿಮ್ಮಿಂದ ನಾವು ಕೃತಾರ್ಥರಾದೆವು. ನಾವಿನ್ನು ಬರುತ್ತೇವೆ ಎಂದು ಹೇಳಿ ಆ ಕಿನ್ನರದಂಪತಿ ಗಳು ಹೊರಟು ಹೋದರು.

ಈ ಮಾತು ಕೇಳಿ ಶರಣದಂಪತಿಗಳು ಆಶ್ಚರ್ಯಪಟ್ಟು ಬಾಲಕನನ್ನು ದೃಷ್ಟಿಸಿ ನೋಡಿ, ಅಲ್ಲಿಂದ ಮನೆಯಕಡೆ ಹೊರಟು ಬಂದರು. ಇದಕ್ಕೆ ನಿದರ್ಶನವಾಗಿ ಆ ಹರದನಹಳ್ಳಿಯ ಅಮೃತೇಶ್ವರನ ಗವಿಬಾಗಿಲಲ್ಲಿ ಹರಿ ಕರಿಗಳನ್ನು ಕೆತ್ತಿರುವುದನ್ನು ಈಗಲೂ ಕಾಣಬಹುದು. ಆ ಶಿವಶಿಶುವನ್ನು ಮನೆಗೆ ಕರೆತಂದು, ಗುರುಗಳನ್ನು ಕರೆತಂದು ವಿಧಿಪೂರ್ವಕವಾಗಿ ಜಾತಕರ್ಮಾದಿ ಗಳನ್ನು ನೆರವೇರಿಸಿ ಸಿದ್ಧಲಿಂಗನೆಂದು ಹೆಸರಿಟ್ಟರು. ಊರಿನ ಮುತ್ತೈದಿ ಹೆಣ್ಣು ಮಕ್ಕಳೆಲ್ಲರೂ ಸೇರಿ ತೊಟ್ಟಿಲಿಟ್ಟು ಬಾಲಕನನ್ನು ತೂಗಿ ಆರತಿ ಮಾಡಿ ದರು. ಆ ಮುತ್ತೈದೆಯರಿಗೆಲ್ಲಾ ಹೂ ವೀಳ್ಯ ಕೊಟ್ಟು ಕಳಿಸಿ ಜ್ಞಾನಾಂಗ ನೆಯು ಮಗುವನ್ನು ಸಾಕಲು ಬಾಣಂತಿಯಾದಳು. ಎಣ್ಣೆಸೋಂಕಿನ ಸೀರೆ ಯುಟ್ಟಳು. ನಡುಸುತ್ತು ಸುತ್ತಿದಳು. ಸಣ್ಣಸೆರಗು ತಲೆಗೆ ಕಟ್ಟಿದಳು. ಕಣ್ಣಿಗೆ ಕಾಡಿಗೆಯಿಟ್ಟಳು. ಅರಿಸಿನ ಬಳಿದುಕೊಂಡು ಬಾಣಂತಿಯಾದಳು.

ಮಗುವಿಗೆ ನೀರೆರೆದು ನೆತ್ತಿಗೆ ಎಲೆ ಕಾಸಿ ಹಾಕುವಳು. ದೃಷ್ಟಿಯ ಬಟ್ಟೆಟ್ಟು ವೈ ಎಣ್ಣೆ ಆರದಂತೆ ಸವರುತ್ತಾ ಮಗುವನ್ನು ನೋಡಿಕೊಂಡಳು. ಕೇಳಿದಾಗಲೆಲ್ಲಾ ಮಗುವಿಗೆ ಮೊಲೆಹಾಲುಣಿಸಿ ತೊಟ್ಟಿಲಲ್ಲಿ ಮಲಗಿಸಿ ಜೋಗುಳ ಹಾಡಿ ನಿದ್ದೆ ಮಾಡಿಸುವಳು.

ಒಂದಾನೊಂದುದಿನ ಕಲಿಪುರುಷರು ಇವರಿಂದ ತಮ್ಮ ಮಾಯೆ ನಡೆಯುವುದಿಲ್ಲವಾದುದರಿಂದ ಆ ಮಗುವನ್ನು ಕೊಂದುಬಾರೆಂದು ಒಂದು ಮಹಿಷನನ್ನು ಕಳಿಸಿದರು. ಯಾರೂ ಮನೆಯಲ್ಲಿಲ್ಲದ ವೇಳೆಯಲ್ಲಿ ಬಂದ ಹೆಗ್ಗೋಣವು ಮಗುವನ್ನು ತುಳಿದು ಕೊಂದುಬಿಡಲು ಹವಣಿಸುತ್ತಿರುವಷ್ಟರಲ್ಲಿ ತೊಟ್ಟಿಲಲ್ಲಿದ್ದ ಶಿವಶಿಶುವು ಕೋರೆದವಡೆ–ಕಿಡಿಗಣ್ಣಿನ ಘೋರಾವತಾರದ ಮಾಯಾ ಶಕ್ತಿಯೊಂದನ್ನು ನಿರ್ಮಿಸಿತು. ಆ ಶಕ್ತಿಯು ಆ ಹೆಗ್ಗೋಣವನ್ನು ಮೆಟ್ಟಿ ಕೊಂದುಬಿಟ್ಟಿತು.

ಗುಡ್ಡಕ್ಕೆ ಎರಡು ಕೋಡು ಬಂದಂತೆ ಬಿದ್ದಿರುವ ಆಕಾರವನ್ನು ನೋಡಿ ತಂದೆ–ತಾಯಿಗಳು ನೆರೆ–ಹೊರೆಯವರು ಇದೊಂದು ದೊಡ್ಡ ಗಂಡಾಂತರ ಪಾರಾಯಿತೆಂದುಕೊಂಡು ಆ ಕೋಣವನ್ನು ಹೊರಗೆ ಸಾಗಿಸಿ ಮನೆಯನ್ನು ಶುದ್ಧಿಮಾಡಿ ಮಗುವಿನ ಮಹಿಮೆಯನ್ನರಿಯದೇ, ಯಂತ್ರಕಟ್ಟಿಸಿ ವಿಭೂತಿ ಮಂತ್ರಿಸಿದರು.

ತಿಂಗಳಾಗುವ ವೇಳೆಗೆ ಸರಿಯಾಗಿ ಊರ ಮುತ್ತೈದೆಯರನ್ನೆಲ್ಲಾ ಕರೆಸಿದರು. ಒಬ್ಬೊಬ್ಬರಾಗಿ ಮಕ್ಕಳೊಡನೆ ಬಂದ ಮುತ್ತೈದೆಯರು ಮಗುವನ್ನು ತಾಯಿಯ ಮಡಿಲಲ್ಲಿಟ್ಟು ಹಸೆಯ ಮೇಲೆ ಕೂರಿಸಿ ಆರತಿ ಎತ್ತಿದರು. ಜ್ಞಾನಾಂಗನೆಯು ಬಂದವರಿಗೆಲ್ಲ ಹೂವೀಳ್ಯೆ ಬಾಗಿನಗಳನ್ನು ಕೊಟ್ಟು ಕಳಿಸಿದಳು.

ಆ ಶಿವಶಿಶುವು ಬಿದಿಗೆಯ ಚಂದಿರನಂತೆ ದಿನದಿನಕ್ಕೆ ಬೆಳೆಯುತ್ತಾ ಕಿಲಕಿಲ ನಗುತ್ತಾ ಮುಟ್ಟಿದವರಕಡೆ ನೋಡುತ್ತಾ ಕಾಲುಕೊಡುವುತ್ತಾ ಎದ್ದು ಕುಳಿತಿತು, ಅಲ್ಲಿಂದಿಲ್ಲಿಗೆ ಅಂಬೆಗಾಲಿಟ್ಟು ಓಡಾಡಿತು. ಆಡುವ ಕಂದನನ್ನು ನೋಡಿ ಸಂತಸಪಡುವ ತಾಯಿ-ತಂದೆಗಳ ಮನಸ್ಸು ಪರೀಕ್ಷಿಸಬೇಕೆಂದು

ರಚ್ಚೆ ಹಿಡಿಯಿತು. ತಂದೆ-ತಾಯಿಗಳು ಬೆದರಿ ಇನ್ನೇನುಗತಿ, ಇಂಥ ಮಗನು ನಮಗೆ ದಕ್ಕ್ಯಾನೋ ? ಎಂದು ಎದೆಯೊಡೆದು ನೆರೆಹೊರೆಯವರನ್ನು ಕರೆ ತಂದು ಮಗುವನ್ನು ತೋರಿಸಿ ಹಾಸಿಗೆಯೊಲ್ಲದು, ಹಾಲು ಕುಡಿಯದು, ಕಣ್ತೆರೆಯದು, ಏನು ಮಾಡಬೇಕೋ ತಿಳಿಯದು ಎಂದರು. ಕೆಲವರು ಗುಣಿಗೊಂಡಿದೆ ಎಂದರೆ, ಕೆಲವರು ಎಣ್ಣೆಸೋಂಕಿದೆ ಎಂದರು. ಕೆಲವರು ಎಳವಾಗಿದೆ ಎಂದರೆ ಕೆಲವರು ಕಣಿಕೇಳೆಂದರು. ಆ ದಂಪತಿಗಳು ಶಿವನೇ ಗತಿಯೆಂದು ಔಷಧಿ ಮಾಡಿಸಿದರು. ಇನ್ನು ಇವರನ್ನು ಗಾಸಿಪಡಿಸುವುದು ನ್ಯಾಯವಲ್ಲವೆಂದು ಮಗುವು ರಚ್ಚೆಯನ್ನು ಬಿಟ್ಟು ಆಡಿತು. ಬಾಲಕನಿಗೆ ಆರೋಗ್ಯವಾದುದಕ್ಕೆ ಹರ್ಷಗೊಂಡು ತಂದೆ-ತಾಯಿಗಳು ಜಂಗಮಾರಾಧನೆಯನ್ನುಮಾಡಿ ಮಗುವಿಗೆ ಆರತಿ ಎತ್ತಿಸಿ ಮುತ್ತೈದೆಯರಿಗೆ ಹೂವೀಳ್ಯೆಯನ್ನು ಕೊಡಿಸಿದರು.

ಒಂದು ದಿನ ಮಗುವನ್ನು ತೂಗುತ್ತಿದ್ದ ಜ್ಞಾನಾಂಬೆಗೆ ಜೊಂಪು ಹತ್ತಿದ ಹಾಗಾಗಿ ಮಲಗಿದಳು. ಕನಸಿನಲ್ಲಿ ಶಿವನ ಶಿರೋಭೂಷಣವಾದ ಸರ್ಪವು ಬಂದು ಬಾಲಕನ ಸೇವೆ ಮಾಡುತ್ತಿರುವಂತೆ ಕಾಣಿಸಿತು. ಅಯ್ಯೋ ಮಗುವೇ ಎಂದು ಎದ್ದು ನೋಡುವಲ್ಲಿ ಏಳು ಹೆಡೆಯ ಘಟಸರ್ಪವು ನಿಜವಾಗಿ ಬಂದು ಮಗುವಿನ ಸುತ್ತಲೂ ತೆಕ್ಕೆಯನ್ನು ಸುತ್ತಿ ತನ್ನ ಹೆಡೆಗಳನ್ನು ಮಗುವಿನ ತಲೆಯ ಮೇಲೆ ಆಡಿಸುತ್ತಾ ನಾಲಗೆ ನೀಡಿ ಭುಸ್ಸೆನ್ನುತ್ತಿದ್ದಿತು. ಗಾಬರಿಗೊಂಡು ನೆರೆಹೊರೆಯವರನ್ನು ಕೂಗಿದಳು. ಸೇರಿದ ಜನರು ಅದು ಮಹಾಮೃತ್ಯುವೆಂದರು. ಕೆಲವರು ಈ ಗಂಡಾಂತರದಿಂದ ಪಾರಾದರೆ ಈ ಮಗುವು ಈ ಭೂಮಿಗೆ ಕರ್ತನಾಗುವನೆಂದರು. ಇನ್ನೂ ಕೆಲವರು ಈ ಮಾಯಾ ಶಿಶುವು ತಾನು ಶಿವನೆಂದು ತೋರಿಸಿಕೊಳ್ಳಲು ಹೂಡಿರುವ ಆಟವೆಂದರು. ಅಷ್ಟರಲ್ಲಿ ಸರ್ಪವು ಮಾಯವಾಯಿತು. ಮಗುವು ಪುಟವಿಟ್ಟ ಬಂಗಾರದಂತೆ ಕಳಕಳಿಯಿಂದ ನಲಿದಾಡುತ್ತಿರುವುದನ್ನು ನೋಡಿ ತಂದೆ-ತಾಯಿಗಳು ಜಂಗಮಾರಾಧನೆ ಮಾಡಿಸಿದರು.

ಒಂದೊಂದು ಸಾರಿ ಇವನು ಕಾರಣಪುರುಷನೇ ಸರಿಯೆನ್ನುವರು, ಮರುಗಳಿಗೆಯಲ್ಲಿ ಪುತ್ರೇಷಣಕ್ಕೊಳಗಾದ ನಮ್ಮ ಬಾಲಕನನೆನ್ನುವರು. ಹೀಗೆ

ಬಾಲಲೀಲೆಗಳನ್ನು ತೋರುತ್ತಾ ಮಗುವು ಎದ್ದು ನಿಂತಿತು. ತೊದಲು ಮಾತನಾಡಿತು. ಕುರುಡರಿಗೆ ಕಣ್ಣು ಬಂದಂತೆ ಜನನೀಜನಕರು ಹಿಗ್ಗಿ ದಿನವೂ ಮರುಕ ರಸದಲ್ಲಿ ಮಜ್ಜನ ಮಾಡಿಸಿ ಶಿಶುವಿಗೆ ಅರಳು ಮಲ್ಲಿಗೆಯ ಹಾಸಿನಲ್ಲಿ ಮಲಗಿಸಿ ಮರು ಆರತಿ ಎತ್ತಿ ಮೊಲೆವಾಲ ನೈವೇದ್ಯವುಣಿಸಿ ಬೆಳೆಸಿದರು.

ಒಂದುದಿನ ಜ್ಞಾನಾಂಗನೆಯು ಮಗುವನ್ನು ಮಗ್ಗುಲಲ್ಲಿ ಮಲಗಿಸಿಕೊಂಡು ತಲೆ ಕೆದಕುತ್ತಾ ಮೊಲೆ ಕೊಡುತ್ತಿದ್ದಳು. ಮಗುವು ಮೊಲೆಯನ್ನು ಕಚ್ಚಿದನು. ತಾಯಿಯು ಗದ್ದರಿಸಲಾಗಿ ಹಾರವನ್ನೆಳೆದು ಕಿತ್ತುಹಾಕಿ ಉದುರಿದ ಮುತ್ತಿನಲ್ಲೊಂದನ್ನು ಬೇಗ ತೆಗೆದುಕೊಂಡು ಬಾಯಲ್ಲಿಟ್ಟುಕೊಂಡನು. ಗಂಟಲಲ್ಲಿ ಸಿಕ್ಕಿಕೊಂಡೀತೆಂದು ಬೆದರಿದ ತಾಯಿ ಬಾಯಿತೆರೆದು ನೋಡುವಲ್ಲಿ ಅಲ್ಲಿ ಮುತ್ತಿಲ್ಲ. ಮುತ್ತಿಗೆ ಬದಲಾಗಿ ಮುಕ್ತಿಯ ನಿವಾಸವಾದ ಕೈಲಾಸವು ಕಾಣಿಸಿತು. ಅಷ್ಟದಿಕ್ಪಾಲಕರೂ, ದೇವರ್ಷಿ, ಬ್ರಹ್ಮರ್ಷಿಗಳೂ, ಅಷ್ಟಯೋಗಿನಿಯರೂ, ಮರುದ್ಗಣರೂ ಶಿರಸಾಷ್ಟಾಂಗವಾಗಿ ವಂದಿಸಿ ಓಲೈಸುತ್ತಿರುವ ಶಿವಸಭಾ ಮಧ್ಯದಲ್ಲಿ ಸಿಂಹಾಸನಾರೂಢರಾದ ಪಾರ್ವತೀ–ಪರಮೇಶ್ವರರ ತೊಡೆಯ ಮೇಲೆ ತನ್ನ ಕಂದನು, ಷಣ್ಮುಖ–ಗಣಪತಿ–ವೀರಭದ್ರರೊಡಗೂಡಿ ಆಡುತ್ತಿರುವುದನ್ನು ಕಂಡು ಮಗುವಿನ ಬಾಯಿ ಮುಚ್ಚಿದಳು. ಜ್ಞಾನ ನೇತ್ರದೆದುರು ನಿಂತ ಚಿತ್ರವು ಹೊಳೆಯುತ್ತಿರುವ ಜ್ಞಾನ ನಿದ್ರೆಯಲ್ಲಿ ಮಲಗಿದಳು. ಎಂದಿನಂತೆ ಎದ್ದು ಮಗುವಿನ ಸೇವೆಯಲ್ಲಿ ನಿರತಳಾದಳು. ಇವರ ಪುಣ್ಯಕ್ಕೆ ಸಾಟಿಯಿಲ್ಲವೆಂದು ದೇವತೆಗಳು ಅಂಬರದಲ್ಲಿ ಸ್ತುತಿಸಿ ಹೂಮಳೆಗರೆದರು.

ಪಡುವಲಲ್ಲಿ ರವಿಯು ಅರೆಮುಳುಗುತ್ತಿರಲು ಮೂಡಲಲ್ಲಿ ಶಶಿಮೂಡಿ ಆಕಾಶವೆಂಬಾಕೆಯ ಎಡಬಲ ಭಾಗದ ಜತೆ ಗಂಟೆಗಳೆಂಬಂತೆ ಕಾಣುತ್ತಿರುವ ಪೂರ್ಣಿಮೆ ಭೂಸತಿಯು ವಜ್ರಭೂಷಿತಳಾಗಿ ಧವಳಾಂಬರವನ್ನುಟ್ಟಂತೆ ಅಲ್ಲಲ್ಲಿ ಮುಳುಗುತ್ತಾ ಏಳುತ್ತಲಿದ್ದ ಬೆಳದಿಂಗಳು, ಆ ಬೆಳ್ದಿಂಗಳಲ್ಲಿ ಜ್ಞಾನಾಂಬೆಯು ಸಿದ್ಧಲಿಂಗನನ್ನು ತನ್ನ ಮಗನೆಂದು ಆಡಿಸಿದಳು. ಕೊರಳಲ್ಲಿರುವ ಹುಲಿಯುಗುರ ಹಾರವು ಹಾರಾಡುತ್ತಿರಲು ಮರೆಮಾಡಿದಳು. ಬ್ರಹ್ಮೇಂದ್ರಾರ್ಚಿತ ಪಾದವನ್ನು ಕೈಹಿಡಿದು ನಡೆದಾಡಿಸಿದಳು. ಮುರಜಮಳೋಮಂದಿರದಲ್ಲಿ

ವಾಸವಾಗಿರುವ ಮೃದುಪಾದಗಳಿಂದ ಕುಣಿಯೆಂದು ಕುಣಿಸಿದಳು. ಭಕ್ತರಿಗೆ ವರವನ್ನು ನೀಡಿದ ಕೈಗಳಿಂದ ಚಪ್ಪಾಳೆ ಹಾಕಿಸಿದಳು. ತೊದಲು ಮಾತು ಗಳಿಂದ ಗುರುವೇ, ಹರನೇ ಶಿವಧೋ ಶಿವಧೋ ಸಾಂಬಸದಾಶಿವ ಶಿವಧೋ ಶಿವಧೋ ಶಿವನೇ ಶಂಕರ ಶಿವಧೋ ಶಿವಧೋ ಶಿವ ಶಿವ ಶಿವ ಶಿವಧೋ ಶಿವಧೋ ಹರ ಹರ ಹರ ಹರ ಶಿವಧೋ ಶಿವಧೋ ಗುರುವೇ ಗುರುವೇ ಶಿವಧೋ ಶಿವಧೋ ||೨|| ಎಂದು ಹಾಡಿಸಿದಳು. ಚಂದಮಾಮಾ ಬಾಬಾ ಕಂದ ಕರೆವನು ಬಾಬಾ ||೧|| ಚಂದಮಾಮಾ ಬಾರ ಬಾ ಕಂದನ ಕೈಗೆ ಬಾ ||೨|| ಜತೆಯವರನ್ನು ಕರೆದು ತಾ, ಆರತಿ ಹೋಳಿಗೆ ಉಣ್ಣು ಬಾ ಎಂದು ಚಂದ್ರನನ್ನು ಕರೆಸಿದಳು, ಅದನ್ನು ನೋಡಿ ಮಗುವೂ ಕರೆಯಿತು.

ಕೂಡಲೇ ಚಂದ್ರನು ಮಾಂತ್ರಿಕನ ಕೈಗೆ ಬರುವ ಮಂತ್ರದಂಡದಂತೆ ಸಿದ್ಧಲಿಂಗನ ಕೈಗೆ ಬಂದಿತು. ಬರುವಾಗ ಎಂಟುದಿಕ್ಕೂ ಬೆಳಗಿದವು. ಮಗು ವಿನ ಕೈಯಲ್ಲಿರುವ ಚಂದ್ರನು ಮುತ್ತಿನ ಚೆಂಡಿನಂತೆ ರತ್ನದ ಕನ್ನಡಿಯಂತೆ ಆಡಲು ಸಿಪ್ಪೆ ಹೆರೆದುಕೊಟ್ಟ ತೆಂಗಿನ ಹೋಳಿನಂತೆ ಭೂಮಿಯ ಜನರನ್ನು ಪವಿತ್ರಗೊಳಿಸಲು ಕೈಯಲ್ಲಿ ಹಿಡಿದ ವಿಭೂತಿಯ ಉಂಡೆಯಂತೆ ಶೋಭಿಸಿ ದನು. ಚಂದ್ರನ ಶೀತಕ್ಕೆ ಮಳೆಹನಿಯುದುರಿದವು, ಜ್ಞಾನಾಂಗನೆಗೆ ಮೂರ್ಛೆ ಬಂದಿತು. ಇದನ್ನರಿತ ಸಿದ್ಧಲಿಂಗನು ಚಂದ್ರನನ್ನು ಹೋಗೆಂದು ಹೇಳಿದನು. ಚಂದ್ರನು ಆಕಾಶವನ್ನೇರಿದನು. ಜ್ಞಾನಾಂಬೆಯು ಎಚ್ಚತ್ತು ಮಗುವನ್ನು ಮುದ್ದಾಡಿ ಒಳಗೆ ಕರೆತಂದಳು. ಎರಡನೆಯ ವರ್ಷ ತುಂಬುತ್ತಿರಲು ಜಂಗಮಾರ್ಚನೆ ಮಾಡಬೇಕೆಂದು ಜಂಗಮರಿಗೆ ಬಿನ್ನಹ ಒಪ್ಪಿಸಿ ಕರೆ ತಂದರು. ಗದ್ದುಗೆಯಲ್ಲಿ ಕೂರಿಸಿದರು. ಅಭಿಷೇಕಗಳಾದವು. ಪಾದಪೂಜೆ ನಡೆಯಿತು. ದಂಪತಿಗಳು ತೀರ್ಥಪ್ರಸಾದವನ್ನು ಸಲ್ಲಿಸುತ್ತಿರುವಷ್ಟರಲ್ಲಿ ಅಡಿ ಗೆಯ ಮನೆಯಲ್ಲಿ ಸದ್ದಾಯಿತು. ಜ್ಞಾನಾಂಬೆ ಜಗ್ಗನೆದ್ದು ಹೋಗಿ ಏನೆಂದು ನೋಡುವಷ್ಟರಲ್ಲಿ ಮಗುವು ಮೀಸಲಡಿಗೆಯನ್ನು ಉಣ್ಣುತ್ತಿರುವುದನ್ನು ಕಂಡಳು. ಮೀಸಲು ಕೆಟ್ಟಿತೆಂದು ಕೋಪಿಸಿ ಮಗುವನ್ನು ಕೊಲ್ಲುವೆನೆಂದು ಕೋಪದಿಂದ ಗದರಿ ಗರ್ಜಿಸಿದಳು. ಆ ಭಯಕ್ಕೆ ಮಗುವು ಓಡಿಬಂದು ಹಿರಿ ಯರ ಮರೆ ಹೊಕ್ಕಿತು. ಜೊಲ್ಲು ಸುರಿಸುತ್ತಾ ಕಂಕುಳಲ್ಲಿ ಇರಿಕಿದ್ದ ಭಕ್ಷ್ಯ

ಗಳನ್ನು ತಿನ್ನುತ್ತಾ ಜಂಗಮರ ಸೆರಗಿನಲ್ಲಿ ಅಡಗುತ್ತಾ ಅವರ ಬಟ್ಟೆಗಳನ್ನೆಲ್ಲಾ ಮುಸುರಿ ಮಾಡಿತು. ಜಂಗಮರು ಕೋಪಗೊಂಡು ಬಲು ಶೀಲವಂತರೆಂದು ನಿಮ್ಮ ಮನೆಗೆ ಬಂದೆವು, ಈ ಹೊಲಸು ನಾವೆಲ್ಲೂ ನೋಡಲಿಲ್ಲ. ಇನ್ನು ನಿಮ್ಮ ಸೇವೆ ಸಾಕು, ನಾವು ಬರುತ್ತೇವೆಂದು ಎದ್ದರು. ಮಗುವು ನಾನು ಅನ್ನ ಉಣ್ಣಲಿಲ್ಲ, ಅಪ್ಪಚ್ಚಿ ತಿಂದೆ ಎಂದಿತು. ತಾಯಿಯು ಈ ದಿನ ಈ ಮಗುವಿಗೆ ಮಂಕು ಕವಿಯಿತೆಂದು ಗದರಿ ಬೆದರಿಸುತ್ತಾ ಹೊಡೆಯಲು ಬಂದಳು. ಈ ರಗಳೆಯನ್ನು ನೋಡಿ ಮಗುವು ಮನೆಯನ್ನು ಬಿಟ್ಟು ಹೊರಗೆ ಹೊರಟಿತು. ಕರಡಿಗೆಗೆ ಲಿಂಗವನ್ನಿಡಬೇಕೆಂದಿದ್ದವರ ಕೈಯಲಿಂಗ ಗಳೇ ಮಾಯವಾದವು. ಇದೇನೆಂದು, ಅಭಿಷೇಕಗೊಂಡ ಅಮೂಲ್ಯ ಪುಷ್ಪದ ರಾಶಿ, ಮೂಲೆ ಸಂದು-ಗೊಂದುಗಳನ್ನು ತಡಕಿ ಕಾಣದಾದರು. ಅಲ್ಲಿದ್ದವ ರನ್ನು ನೀವೇ ಭಾಗ್ಯಶಾಲಿಗಳು. ನಮ್ಮ ಬಳಿ ಹೀಗಾಯಿತು, ಲಿಂಗಯ್ಯನ ಹಿಂದೆ ನಮ್ಮೆಲ್ಲರನ್ನು ಕಳಿಸಿಕೊಡಿರೆಂದು ಬಿದ್ದು ಅಂಗಲಾಚಿಕೊಂಡರು. ಅದನ್ನು ಕಂಡು ಅವರೆಲ್ಲರೂ ತಮ್ಮ ತಮ್ಮ ಕರಡಿಗೆಗೆ ಕಟ್ಟುವ ವಸ್ತ್ರಗಳನ್ನು ನೋಡಿಕೊಳ್ಳಲು ಯಾರ ಲಿಂಗವೂ ಇರಲಿಲ್ಲ. ಎಲ್ಲರೂ ಹೌಹಾರಿ ಕುಸಿದು ಬಿದ್ದರು. ಬರಬರುತ್ತಾ ಈ ಬಾಲಕನು ಹುಟ್ಟಿದಾರಭ್ಯ ಪವಾಡ ಪುರುಷ ನಾಗಿ ತನ್ನ ಮಹಿಮೆಗಳನ್ನು ತೋರುತ್ತಾ ಬಂದಿದ್ದಾನೆ. ಕಿನ್ನರ ದಂಪತಿ ಗಳೂ ಶಿವನು ನಮಗಿಂತಲೂ ಹಿರಿಯರಾದ ನಿರಂಜನಗಣಾಧೀಶರಿಂದ ನಿಮಗೆ ನಿಶ್ಶಾಪವೆಂದು ಹೇಳಿದನೆಂದು ಹೇಳಿದುದನ್ನು ನಾವು ಗಮನಿಸಲಿಲ್ಲ. ಇವನು ನಿರಂಜನ ಗಣಾಧೀಶ್ವರನೇ ಸರಿ. ಆ ಮಗುವಿನ ನಿಜವನ್ನರಿಯದೆ ಧಿಕ್ಕರಿಸಿದ ನಮಗೀ ಪ್ರಾಯಶ್ಚಿತ್ತ ಸಂಭವಿಸಿದೆ. ಆ ಮಗುವೇ ಪರಿಹರಿಸ ಬೇಕೆಂದು ನಿಶ್ಚಯಿಸಿ, ಶರಣ ದಂಪತಿಗಳನ್ನು "ಶರಣ ಚಿಂತಾಮಣಿಗಳೇ, ನಿಮ್ಮ ಮಗುವನ್ನು ಕರೆದು ತಂದು ನಮ್ಮನ್ನು ಬದುಕಿಸಿರಿ" ಎಂದು ಅಂಗ ಲಾಚಿಕೊಂಡರು. ಆಗಲೆ ದಂಪತಿಗಳು ಮಗುವನ್ನು ಹುಡುಕಿಕೊಂಡು ಹೊರಟರು.

ಜನನೀಜನಕರು ಬರುವುದನ್ನು ನೋಡಿ ಮುಂದಿನ ಕೇರಿಗೆ ಓಡಿತು. ಕೈಗೆ ಸಿಕ್ಕದೇ ಪಟ್ಟಣದಲ್ಲೆಲ್ಲಾ ಸುತ್ತಿಸಿತು. ಕೈಗೆ ಸಿಗುವವನಂತೆ ತೋರಿ ಮಾಯವಾಗುವುದು, ಸ್ನೇಹಿತರೊಡಗೂಡಿ ಒಂದುಕಡೆ ಬುಗುರಿಯಾಡುತ್ತಾ

ಒಂದು ಕಡೆ ಗೋಲಿಯಾಡುತ್ತಾ, ಒಂದು ಕಡೆ ಚಿಣ್ಣಿಯಾಡುತ್ತಾ, ಒಂದು ಕಡೆ ಚಂಡಾಡುತ್ತಾ ಇರುವುದು, ಒಬ್ಬರ ಮನೆ ಅಟ್ಟದಲ್ಲಿ ಕೂತಿರುವುದು, ಒಬ್ಬರ ಮನೆ ಅಂಗಳದಲ್ಲಿ ನಿಂತಿರುವುದು, ಒಬ್ಬರ ಮನೆ ಅಡಿಗೆ ಮನೆ ಬಾಗಿಲ ಹಿಂದಿರುವುದು, ಒಬ್ಬರ ಶಿವಪೂಜಾ ಕೋಣೆಯಲ್ಲಿರುವುದು, ಇಲ್ಲಿ ತೋರುವುದು, ಅಲ್ಲಿ ಕಾಣಿಸಿಕೊಳ್ಳುವುದು ಹೀಗೆ ತಂದೆ-ತಾಯಿಗಳಿಗೆ ವಿಶ್ವ ರೂಪವನ್ನು ತೋರಿತು. ಮಗುವು ಸಿಕ್ಕಿತೆಂದು ಎತ್ತಿಕೊಳ್ಳಲು ಬಂದ ಜನ ರಿಗೆ ಎಡ ಬಲ ಹಿಂದೆ ಮುಂದೆ ಅಲ್ಲಿ ಇಲ್ಲಿ ಎಲ್ಲಿ ನೋಡಿದರೂ ಮಗುವೇ ಕಾಣಿಸಿತು. ಹೆಂಗಸರೆಲ್ಲರೂ ತಮ್ಮ ಮನೆಯಲ್ಲಿರುವ ಶಿಶುವನ್ನು ಎತ್ತಿ ಕೊಂಡು ಶರಣ ದಂಪತಿಗಳ ಮನೆಯ ಬಳಿಗೆ ಬಂದರು. ಎಲ್ಲರ ಕಂಕುಳಲ್ಲೂ ಸಿದ್ಧಲಿಂಗನೇ. ಇದನ್ನು ಕಂಡು ಜಂಗಮರೂ, ಹೆಂಗಸರೂ, ದಂಪತಿಗಳೂ ಬೆರಗಾದರು. ಸಾಷ್ಟಾಂಗವೆರಗಿದ ಗಣಂಗಳಿಗೆ ಭಕ್ತಿ ಸುಲಭನಾದ ಸಿದ್ಧ ಲಿಂಗನು ತನ್ನ ವಿಶ್ವರೂಪವನ್ನು ಮರೆಸಿ ನಿಜ ರೂಪವನ್ನು ತೋರಿದನು. ಎಲ್ಲರೂ ಆ ಮಗುವನ್ನು, ಹರಬಾಲ, ಶಿವಬಾಲ, ಘನಮಹಿಮಲೋಲ ಶರಣು ಶರಣೂ, ಹರಬಾಲ ಶಿವಬಾಲ ನಿಜ ಭಕ್ತಿ ಲೋಲ ಶರಣು ಶರಣೂ, ಹತ ಮಾಯ ದೈತ್ಯಕಾಯ ವಿಜಿತಕಲಿಮಾಯಾ ಶರಣು ಶರಣೂ, ಜಿತಕಾಲನುತ ಲೀಲ ಶರಣು, ಜನಲೋಲ ಶರಣು ಶರಣೂ, ವಿಶ್ವಾಸ ವಿಶ್ವಾಂಗ ವಿಶ್ವ ಸ್ವರೂಪ ಶರಣು ಶರಣೂ, ವಿಶ್ವಾದಿ ವಿಶ್ವಾಂತ್ಯ ವಿಶ್ವನಿರ್ಮಾತಂ ಶರಣು ಶರಣೂ ಎಂದು ಸ್ತುತಿಸಿದರು. ರತ್ನ ಸ್ವರೂಪದ ಆದ್ಯಂತವೇನನ್ನೂ ಅರಿ ಯದೇ ಗುರುವೆನಿಸಿದ ನಮ್ಮ ಶಿರವುಳುಹಬೇಕೆಂದು ನಮಸ್ಕರಿಸಿದರು. ನಮೋ ನಮಸ್ತೇ ನಮಸ್ತೇ ನಿರ್ಮಾಯ ನಿಷ್ಕಾಮ ನಿತ್ಯಾಯ ನಿರ್ದ್ವಂದ್ವ ಶತ್ವಾಯ ನಿರ್ಗುಣಾರಾಧ್ಯಾಯ ನಿರ್ಭೀತ ತತ್ವಾಯ ಅಭಯಾಮರಾಧ್ಯಾಯ ನಿತ್ಯಾನಿರಾಕಾರ ನಿರ್ಮೋಹ ನಿಕ್ಷಾಮ ನಿರ್ಲಿಪ್ತ ತತ್ವಾಯ ಮಾಯಾ ಮಹಾ ತತ್ವಂಗಳಿಗಾದಿಯಾಗಿ ಶ್ರೀ ಶಿವತತ್ವದೂರ್ಧ್ವಮುಖದಲ್ಲಿ ತಲೆ ದೋರಿ ವರನಿರಂಜನ ಮಹಾಮೂರ್ತಿಯೇ ನೀ ಜಗದಾರಾಧ್ಯನಾದ ಪರ ವಸ್ತುವೇ ಚಿನ್ಮಯ ಚಿದಾಕಾರ, ಚಿದ್ರೂಪ, ಚಿದ್ವೇಷ, ಸತ್ಕಾಯ, ಸದ್ಭಾವ, ಸದ್ರೂಪ, ಸದಾಚಾರ ನಿತ್ಯನಿಗಮಾಗಮಸ್ತುತಿಗೇಯ ನಿರ್ಮಯ ಸಚರಾ ಚರಂಗಳೂ ಚೇತನವೇ ಜಗದಾದಿಚೇತನವೇ ಕಾಯೆಮ್ಮ ನಮ್ಮ ಅಹಂಭಾವ

ಗಳ ನಿನ್ನಯ ಮಾತಾ ದೃಷ್ಟಿಯಿಂದ ನೋಡಿ ಪರಿಹರಿಸಿ ನಿನ್ನಡಿಗರ ಮಾಡಿ ದೇಹಸದ್ಭಾವ ಹಿರಿಕಿರಿದನರಿಯದಿಹ ನಿನ್ನರಿವಿನಾ ನಮ್ಮ ಭವವರುಹಿ ಪರ ಪುಣ್ಯಕರದಿಷ್ಟದಿಂದೆಮ್ಮ ಶುಭಾವಕರಣಗಳ ಶ್ರುತಿಗಾಣಿಸೈ ನಿನ್ನ ಪದ ಶರಣು ಶರಣೆಂಬೆವೈ ಶರಣಾಗಿ ಬಂದೆವೈ ಕೈಬಿಡದನುಗ್ರಹಿಸಿ ಕಾಯ ಕಡೆಯಾಗಿಸೈ ಶರಣು ಶರಣು, ಜನಮಂದಾರ ಶರಣು, ಚಿರಭವದೂರ ಇಷ್ಟಾರ್ಥದಾಕಾರ ಶರಣು ಶರಣು, ಕರುಣಾಪರಾಮರ ಶರಣು ಶರಣು ಶರಣು ಸಿದ್ಧೇಶಾ ಶರಣು ಶರಣು ಎಂದು ನಮಿಸುವರು.

ಸ್ತುತಿಸಿ ನಮಸ್ಕರಿಸಿದ ಕೂಡಲೇ ಆ ಶಿವಗಣಂಗಳ ಲಿಂಗಗಳು ಅವರ ವರ ಕರಡಿಗೆಗಳಲ್ಲಿ ಬಂದು ನಿಂತವು. ತನ್ನನ್ನು ಎತ್ತಿಕೊಂಡು ಬಂದಿದ್ದವರ ನ್ನೆಲ್ಲಾ ನಿಮಗೆ ಗುಣಶಾಲಿಗಳಾದ ಮಕ್ಕಳಾಗಲೆಂದು ಹರಸಿ ಕಳಿಸಿದನು. ಜಂಗಮರೆಲ್ಲಾ ಸೇರಿ ನಿಜರೂಪುದೋರಬೇಕೆಂದು ಬೇಡಿಕೊಳ್ಳಲು ನಿಜರೂಪ ತೋರಿಸಿದನು. ಎಲ್ಲ ಜಂಗಮರೂ ಸೇರಿ ಪಾದಪೂಜೆಮಾಡಿ ಕರುಣಪ್ರಸಾದ ವನ್ನು ಪಡೆದರು.

ಪ್ರಸಾದವಿನಿಯೋಗವಾಯಿತು. ಷಡ್ರಸಾನ್ನ ಸಕ್ಕರೆ ಚಿಲುಪಾಲು ಶಾಲ್ಯಾನ್ನ ಪರಮಾನ್ನಗಳನ್ನು ನೀಡಿ ಶಿವಾರ್ಪಣೆಗಪ್ಪಣೆ ಕೊಡಲು ಎಲ್ಲರೂ ಅರ್ಪಿತಮಾಡಿ ಶೇಷವನ್ನು ಸವಿದು ತೃಪ್ತರಾದರು. ಆಕಾಶದಲ್ಲಿ ದೇವತೆಗಳು ಈ ಸಿದ್ಧರ ಪ್ರಸಾದ ಪಾತ್ರರಾದ ಇವರೇ ಜೀವರುತ್ತಮರು. ಹರದನಹಳ್ಳಿಯೇ ಭೂಕೈಲಾಸ. ಈ ಊರಿನವರೆಲ್ಲರೂ ಹರಗಣರು. ಜ್ಞಾನಾಂಗನೆಯೇ ಗೌರಿ, ಮಲ್ಲಿಕಾರ್ಜುನನೇ ಶಿವ, ಸಿದ್ಧಲಿಂಗನೇ ಓಂಕಾರನೆಂದು ಹೊಗಳಿ ಹೂಮಳೆ ಗರೆದರು. ಹೀಗೆ ಬಾಲಲೀಲೆಗಳನ್ನು ಕಳೆದ ಸಿದ್ಧಲಿಂಗನು ಐದನೆಯ ವರುಷ ಮುಟ್ಟಿದನು.

ವಿದ್ಯಾಭ್ಯಾಸ :

ಬಾಲಲೀಲೆ ಕಳೆದ ಬಾಲಕನಿಗೆ ಐದು ವರುಷಗಳು ತುಂಬಿದವು. ಓಂನಾಮ ಪೂಜೆಯನ್ನು ಮಾಡಿಸಿ ಹುಡುಗನನ್ನು ಮಠಕ್ಕೆ ಹಾಕಿದರು.

ಉಪಾಧ್ಯಾಯರು (ಓಂಕಾರವನ್ನು ಬರೆದು) ಓಂ ಎಂದು ಹೇಳು, ತಿದ್ದು ಎಂದರು.

ಸಿದ್ಧಲಿಂಗ— ಇದರ ಅರ್ಥವೇನು ?

ಉಪಾಧ್ಯಾಯರು— ಸುಮ್ಮನೆ ಬರೆ ಎಂದು ಕೋಲನ್ನು ತೋರಿಸಿ ಬೆದರಿಸಿದರು.

ಅವರು ಹೇಳಿದಂತೆ ಬರೆದನು. ಉಪಾಧ್ಯಾಯರು ಊಟಕ್ಕೆ ಮನೆಗೆ ಹೋದರು. ಇತ್ತ ಸಿದ್ಧಲಿಂಗನು ಹುಡುಗರನ್ನು ಸೇರಿಸಿಕೊಂಡು ಉಪಾಧ್ಯಾಯರು ಓಂ ಎಂಬುದನ್ನು ಬರೆಯಲು ಕಲಿಸುತ್ತಾರೆ. ಅದರ ಅರ್ಥವರಿಯರವರು. ಓಂ ಎಂದರೆ ಜನನ-ಮರಣವನ್ನು ನಾಶಮಾಡುವ ಶಿವ. ಸಾಧಿಸಿದರೆ ಜನನ-ಮರಣಗಳನ್ನು ನಾಶಮಾಡುವ ಶಿವ ವಿದ್ಯೆಯನ್ನೇ ಸಾಧಿಸಬೇಕು. ಈ ದೇಹ ಅಸ್ಥಿರ, ಈ ಜೀವನವೂ ಅಸ್ಥಿರ, ಧರ್ಮವೊಂದೇ ಸ್ಥಿರ. ಓಂಕಾರವು ಶಿವಸ್ವರೂಪ. ಅದಕ್ಕೇ ಅಕ್ಷರಗಳನ್ನು ಬರೆಯುವ ಮೊದಲು ಓಂ ನಮಃ ಎಂದು ಬರೆಸುವುದು. ಓಂ ನಮಃ ಎಂದರೆ ಸತ್ಯವಾದ ಶಿವನಿಗೆ ನಮಸ್ಕಾರ ಎಂದರ್ಥ.

ಈ ದೇಹವು ಮಾಂಸದ ಗೂಡು, ರಕ್ತದ ಹೊಂಡ, ಕೀವಿನ ಕುಂಡ, ಮಾಂಸದ ಖಂಡ, ಮೂಳೆಯ ಮನೆ, ಹುಡುಕಿದರೆ ಶರೀರದಲ್ಲಿ ಏನೇನೂ ಹುರುಳಿಲ್ಲ. ಈ ದೇಹಕ್ಕೆ ಶಿವ ಸ್ವರೂಪವಾದ ಓಂಕಾರವು ಬಂದು ಸೇರಿ ಉಸಿರಾಡಿಸಿ ಎಲ್ಲಾ ಕೆಲಸಗಳನ್ನು ಮಾಡಿಸುತ್ತದೆ.

ಅದು ಬೇರಾದರೆ ಆಗಲೇ ಮರಣ ಈ ಶರೀರವು ಆಗ ಮರದ ತುಂಡಿನಂತೆ ಏನೂ ಮಾಡಲಾರದೆ ಬಿದ್ದು ಬಿಡುವುದು. ಅದೇ ಮರಣ. ಈ ಓಂಕಾರಕ್ಕೆ ಸತ್ ಎಂಬು ಹೆಸರು. ಅದು ಅಗಲಿದಾಗ ಸತ್ ಹೋದರು ಎಂದರೆ 'ಸತ್ತು ಹೋದರು ಎನ್ನುವರು. ಇದೇ ನಿಜವಾದ ವಿದ್ಯೆ. ಇದನ್ನು ಮರೆಯಬೇಡಿ.

ಜೀವನು ನಾಯಿ, ಕರಡಿ, ಹಂದಿ, ಹದ್ದು, ಕಾಗೆ, ಕತ್ತೆ, ಪಶುಪಕ್ಷಿಯ ನಾನಾ ಯೋನಿಗಳಲ್ಲಿ ಹುಟ್ಟಿ ಕಡೆಗೆ ಮಾನವ ಜನ್ಮವನ್ನೆತ್ತಿ ನಾನಾ ಕರ್ಮಗಳಲ್ಲಿ ತೊಳಲುತ್ತಿರುವನು. ತಾಯಿ ಗರ್ಭದಲ್ಲಿದ್ದಾಗ, ಮಲ ಮೂತ್ರಗಳ ಕೂಪದಲ್ಲಿ ರೋತೆಯ ಸ್ಥಳದಲ್ಲಿ ಹುಳುಗಳ ಕಡಿತದಿಂದ ಮಾಸಿನ ಬಂಧನದಿಂದ ಬಿಗಿಯಲ್ಪಟ್ಟು ಕಳ್ಳನಂತೆ ಕುಳಿತಿರುವನು. ಒಂಭತ್ತು ತಿಂಗಳು ತುಂಬಲು ದೈವೇಚ್ಛೆಯಿಂದ ಹೊರಹೊರಟು ಭೂಮಿಗೆ ಬೀಳುವನು. ಅಲ್ಲಿ ಗಾಳಿಯು ತಗುಲಿ ಶಿವಧ್ಯಾನವು ತಪ್ಪಿ ಅಜ್ಞಾನವು ಕವುಚಿ ಬಾಲಕನಾಗಿ ಅಳುತ್ತಿರುವನು. ಮಲಮೂತ್ರಗಳಲ್ಲಿ ಬಿದ್ದು ಹೊರಳುತ್ತಾ ಎಳುವು ಗುಣಿ—ದೃಷ್ಟಿ ಸಿಡುಬು ಭೂತಗಂಡಾಂತರಗಳನ್ನು ಕಳೆದು ಮೊಲೆಹಾಲೆಂಬ ತಿಳಿಗೀವನ್ನು ಕುಡಿದು ಬೆಳೆಯುವನು. ಉಂಡುದನ್ನೇ ಉಂಡು ಹೊದ್ದುದನ್ನೇ ಹೊದೆದು ಬಾಲಕರನ್ನು ಕೂಡಿ ಆಡುತ್ತ ಕಂಡವರನ್ನು ದೂರುತ್ತಾ, ನಾಯಿ, ಹಾವು, ಚೇಳು, ಕತ್ತಲು, ಸಿಡಿಲು, ಮಿಂಚು, ಬಿಸಿಲು, ಗಾಳಿ, ಚಳಿ, ಜಲ, ಅಗ್ನಿ, ಪಶು ಮೊದಲಾದ ಗಂಡಾಂತರಗಳನ್ನು ಕಳೆದು ಬೆಳೆಯುವನು. ಯೌವನ ಬರಲು ಮನ್ಮಥಬಾಧೆಗೊಳಗಾಗಿ ಲಲನೆಯರ ರತಿಭೋಗವನ್ನು ಬಯಸುವನು. ಮಿದುಳಿನ ಮುಖವನ್ನು ಚಂದಿರನೆಂದು, ನೀರಗಳೆಯಂತಿರುವ ಕಣ್ಣನ್ನು ಕನ್ನೈದಿಲೆಯೆಂದು, ಕೆಂಪಗಿರುವ ಖಂಡದ ತುಟಿಯನ್ನು ತೊಂಡೆಯ ಹಣ್ಣೆಂದು, ಮಾಂಸದ ಮುದ್ದೆಯಾದ ಮೊಲೆಯನ್ನು ತಾವರೆಯೆಂದು, ಎಳೆಯ ಚರ್ಮದ ಮೈಯನ್ನು ಹೊಂಬಣ್ಣದ ಕಳೆಯೆಂದು ಕಾಮಿಸುವನು. ಆ ಕಾಂತೆಯು ಮುಪ್ಪಾಗಲು ಬಲು ಮೂಳೆಗಳು ಹಾಯುವು ದನ್ನರಿಯದ ಹೊಲೆಯಲ್ಲಿ ಹುಟ್ಟಿ ಹೊಲೆಯಲ್ಲಿ ಬೆಳೆದು ಹೊಲೆಯನ್ನು ಕಳೆಯದವನು ಪುನಃ ಹೊಲೆ ಜನ್ಮವೆತ್ತುವನು. ಹುಟ್ಟಿದ ಮಾರ್ಗವನ್ನು ಬಯಸದೆ ಬಿಟ್ಟವನು ಪರಲೋಕವನ್ನು ಪಡೆಯುವನು. ನಾವು ತಿಂದ ಅನ್ನವು ಏಳು ದಿನಕ್ಕೆ ಶುದ್ಧವಾಗುವುದು. ಮತ್ತೇಳು ದಿನಕ್ಕೆ ರಕ್ತವಾಗುವುದು. ಮತ್ತೇಳು ದಿನಕ್ಕೆ ಮಾಂಸವಾಗುವುದು. ಮತ್ತೇಳು ದಿವಸಕ್ಕೆ ಮೇದಸ್ಸಾವುದು. ಮತ್ತೇಳು ದಿನಕ್ಕೆ ಅಶುದ್ಧವಾಗುವುದು. ಮತ್ತೇಳು ದಿನಕ್ಕೆ ಮಜ್ಜೆಯಾಗುವುದು. ಹೀಗೆ ೪೯ ದಿನಗಳಿಗೆ ಪುಟಪಾಕ ಪರಿಶೋಧಿತವಾಗಿ ಕಾಸಿದ ತುಪ್ಪದಂತೆ ನಿಲ್ಲುವುದೇ ವೀರ್ಯ. ಒಂದು ತೊಟ್ಟು ವೀರ್ಯವು ೪೯×೪೯

೨೪೦೧ ತೊಟ್ಟು ರಕ್ತಕ್ಕೆ ಸಮ, ಅಂಥ ವೀರ್ಯವನ್ನು ತಡೆದರೆ ಊರ್ಧ್ವ ಮುಖವಾಗಿ ಮುನಿ ಮತ್ತು ಕಾಲಜ್ಞಾನಿಯಾಗುವನು. ಮಹಾಬಲಶಾಲಿ ಯಾಗುವನು. ಅವನು ಬಯಸಿದ ಸಿದ್ಧಿಗಳೆಲ್ಲವೂ ಇಚ್ಛಾಮಾತ್ರದಿಂದ ಸಿದ್ಧಿಸುವವು. ಅವನ ಶರೀರದಲ್ಲಿ ೩೩ ಕೋಟಿ ದೇವತೆಗಳು ಬಂದು ನೆಲಸಿ ಅವನ ಹಗೆಗಳನ್ನು ದಮನ ಮಾಡುತ್ತಾ ಅವನ ಸ್ನೇಹಿತರನ್ನು ರಕ್ಷಿಸುತ್ತಾ ಬರುವರು. ಇದರಿಂದಲೇ ಮಹಾ ಮಹಾ ಮಹಿಮರೆಲ್ಲಾ ಬ್ರಹ್ಮಚರ್ಯ ವ್ರತಸ್ಥರಾಗಿ ಊರ್ಧ್ವರೇತರರಾಗಿರುವುದು. ಅದೇ ಇಲ್ಲದಿದ್ದರೆ ಅವರು ಸಾಮಾನ್ಯ ಮನುಷ್ಯರಾಗಿ ಬಿಡುತ್ತಿದ್ದರು. ಇಂತಹ ವೀರ್ಯವನ್ನು ಪುನಃ ಪುನಃ ಯೋನಿ ಮಾರ್ಗಕ್ಕೆ ಸುರಿವ ಲೌಕಿಕರನ್ನು ನೋಡಿ ಶರೀರವು "ತುಪ್ಪದ ಗಡಿಗೆ ತಿಪ್ಪೆಯ ಮೇಲೆ ಬಿತ್ತು ಒಪ್ಪವರಿಯದೇ ಮಾಯೆಗೆ ಸೋತರು" ಎಂದು ಮನಮರುಗಿದ್ದಾರೆ. ಈ ವೇದಾಂತ ಈ ದೇಹದ ರಹಸ್ಯವು ಗಟ್ಟಿ ಗರಿಗಲ್ಲದೇ ಕೆಟ್ಟ ಜೀವಿಗಳಿಗೆ ಹಿಡಿಸುವುದಿಲ್ಲ. ವೃದ್ಧಾಪ್ಯದಲ್ಲಿ ತನ್ನ ಮಾತನ್ನು ಸತಿ ಪುತ್ರರು ಕೇಳುವುದಿಲ್ಲ. ಶರೀರವು ಹಣ್ಣಾಗುವುದು. ಕಣ್ಣು ದೃಷ್ಟಿ ಕೈಕಾಲು ಮುಷ್ಟಿ ತಪ್ಪಲು ದುಃಖಿಸುವನು. ಕಾಲವು ತುಂಬಿದರೆ ಬಾಲೆ ಭಂಡಾರ ಪುತ್ರರು ಭಾಗ್ಯಗಳನ್ನು ಬಿಟ್ಟು ಹೋಗಲಾರದೇ ಕಂಗೆಟ್ಟು ಕೊರಗುವನು. ಬಲು ಕರ್ಮವನ್ನು ಮಾಡಿದ ಪಾಪಿಯನ್ನು ಯಮಲೋಕಕ್ಕೂ ಧರ್ಮವನ್ನು ಮಾಡಿದ ಪುಣ್ಯಾತ್ಮನನ್ನು ಶಿವದೂತರು ಕೈಲಾಸಕ್ಕೂ ಕರೆದೊಯ್ಯುವರು ಎಂದು ಪುಟ್ಟ ಬಾಲಕನು ಪುಟ್ಟ ಪುಟ್ಟ ಮಕ್ಕಳಿಗೆ ಹೇಳಿದನು. ಆಗಲಾ ಮಕ್ಕಳು ಪಾಪಿಯ ಕಥೆಯೇನು ಪುಣ್ಯವಂತರ ಕಥೆಯೇನು ತಿಳಿಸೆಂದು ಕೇಳಿಕೊಂಡರು.

ಪಾಪಿಯ ಕಥೆ ಕೇಳಿ. ಪಾಪವನ್ನು ಮಾಡಿದ ಜೀವಾತ್ಮನ ಕೊರಳಿಗೆ ಯಮದೂತರು ಯಮಪಾಶವನ್ನು ಬೀರಿ ಜೀರ ಕುಣಿಕೆ ಬಿಗಿದು ದರದರ ಸೆಳೆದುಕೊಂಡು ಯಮಪುರದ ಕಡೆಗೆ ಹೋಗುವರು. ದಾರಿಯಲ್ಲಿ ಕೆಂಗಿಡಿ ಗಣ್ಣು ತೋರಿಸಿ ಆರ್ಭಟಿಸುತ್ತಾ ಮುಂಗೋಪದಿಂದ ಗರ್ಜಿಸುತ್ತಿರಲು ಅಂಗ ಹೀನರಾದ ಯಮಭಟರು ಆ ಜೀವನಿಗೆ ಗುಡ್ಡದಂತೆ ಕಾಣಿಸುವರು. ಅಡವಿ, ಅರಣ್ಯ, ಗಿಡಕಲ್ಲು, ಮುಳ್ಳೆಂದು ನೋಡದೇ ದರದರನೆಳೆಯುತ್ತಿರಲು ಬಾಧೆ

ಮನ್ನು ತಡೆಯಲಾರದೇ ಕಂಗೆಟ್ಟು ಹಸಿದೆನೆಂದರೆ ಆ ಜೀವಾತ್ಮನ ಬಾಯಿಗೆ ಸುಡಿಮಣ್ಣನ್ನು ಹೊಯ್ಯುವರು. ಉರಿಯುವ ಬಿಸಿಲಲ್ಲಿ ಬೆಟ್ಟವೇರಿಸಿ ಝುರಿಯಿಂದ ಕಮರಿಗೆ ನೂಕಿ ನರಿ ನಾಯಿಗಳಿಂದ ಕಚ್ಚಿಸುತ್ತಾ ಯಮನಗರಕ್ಕೆ ಎಳೆತರುವರು. ಕೈಯಲ್ಲಿ ಹಿಡಿದ ಗುದಿಗೆಯಿಂದ ಬಡಿಯುತ್ತಾ ಕಾಲಲೊದೆದು ನೂಕಿ ಮುಂದಲೆ ಹಿಡಿದೆಳೆತಂದು ಯಮರಾಜನ ಮುಂದೆ ನಿಲ್ಲಿಸುವರು. ಆ ಯಮನಿಗೆ ಕೋಣವೇ ವಾಹನ. ಏನು ಹೇಳಿದರೂ ಬುದ್ಧೀ–ಬುದ್ಧೀ ಎಂದು ಸೇವಿಸುವ ಭಟರು ಎಡಬಲಗಳಲ್ಲಿ ಒಂದೊಂದು ಕೋಟಿ. ಅವರ ನಡುವೆ ಯಮನು ದಂಡಧಾರಿಯಾಗಿ ಸಿಂಹಾಸನದಲ್ಲಿ ಕುಳಿತಿರುವನು. ದ್ರೋಹಿಯ ಮುಖವನ್ನು ಕಾಣುತ್ತಲೇ ಕೋಪಿಸಿ ಹಾ! ಎಂದು ಗರ್ಜಿಸುತ್ತಾ ಈ ನರಕಿಗೆ ಈ ದಿನವೇ ಆಜ್ಞೆ ವಿಧಿಸಬೇಕೆಂದು ಕರಣಿಕನಿಗೆ ಹೇಳುವನು. ಆಗ ಅವರು ಸಾಲು ಸಾಲಾದ ಲೆಕ್ಕವನ್ನು ತೆಗೆದುನೋಡಿ ಇವನು ಲೆಕ್ಕವಿಲ್ಲದಷ್ಟು ಪಾಪಗಳನ್ನು ಮಾಡಿದ್ದಾನೆ. ಪರನಾರಿಗೆ ಸೋತಿರುವನು. ಪರಧನವನ್ನು ಕದ್ದಿರುವನು. ಪರರ ಬಾಳನ್ನು ಕೆಡಿಸಿರುವನು. ಗುರುದ್ರೋಹವನ್ನು ಮಾಡಿರುವನು. ರಾಜಕಾರ್ಯಕ್ಕೊದಗದೇ ಯುದ್ಧದಲ್ಲಿ ಸೋತು ಓಡಿ ಬಂದಿರುವನು. ಕೆರೆ ಬಾವಿಗಳನ್ನೊಡೆದಿರುವನು. ಫಲಬಿಡುವ ಮರಗಳನ್ನು ಕಡಿದಿರುವನು. ತಾಯಿ–ತಂದೆಗಳನ್ನು ಬಿಟ್ಟನು. ದಾಸಿವೇಶ್ಯೆಯರನ್ನು ಕೂಡಿರುವನು. ಕುದುರೆಯನ್ನು ಕೊಂದಿರುವನು, ಗೋವನ್ನು ಸಾಯಿಸಿರುವನು. ದೇವಾಲಯಗಳನ್ನೇ ಕೆಡವಿರುವನು. ಬ್ರಾಹ್ಮಣರ ಬದ್ಧದ್ವೇಷಿ, ಶಿಶುಗಳನ್ನು ಕೊಂದಿರುವನು. ತನ್ನ ಕುಲವನ್ನು ಹಾಳುಗೆಡವಿದನು. ಹಸಿದು ಬಂದವರಿಗೆ ಅನ್ನವಿಕ್ಕದೆ ಹೋದ ಲೋಭಿ, ಪರಮಘಾತುಕ. ದಾರಿಕಟ್ಟಿ ಜನರ ತಲೆ ಹೊಡೆದಿರುವನು, ಪ್ರಜೆಗಳನ್ನು ಕೆಡಿಸಿದ ದುರ್ಮಾರ್ಗನು, ಮತನಿಂದೆ ಮಾಡಿರುವನು, ಶಿವಲಿಂಗವನ್ನು ಜರೆದವನು. ಜಂಗಮರನ್ನು ನಿಂದಿಸಿರುವನು, ವಿಭೂತಿಯನ್ನು ದ್ವೇಷಿಸಿರುವನು. ಭಾಷೆಯನ್ನು ಕೊಟ್ಟು ತಪ್ಪಿರುವನು. ವ್ರತಧರ್ಮಗಳನ್ನು ದೂಷಿಸಿದವನು. ಸ್ನೇಹದಲ್ಲಿ ಮೋಸ ಮಾಡಿರುವ ಪಾತಕನು ಎಂದು ಹೇಳುವರು. ಆ ಕರಣಿಕರ ಮಾತುಗಳನ್ನು ಕೇಳಿ ಯಮಧರ್ಮನು ಸಹಿಸದೇ ದೂತರನ್ನು ಕರೆದು ಈ ನರಕಿಗೆ ತಕ್ಕ ಶಿಕ್ಷೆ ಮಾಡಿರೆಂದು ಆಜ್ಞಾಪಿಸುವನು.

ಒಡೆಯನ ಅಪ್ಪಣೆಯಂತೆ ಆ ದೂತರು ಆ ಜೀವನನ್ನೆಳೆದು ತಂದು ಬಡಿಗೋಲಿನಿಂದ ಬಡಿಯುತ್ತಾ, ಸಿಡಿಲಿನಿಂದ ಆರ್ಭಟಿಸುತ್ತಾ ಸೀಸವನ್ನು ಕಾಯಿಸಿ ಬಾಯಿಗೆ ಬಿಡುವರು. ಕಾಸಿದ ಗುಂಡನ್ನು ಕೈಗೆ ಕೊಡುವರು. ಉಗುರು ಸಂದಿಗೆ ಮುಳ್ಳು ಚುಚ್ಚುವರು. ಕಣ್ಣಿಗೆ ಸುಣ್ಣ ಹಚ್ಚುವರು. ತಲೆಗೆ ಬೆಂಕಿ ಹೊಯ್ಯುವರು. ಎದೆಗೆ ಗೂಟ ಬಡಿಯುವರು. ಉರಿಯೊಳಗೆ ನೂಕಿ ತುಪ್ಪ ಹೊಯ್ಯುವರು. ಗಾಣದಲ್ಲಿ ಅರೆಯುವರು, ಬೀಸುವ ಕಲ್ಲಿನಿಂದ ಬೀಸುವರು, ಹುರಿಯುವ ಓಡಿನಲ್ಲಿ ಹಾಕಿ ಹುರಿಯುವರು. ಶೂಲಕ್ಕೆ ಹಾಕುವರು. ಕಲ್ಲುಗುಂಡುಗಳನ್ನು ಹಾಕುವರು. ಕಾಯ್ದ ಹಾರೆಯನ್ನು ಹೀಸಿಸುವರು. ಕೊಳ್ಳಿಯಿಂದ ಸುಡುವರು. ಕಾದ ಕಂಬವನ್ನು ತಬ್ಬಿಸುವರು. ಮೇಲಕ್ಕೆ ಹಾರಿಸಿ ಕೆಳಕ್ಕೆ ಕುಕ್ಕರಿಸುವರು. ಮೂಢಾ ಎಂದು ಬೈಯುವರು. ಕಡೆಗೆ ಆ ಜೀವವನ್ನು ಯಮಭಟರು ಆಳಿ ಮುಳುಗೆಂದು ಜೀವನರಕದಲ್ಲಿ ಬೀಳಗೆಡಹುವರು, ಪಾತಾಳದವರೆಗೂ ಆಳವಾಗಿರುವ ವೈತರಣಿಯ ನದಿ, ಅದರಲ್ಲಿ ದುರ್ವಾಸನೆಯ ಮಲ-ಮೂತ್ರ-ರಕ್ತ-ಕೀವಿನ ಪ್ರವಾಹದಲ್ಲಿ ಆ ಪಾಪರು ಅನಂತಕಾಲದವರೆಗೂ ಮುಳುಗಿ ಏಳುತ್ತಿರುವರು. ಮೂರು ಮೂರ್ತಿಗಳಿಗೆ ಕರ್ತನು, ಆರು ತತ್ವಗಳಿಗೆ ದೇವನು ಆದ ಪರಶಿವನ ಪಾದ ನೆನೆಯುವುದೊಂದಲ್ಲದೇ ಈ ಹೇರಳ ನರಕಬಾಧೆ ತಪ್ಪಲು ಬೇರೆ ಉಪಾಯವೇ ಇಲ್ಲವೆಂದು ಸಿದ್ಧಲಿಂಗಮುರಿಯು ಆ ಜಾಣಮುರಿಗಳಿಗೆ ಪಾಪಿಯ ಜೀವನ ವೃತ್ತಾಂತವನ್ನು ತಿಳಿಸಿದನು. ಆ ಮುರಿಗಳು ಸಿದ್ಧಲಿಂಗಮುರಿಗೆ ಮಾನಸಾರೆ ವಂದಿಸಿ ಇನ್ನು ಪುಣ್ಯಾತ್ಮನ ಕಥೆಯನ್ನು ಹೇಳೆಂದು ಕೇಳಿಕೊಂಡರು.

ಪುಣ್ಯಾತ್ಮನ ಕಥೆಯನ್ನು ಕೇಳಿ, ಪುಣ್ಯವನ್ನಾಚರಿಸಿದ ಜೀವನು ಜೀವಾತ್ಮಕ್ಕೆ ಪರಶಿವನು ಪದವಿಯನ್ನೇ ಪಾಲಿಸುವೆನೆಂದು ಕರೆತನ್ನಿರೆಂದು ತನ್ನ ಭಕ್ತರಿಗೆ ಹೇಳಲು ಆ ಶಿವದೂತರು ಬಂದು ಆ ಸಂಪನ್ನನನ್ನು ಕರೆಯುವರು. ಹಣೆಯಲ್ಲಿ ವಿಭೂತಿರೇಖೆ, ಕೊರಳಲ್ಲಿ ರುದ್ರಾಕ್ಷಿ ಸರ, ಕರದಲ್ಲಿ ಶೂಲ ಡಮರುಗವಿಡಿದ ಶಿವಕಿಂಕರರು, ಪುಣ್ಯಾತ್ಮನ ಮನೆಗೆ ಬಂದು ನಮ್ಮಯ್ಯಾ ನೀ ಬಾರೊ ನಮ್ಮಣ್ಣಾ ! ನೀ ಬಾರೊ ನೀನೆಮ್ಮ ಲೋಕವನ್ನಾಳು ಬಾರೊ. ಬೇಗ ಬಾ ದಮ್ಮಯ್ಯ ಎಂದು ಬಿನ್ನವಿಸಿ ಕರೆಯುವರು. ಕರೆಯುವ ಶಿವದೂತರನ್ನು

ನೋಡಿ ಹರಹರ ಎಂದು ಹೇಳಲು ಆ ಮಹಾತ್ಮನ ಕೈಹಿಡಿದು, ಹಸ್ತ ಪವಾಡ ವಸ್ತು ಕೊಟ್ಟು ರಾಜ ಮರ್ಯಾದೆಯನ್ನು ಮಾಡುವರು. ನಡೆ ಮುಡಿಯನ್ನು ಹಾಸಿ ಮನೆಯಿಂದ ನಡೆಸುತ್ತಾ ಸಡಗರದಿಂದ ಪುಷ್ಪಕವನ್ನೇರಿಸುವರು. ಕೂಡಲೇ ದುಂದುಭಿಗಳು ಮೊಳಗುವುವು. ಸುವಾಸನೆಯ ಮರ್ಯಾದೆಯಿಂದ ನಡೆಸುತ್ತಾ ಗುಳುವ ಸಾಂಬ್ರಾಣಿ ಧೂಪದ ಹೊಗೆ ಹರಡುವುದು, ವಾದ್ಯಗಳು ಭೋರ್ಗರೆಯುವುವು. ಹರ್ಷದಿಂದ ಉಘೆ, ಉಘೆ ಎಂದು ಮಹಾತ್ಮನ ರಥ ವನ್ನು ಶಿವದೂತರು ನಡೆಸುವರು. ಅಂದವಾದ ರೇಶ್ಮೆಯ ಮೇಲ್ಕಟ್ಟಿನ ಚಪ್ಪರವಿರುವ ಹಾದಿಯಲ್ಲಿ ಅಪ್ಪಾ ! ನೀನು ಇಲ್ಲಿ ವಿಶ್ರಮಿಸಿಕೊ ಎಂದು ಸುಕೃತ ಜೀವನನ್ನು ಇಳಿಸುವರು.

ದಾರಿಯಲ್ಲಿ ಅಲ್ಲಿಗಲ್ಲಿರುವ ಛತ್ರಗಳಲ್ಲಿ, ಅಮೃತಾನ್ನ ಕಟ್ಟಾನ್ನ ಎಳೆ ನೀರುಗಳನ್ನು ಕೊಡುವರು. ಆ ಪುಣ್ಯಾತ್ಮನಿಗೆ ಉದ್ದಕ್ಕೂ ಇರುವ ಅರವಟ್ಟಿಗೆ ಗಳಲ್ಲಿ ಪನ್ನೀರು ಪಾನಕ ಕುಡಿಸುವರು. ದೇಹಕ್ಕೆ ಅಗಿಲು ಗಂಧವನ್ನು ಬಳಿದು ಕೊರಳಿಗೆ ಹೂವಿನ ಹಾರವನ್ನು ಹಾಕಿ ಬೀಸಣಿಗೆಯಿಂದ ಅನುವಾಗಿ ಬೀಸಿ ಉಪಚರಿಸುವರು. ಆ ಪರಲೋಕದಂಡನ ಎದುರಿಗೆ ದಂಡಧರನು ಖಂಡ ಸಕ್ಕರೆ, ಖರ್ಜೂರ, ದ್ರಾಕ್ಷಿಗಳೊಡನೆ ಬಂದು ಸ್ತುತಿಸಿ ಕಾಣಿಕೆಯಿತ್ತು ಕಳುಹಿಸಿಕೊಡುವನು. ಆಗ ಯಮಧರ್ಮರಾಯನು ಕರಣಿಕರಾದ ಚಿತ್ರ ಗುಪ್ತರನ್ನು ನೋಡಲು ಈತನು ಪುಣ್ಯಪಾತ್ರನು. ಹೇರಳವಾಗಿ ಕಟ್ಟೆ ಬಾವಿ ಗಳನ್ನು ತೆಗೆಯಿಸಿರುವನು. ನೂರೊಂದು ಜಾತಿಗೆ ಅನ್ನವನ್ನಿಡಿಸಿರುವನು. ಲೆಕ್ಕವಿಲ್ಲದಷ್ಟು ವನಗಳನ್ನು ಬೆಳೆಯಿಸಿರುವನು. ನೂರಾರು ಶಿವಗ್ರಂಥ ಗಳನ್ನು ಬರೆಸಿ ಹಂಚಿ ಜ್ಞಾನದಾನ ಮಾಡಿರುವನು. ಕೋಟಿ ಕನ್ಯಾದಾನ ಮಾಡಿರುವನು. ಬಹಳ ಸುವರ್ಣದಾನ ಮಾಡಿರುವನು. ಲೋಭವಿಲ್ಲದೇ ಷೋಡಶದಾನಗಳನ್ನು ಮಾಡಿರುವನೀತ ಧನ್ಯನು. ನಂಬಿಕೆಯನ್ನು ಕೊಟ್ಟು ನಡೆಸಿರುವನು. ಪ್ರಜೆಗಳನ್ನು ಹಿಂದಿಟ್ಟುಕೊಂಡು ಪಾಲಿಸಿರುವನು. ಇವನಿಂದ ಭೂಮಿ ಬೆಳೆಯುವುದು. ಇವನಿಂದ ಮಳೆ ಕರೆಯುವುದು.

ಇವನು ಏಕಪತ್ನೀವ್ರತದಲ್ಲಿದ್ದವನು, ಅನೇಕ ಕ್ಷೇತ್ರಗಳಲ್ಲಿ ಲಿಂಗಪೂಜೆ ಮಾಡಿರುವನು, ಮಾತಾಪಿತರ ಸೇವೆಯನ್ನು ಮಾಡಿರುವನು. ಧರ್ಮಕಟ್ಟಳೆ

ಗಳಲ್ಲಿದ್ದವನು. ಜಾತಿ ಕಟ್ಟಳೆಗಳನ್ನು ಪಾಲಿಸಿದವನು. ಭೂತದಯ ಕೂಡಿ ಬಾಳಿದವನಿವನು. ಇಹಪರ ಸಾಧಕನಾಗಿ ಗೃಹಸ್ಥನಾಗಿದ್ದವನಿವನು, ಗುರು ಬೋಧೆಯನ್ನು ಕೇಳಿ ವೇದಶಾಸ್ತ್ರಗಳನ್ನೋದಿ, ಭಿಕ್ಷಾನ್ನವನ್ನೆತ್ತಿ ಸವೆದು ಸ್ಥಿರ ಸುಖಿಯಾಗಿದ್ದ ಬ್ರಹ್ಮಚರ್ಯಾಶ್ರಮ ಧುರೀಣನಿವನು. ಇವನು ಸತಿಯೊಡಗೂಡಿ ನಾನಾವ್ರತಗಳನ್ನಾಚರಿಸಿದ ಗೃಹಸ್ಥನು. ಈತನು ವಾನ ಪ್ರಸ್ಥ ಆಶ್ರಮದಲ್ಲಿದ್ದ ಜಾಣನು. ಈ ಪುಣ್ಯಾತ್ಮನು ಈ ಷಣತ್ರಯಗಳನ್ನು ತೊರೆದು ಕರ್ಮಗಳನ್ನು ಹರಿದು ಪ್ರಣವಾಭ್ಯಾಸದಲ್ಲಿ ಮುಂದುವರೆದು ಈಶ್ವರ ನಾದ ಪರಮಸನ್ಯಾಸಿ ಈ ಮಹಾತ್ಮನು. ಜಾತಿವಿಜಾತಿಯೆನ್ನದೇ ಸರ್ವವೂ ಬ್ರಹ್ಮವೆಂದು ಭಾವಿಸುತ್ತಾನೆ. ಬ್ರಹ್ಮಸ್ವರೂಪನಾಗಿ ಶಿವನಲ್ಲಿ ಬೆರೆಯಲು ಹೋಗುತ್ತಿರುವ ಅವಧೂತನು. ಈ ಶರಣನು ಸುಟ್ಟ ಬೀಜದಂತೆ ಕರ್ಮಾ ಕರ್ಮಗಳನ್ನು ಬಿಟ್ಟು ಕಾಮನನ್ನು ಸುಟ್ಟ ಬೂದಿಯನ್ನಿಟ್ಟು ಹುಟ್ಟು ಹೊಂದದ ಪದವಿಗೆ ಹೋಗುವ ವೈರಾಗ್ಯದಿಟ್ಟನು ಎಂದು ಹೇಳುವರು.

ಆ ಪುಣ್ಯಾತ್ಮನು ಶಾಂತನಾಗಿ ಸಂತೋಷದಿಂದ ಕೈಲಾಸಗಿರಿಗೆ ಹೋಗು ವನು. ಅಲ್ಲಿ ಶಿವನು ಅನಂತ ಸಂಭ್ರಮದಿಂದ ಪ್ರೀತಿಯಿಂದ ಹಿಡಿದು ಆಲಿಂಗಿಸಿಕೊಂಡು ಬೇಗ ತೊಡೆಯಲ್ಲಿ ಕೂರಿಸಿಕೊಂಡು ಮೈದಡವಿ ಆ ಭಕ್ತ ನಿಗೆ ಸರ್ವಭೋಗವನ್ನು ಕರುಣಿಸುವನು. ಆ ಸತ್ಯಾತ್ಮನು ಕೈಲಾಸದಲ್ಲಿ ನಿತ್ಯಾ ನಂದ ಸಾಯುಜ್ಯ ಸಾಮ್ರಾಜ್ಯಾಧಿಪತ್ಯವನ್ನನುಭವಿಸುವನು ಎಂದು ಬಾಲಕ ರಿಗೆ ಪುಣ್ಯವಂತನ ಕಥೆಯನ್ನು ವಿವರಿಸುವನು. ಆ ಸಿದ್ಧಲಿಂಗ ಮರಿಯ ಬೋಧೆಯನ್ನು ಕೇಳದ ಪುಟ್ಟ ಮರಿಗಳು ಪಾಪಾಂಧಕಾರವನ್ನು ಕಳೆದು ಭ್ರಮರ ಕೀಟನ್ಯಾಯದಂತೆ ಸತ್ಯ ಪ್ರತಿಜ್ಞೆಯನ್ನು ತಳೆದು ಸನ್ಮಾರ್ಗನಿರತ ರಾದರು. ಸಿದ್ಧಲಿಂಗ ಮರಿಯೂ ಬಾಲಕರೊಡಗೂಡಿ ಸನ್ಮಾರ್ಗ ಭವಸ್ಮರಣೆ ಶಿವತತ್ವ ವಿಚಾರಗಳನ್ನು ಮಾಡುತ್ತಾ ಕಾಲಕಳೆದನು. ಸಿದ್ಧಲಿಂಗ ಮರಿಗೆ ಏಳನೆಯ ವರುಷ ತುಂಬಿತು.

ಮಠವನ್ನು ಸೇರಿದುದು :

ಓದಿ ಬಳಲಿ ಬಂದ ಬಾಲಕನನ್ನು ತಂದೆ ತಾಯಿಗಳು ಓಲೈಸಿ, ಮಧುರಾನ್ನದಿಂದ ತೃಪ್ತಿಪಡಿಸಿದರು. ಅನಂತರ ಮಗುವು ನೆರೆಹೊರೆಯ ಬಾಲಕರನ್ನು ಕೂಡಿಕೊಂಡು ವಿನೋದವಾಗಿ ಆಟಗಳನ್ನಾಡುತ್ತಾ ಕಾಲ ಕಳೆಯುವುದು. ಹೀಗಿರಲು ಒಂದು ದಿನ ತಂದೆ ತಾಯಿಗಳು ಬಾಲಕನನ್ನು ಹೊರಗೆ ಬಿಟ್ಟು ಶಿವಪೂಜೆಗೆ ಹೋದರು. ಶಿವಪೂಜಾ ಗೃಹದಲ್ಲಿದ್ದರೂ ಅವರ ಚಿತ್ತವು ಹರನಲ್ಲಿ ಬೆರೆಯದೇ ದಿಕ್ಕುದಿಕ್ಕಿನಲ್ಲಿ ಸಂಚರಿಸುತ್ತಾ ವಿಷಯ ದಲ್ಲಿ ಸಿಕ್ಕಿರಲು ಈ ಮೂರ್ತಿಯು ಅದನ್ನರಿತೂ ಅರಿಯದವನಂತಿದ್ದನು. ಅಷ್ಟರಲ್ಲಿ ಆ ಊರ ಯಜಮಾನರು ಬಂದು ನಿನ್ನ ಹೆತ್ತವರೆಲ್ಲಿರುವರು ? ಎಂದು ಕೊಸರಿ ಕೇಳಿದರು. ಆಗಲಾ ಸಿದ್ಧಲಿಂಗನು ಅಯ್ಯಾ, ಅವರು ಏನನ್ನೋ ನೆನೆಯುತ್ತಾ ಈ ಪುರದ ಕೊನೆಯ ಕೇರಿಯಲ್ಲಿ ನಿಂತಿದ್ದಾರೆ ಎಂದನು. ಮಗನ ಮಾತುಗಳನ್ನು ಕೇಳಿ ತಂದೆ ತಾಯಿಗಳು ಥಟ್ಟನೆ ಬಂದು ಮನೆಯಲ್ಲಿ ಶಿವಾರ್ಚನೆ ಮಾಡುತ್ತಿರುವ ನಾವು ಎಲ್ಲಿಗೆ ಹೋದೆವೆಂದು ಹೇಳುತ್ತಿರುವೆ ? ಎಂದು ಕೇಳಲು ಸಿದ್ಧಲಿಂಗನು ಹೌದು, ಹೌದು ಇಲ್ಲಿದ್ದುದು ಬರಿಯ ಬಿಂಬ, ಮನಸ್ಸು ಹೊಲಗೇರಿಯ ಹರಳನ ಮನೆ ಮುಂದೆ ನಿಂತಿತ್ತು. ಮನವಿದ್ದ ಕಡೆಯೇ ನೀವಿದ್ದರಲ್ಲದೆ ತನುವಿದ್ದಲ್ಲಿರಲಿಲ್ಲವೆಂದೆನು.

ಅಕ್ಷರಾಕ್ಷರ ನಿಜವಾದ ಮಗುವಿನ ಮಾತನ್ನು ಕೇಳಿ ಮೂಕರಾಗಿ ಇವನು ನಮ್ಮ ಮಗುವಲ್ಲ, ಸಾಕ್ಷಾತ್ ಭೂತನಾಥನು, ಸಾಕ್ಷಾತ್ ಪರಮ ಶಿವನು, ಪರಂಜ್ಯೋತಿಯು ಇವನೆಂದು ಹೊಗಳಿದರು. ಇದೆಲ್ಲಾ ನಿನಗೆ ಹೇಗೆ ತಿಳಿಯುತ್ತದಪ್ಪಾ ಎಂದು ಕೇಳಿದರು. ಅದಕ್ಕೆ ಮಗುವು ಪಕ್ಷಿಗೆ ಹಾರು ವುದನ್ನು ಯಾರು ಕಲಿಸಬೇಕು ? ನಾನು ಅರಿವಿನ ಕರುವು ಅರಿವೇ ನನ್ನ ಸ್ವರೂಪು. ತ್ರಿಕಾಲಜ್ಞಾನವು ನನಗಿದೆ. ಒಳಗೆ ಬೆಳಗುವ ಬೆಳಗಿಗೆ ಎಲ್ಲೆಲ್ಲಿ ಏನಾದುದೆಲ್ಲಾ ಕಾಣುತ್ತಿದೆ ಎಂದನು. ತಂದೆ–ತಾಯಿಗಳು ವಿಸ್ಮಿತರಾಗಿ ತಮ್ಮ ಪುಣ್ಯವನ್ನು ತೂಗುತ್ತಿದ್ದರು.

ಹಾಗೆಯೇ ಯೋಚನಾರೂಢರಾದ ಮುಗ್ಧ ಶರಣದಂಪತಿಗಳನ್ನು ಕುರಿತು ಸಿದ್ಧಲಿಂಗನು ಮಗುವಾಗಿ ನಿಮ್ಮಿಷ್ಟವನ್ನು ಸಲ್ಲಿಸಿದೆನು. ನಿಮ್ಮ

ಮಾತಿನಂತೆ ನಿಮ್ಮ ಗುರುಗಳ ವಶಕ್ಕೆ ನನ್ನನ್ನು ಒಪ್ಪಿಸಿಬಿಡಿ ಎಂದನು. ಆಗಲ ವರು ತಮ್ಮ ಮನಸ್ಸಿನಲ್ಲಿರುವಂತೆಯೇ ನುಡಿಯುತ್ತಿರುವ ಮಗುವನ್ನು ಸದ್ಗುರುವಿನ ಸೇವೆಗೆ ಸೇರಿಸುವುದೇ ಸರಿಯೆಂದು ಮಠಕ್ಕೆ ಕರೆತಂದರು. ಶಿವ ಕಳೆಯು ಪುತ್ಥಳಿಯಂತೆ ಥಳಥಳನೆ ತಳಿಸುತ್ತಾ ಬರುತ್ತಿರುವ ಶಿಶುವನ್ನು ಪುರ ಜನರು ದಾರಿಯುದ್ದಕ್ಕೂ ಸಾಲಾಗಿ ನಿಂತು ಅಚ್ಚರಿಗಣ್ಣಿನಿಂದ ಅನಿಮಿಷರಾಗಿ ನೋಡಿದರು. ಗುರುಗಳು ಬರುತ್ತಿರುವ ಶಿಶುವಿನ ಮುಖಕಾಂತಿಯನ್ನು ಕಂಡು ಕಾಮರಿಪುವೇ ಕೈಲಾಸದಿಂದಿಳಿದು ಭೂಮಿಗೆ ಬಂದಂತಿರುವನೆಂದು ಪ್ರೇಮಾನಂದದಿಂದ ಆಲಂಗಿಸಿದರು. ತಂದೆ–ತಾಯಿಗಳು ಜಡೆದೆಲೆ–ನಿಡುಗಣ್ಣ ಭಸಿತ ಮುಖದ ಮೃಡರೂಪಿನ ಶಿಶುವನ್ನು ಸಡಗರದಿಂದ ಸದ್ಗುರುವಿನಡಿಗೆ ಪೊಡಮಡಿಸಿದರು. ಗುರುರಾಯ, ಈ ಶಿಶುವು ನಮ್ಮ ಮನದಿಷ್ಟವನ್ನು ಸಲ್ಲಿಸಿದನು. ಇಲ್ಲಿಗೆ ಎಂಟು ವರುಷ ತುಂಬಿತು. ಇನ್ನು ಮಠದಲ್ಲಿ ಹಲವು ಕಾಲ ಗುರುಸೇವೆಯನ್ನು ಮಾಡಲಿ ಎಂದು ಬಾಲಕನನ್ನು ಪ್ರೀತಿಯಿಂದ ಗುರುಗಳಿಗೆ ಒಪ್ಪಿಸಿದರು.

ಹೂ ನೀರು ತರುವುದು :

ಸಿದ್ಧಲಿಂಗನು ಮಠವನ್ನು ಸೇರಿದೊಡನೆಯೇ ಶಾಸ್ತ್ರೋಕ್ತವಾಗಿ ದೀಕ್ಷೆ ಯನ್ನು ಮಾಡಿಸಿ ಪೂಜನಾರ್ಚನಾದಿ ಸಕಲ ವ್ಯವಹಾರಗಳಿಗೂ ಅಧಿಕಾರ ವನ್ನು ಕಲ್ಪಿಸಿಕೊಟ್ಟರು. ಸದ್ಯೋನಿರ್ವಾಣ ದೀಕ್ಷೆಗಳಿಂದ ಸ್ಥಲಗಳನ್ನು ಕೂಡಿಸಿ ಕ್ರಿಯಾಮೂರ್ತಿಯನ್ನಾಗಿ ಮಾಡಿದರು. ಅರಳುಗಣ್ಣುಗಳ ಹೊಳಪು, ಮಿರಗುವ ಮೈಬಣ್ಣಗಳ, ಕಿರುನಗೆಮೊಗದ ಚನ್ನಿಗನು ಮುಂಗಯ್ಯ ಕಂಕಣ, ರುದ್ರಾಕ್ಷಿಯಮಾಲೆ, ಹೊದೆದ ಕಾವಿ ವಸ್ತ್ರ, ಹೊಳೆವ ಹಣೆಯ ವಿಭೂತಿ, ಉದ್ದವಾಗಿರುವ ಕೆಂಜಡೆ. ಮುದ್ದು ಪಾದವಲ್ಲಿ ಧರಿಸಿದ ಜಂಗುಗಳಿಂದ ಸಿದ್ಧ ಲಿಂಗೇಶನು ಶೃಂಗಾರವಾದ ಬಾಲ ಜಂಗಮನಾಗಿ ಪೊರೆಗಳೆದ ಹಾವಿನಂತೆ, ಮಧ್ಯಾಹ್ನದ ಸೂರ್ಯನಂತೆ, ಚನ್ನಾಗಿ ಕಾಸಿದ ಬಂಗಾರದಂತೆ ಶೋಭಿಸಿದನು. ಇತರ ಬಾಲಕರಂತೆ ತಾನೂ ಸದ್ಗುರುವಿಗೆ ಶಿವಾರ್ಚನೆಗಾಗಿ ಹೂ, ಲಿಂಗ ಮಜ್ಜನಕ್ಕೆ ಗಂಗೆಯನ್ನು ತರುವನು.

ಉದಯುದಲ್ಲೆದ್ದು ಹುಡುಗರೊಡನೆ ಹೂವಿಗೆಂದು ತಂದ ಕರಡಿಗೆಯನ್ನು ಗಿಡದ ತುದಿಗೆ ತಗುಲಿಸಿ ಮಜ್ಜಕದ ಬಿಂದಿಗೆಯನ್ನು ನೀರಿನಲ್ಲಿಟ್ಟು ಆಟ ವಾಡುತ್ತಿರುವನು. ಜೊತೆಯ ಬಾಲಕರು ನೀರು ತುಂಬಿಕೊಂಡು ಬಿಂದಿಗೆ ಗಳನ್ನು ಹೊತ್ತು ಹೂಬುಟ್ಟಿಯನ್ನು ಹಿಡಿದು ಸಿದ್ಧಲಿಂಗೇಶಾ ಬಾ, ಎಂದು ಕರೆಯುವರು. ಸಂಗಡಿಗರ ಕರೆಕೇಳಿ ಬಾಯೆಂದ ಮಾತ್ರಕ್ಕೆ ನೀರು ತುಂಬಿದ ಬಿಂದಿಗೆಯು ತಲೆಗೂ,ಹೂ ತುಂಬಿದ ಬುಟ್ಟಿಯು ಕೈಗೂ ಬರಲು ಆ ಹುಡುಗರ ಜೊತೆಗೆ ಸೇರುವನು. ಅವನಿಗೆ ಎರಡು ಭೂತಗಳು ಅಧೀನವಾಗಿ ಅದೃಶ್ಯ ರೂಪಿನಿಂದ ಅವನ ಸೇವೆ ಮಾಡುತ್ತಿರುವವು. ಆ ಸಿದ್ಧಿ ಬುದ್ಧಿ ಎಂಬ ಭೂತ ಗಳ ಬಲದಿಂದ ಅವನು ಕೋರಿದುದು ನಡೆಯುವುದು; ಬಯಸಿದುದು ನೆರ ವೇರುವುದು. ಇದು ಯಾರಿಗೂ ತಿಳಿಯದು. ಆದರೆ ಇದು ಬೇರೆಯವರಿಗೆ ಲಭಿಸದು. ಮನೋನಿಗ್ರಹವುಳ್ಳ ಸಿದ್ಧಪುರುಷನಿಗೆ ಮಾತ್ರ ಈ ಸಿದ್ಧಿಗಳು ಮಹತ್ವಕ್ಕೆ ಹಾದಿಯಾಗುವುವು. ಅಲ್ಪರಿಗೆ ಈ ಸಿದ್ಧಿಗಳು ಕನಸಿನ ಗಂಟು ಅಥವಾ ಲಭಿಸಿದರೂ ಮನಶುದ್ಧರಿಲ್ಲದೇ ಕಾರ್ಯಾಕಾರ್ಯವನ್ನರಿಯದೇ ದುರುಪಯೋಗಪಡಿಸಿಕೊಂಡು ಲೋಕಕಂಟಕರಾಗುವರು. ಅಥವಾ ಆ ಸಿದ್ಧಿ ಶಕ್ತಿಯನ್ನು ಕಳೆದುಕೊಂಡು ಬಿಡುವರು. ಆದರೆ ಈ ಸಿದ್ಧಲಿಂಗೇಶ್ವರನು ಆ ಭೂತಗಳನ್ನು ತಕ್ಕ ರೀತಿಯಲ್ಲಿ ಬಳಸಬಲ್ಲ ಚತುರನಾಗಿದ್ದನು. ಆ ಭೂತ ಗಳ ಬಲವು ಇವನಿಗೆ ಹುಚ್ಚನ ಕೈಂಯಾಯುಧವಾಗಿರದೆ ವಿಚಕ್ಷಣನ ಕೈಯ ಸನ್ನೆಗೋಲಾಗಿತ್ತು.

ಆ ಭೂತಗಳಿಗೆ ಚಂಡಿ ಪ್ರಚಂಡಿಯೆಂದು ಹೆಸರು. ಅವು ಕೈಲಾಸದ ಬಾಗಿಲು ಕಾಯುತ್ತ ಹೋಗಿ ಬರುವವರನ್ನು ಉಪಚರಿಸುತ್ತಿದ್ದವು. ಒಂದು ದಿನ ಸಮರಾತ್ರಿಯ ವೇಳೆಯಲ್ಲಿ ಅತ್ರಿಕಶ್ಯಪಾದಿ ಋಷಿಗಳು ಪ್ರಮಥರೊಡನೆ ಶಿವದರ್ಶನಾರ್ಥವಾಗಿ ಬಂದರು. ಸರಿರಾತ್ರಿಯಾದುದರಿಂದ ಅವರಾರೆಂದು ನೋಡದೆ ಆ ದ್ವಾರಪಾಲಕರಾದ ಚಂಡಿ ಪ್ರಚಂಡಿಗಳು ಇವರನ್ನು ತಡೆದರು. ಆಗಲಾ ಋಷಿಗಳು ಕೋಪಿಸಿ ನಮ್ಮನ್ನು ಗರ್ವದಿಂದ ತಡೆದುದರಿಂದ ನೀವು ಭೂತಗಳಾಗಿರೆಂದು ಶಾಪ ಕೊಟ್ಟರು. ಅದನ್ನು ತಿಳಿದ ಶಿವನು ಗಿರಿಜಾ ಸಮೇತನಾಗಿ ಬಂದು ಈ ಅಂಜುಬುರುಕರು ಅರಿಯದೆ ನಿಮ್ಮನ್ನು ತಡೆದರೆ

ಶಪಿಸಬಹುದೆ ? ಆದದ್ದಾಯಿತು. ಇನ್ನು ಕೋಪವನ್ನು ಬಿಡಿ ಎಂದು ಸಮಾಧಾನಗೊಳಿಸಿದನು. ಆಗಲವರು ತಾವು ದೇವಿಯ ಸಮೇತರಾಗಿ ಏಕಾಂತದಲ್ಲಿದ್ದರೂ ಮಕ್ಕಳಂತೆ ಬರುವ ನಮಗೆ ತಡೆಯೆಂಬುದಿಲ್ಲ. ಇಂದಿಗೆ ನಮಗೆ ಈ ಪ್ರಾಪ್ತಿ ದೊರಕಿತು ಎಂದರು.

ಅದಕ್ಕೆ ಶಿವನು ಕೋಪ-ತಾಪಗಳಿಗೆ ಇದು ಸ್ಥಳವಲ್ಲ. ಅವರು ನಿಮ್ಮ ಸಿದ್ಧಿ ಬುದ್ಧಿಗಳನ್ನು ನನಗೆ ತೋರಿಸಿದಂತಾಯಿತು. ಕೋಪವೇ ಬೇಕಾದರೆ ಇಲ್ಲೇ ಇರಿ. ನಾವು ಬೇಕಾದರೆ ಅದನ್ನು ಅಲ್ಲೇ ಬಿಟ್ಟುಬನ್ನಿ ಎನ್ನಲು ಲಜ್ಜಿತ ರಾಗಿ ಶಿವನ ಜೊತೆಗೂಡಿಬಂದರು. ಶಾಪಗ್ರಸ್ಥರಾದ ಆ ಭೂತಗಳು ಶಿವನಿಗೆ ನಮಸ್ಕರಿಸಿ, ಶಂಕರ! ಶಿವಕಿಂಕರರಾದ ನಮಗೆ ನಿಮ್ಮ ಪಾದಪಂಕಜಗಳನ್ನು ಸೇರುವಂತೆ ಮರ್ತ್ಯಕ್ಕೆ ಹೋಗಿ ಗುರುಮಠದಲ್ಲಿರುವ ಸಿದ್ಧಲಿಂಗ ಮರಿಯೆಂಬ ಹೆಸರಿನ ನಿರಂಜನ ಗಣಾಧೀಶ್ವರನ ಸೇವೆ ಮಾಡಲು ಅವಕಾಶ ಕೊಡಿಸಬೇಕು. ಅದರಿಂದ ನಮಗೆ ಶಾಪ ಹರಿಯುವುದು ಎಂದವು. ಆಗ ಶಿವನು ನೀವು ಕೂಡಲೇ ಅಲ್ಲಿಗೆ ಹೋಗಿರೆನ್ನಲು ಆ ಭೂತಗಳು ಅದರಂತೆಯೇ ಸ್ವಯಂಭು ರೂಪತಾಳಿಕೊಂಡು ಸಿದ್ಧಲಿಂಗನನ್ನು ಸೇವಿಸುತ್ತಿರುವುವು.

ಈ ಭೂತಗಳು ಈ ಭುವನವನ್ನು ನುಂಗೆಂದರೆ ಶೋಭನಮಸ್ತು ಎಂದು ನುಂಗುವವು. ಪ್ರತಿಯಾಗಿ ಈ ಭುವನವನ್ನು ರಚಿಸು ಎಂದರೆ ರಚಿಸುವವು. ಅಣುವೇಷ ಮಹಾವೇಷದ ಭೂತಗಳು ಮಾಯಾರೂಪಿನಿಂದಿದ್ದು ಸಿದ್ಧಲಿಂಗನ ಗುರುಸೇವೆಯಲ್ಲಿ ಸಹಾಯ ಮಾಡುವವು. ಬೇಸಿಗೆಯ ದಿನವಾದರೂ ಪ್ರತಿ ದಿನವೂ ಬರುವ ವಿಚಿತ್ರ ಪುಷ್ಪಗಳನ್ನು ನೋಡಿ ಗುರುಗಳು ಒಂದು ದಿನ ಇವು ಎಲ್ಲಿಯವೆಂದು ಶಿಷ್ಯರನ್ನು ಕೇಳಿದರು. ಆಗ ಬಾಲಕರೆಲ್ಲಾ ಕೂಡಿಕೊಂಡು, ಹೂವು ನೀರಿಗೆಂದು ಹೋಗುವೆವು, ನಾವೆಲ್ಲರೂ ಹೂವು ಎತ್ತಿ ನೀರು ಮಗೆ ಹೊತ್ತು ಬರುವಾಗ ಸಿದ್ಧಲಿಂಗನನ್ನು ಕರೆಯುವೆವು. ಬಿಂದಿಗೆಯನ್ನು ನೀರಲ್ಲಿಟ್ಟು ಕುಕ್ಕೆಯನ್ನು ಗಿಡಕ್ಕೆ ತಗುಲಿಸಿ ಆಟವಾಡುತ್ತಿರುವ ಸಿದ್ಧಲಿಂಗನು ನಮ್ಮ ಕೂಗು ಕೇಳಿ ಓಡಿಬರುವನು. ಆಗ ಹೂವು ನೀರು ತಾವಾಗಿ ಬಂದು ಸಿದ್ಧಲಿಂಗನ ಕರ ಶಿರಗಳನ್ನು ಸೇರುವವು. ಈ ರೀತಿ ಹೂವು ತುಂಬಿದ ಬುಟ್ಟಿಯನ್ನು ನೀರು ತುಂಬಿದ ಕೊಡವನ್ನು ತಂದು ಕೊಡುವವರು

ಯಾರೆಂಬುದನ್ನು ನಾವರಿಯೆವು. ಇದನ್ನು ಗುರುಗಳೇ ತಿಳಿಯಬೇಕು ಎಂದರು. ವಟುಗಳ ಮಾತನ್ನು ಕೇಳಿ ಗುರುಗಳು ರಹಸ್ಯವಾಗಿ ಒಂದು ಮರದ ಮರೆಯಲ್ಲಿ ನೋಡಿದರು. ಶಿಷ್ಯರ ಮಾತು ಅಕ್ಷರಶಃ ನಿಜವಾಗಿತ್ತು. ಇದರ ರಹಸ್ಯವನ್ನರಿಯದೇ ಇದೇನೋ ಶಿವಮಾಯವೆಂದು ಅಚ್ಚರಿಗೊಂಡು ಮಠಕ್ಕೆ ಬಂದು ಸಿದ್ಧಲಿಂಗೇಶನನ್ನು ಕರೆದು, ವತ್ಸಾ ! ನಿನ್ನ ಸಂಗಡಿಗರೆಲ್ಲರೂ ನಿನ್ನನ್ನು ದೂರುವರು. ಇವರ ಸಂಗಬೇಡ. ಬಸವಣ್ಣನ ಪೂಜೆ ಮಾಡುತ್ತಾ ಮಠದಲ್ಲೇ ಇರು ಎಂದರು. ಗುರುವಾಕ್ಯದಂತೆ ಸಿದ್ಧಲಿಂಗೇಶನು ಬಸವಣ್ಣನ ಪೂಜೆ ಮಾಡುತ್ತಾ ಮಠದಲ್ಲಿದ್ದನು.

ನೀರಿನಿಂದ ದೀಪ ಉರಿಸಿದ್ದು :

ಸರದಿಯ ಪ್ರಕಾರ ವಟುಗಳು ದೀಪಾರಾಧನೆ ಮಾಡಬೇಕಾಗಿತ್ತು. ಎಲ್ಲಾ ಹುಡುಗರು ತಮ್ಮ ಸರದಿಯಲ್ಲಿ ದೀಪವಾರದಂತೆ ಎಣ್ಣೆ ಎರೆದು ನೋಡಿಕೊಳ್ಳುವರು. ಸಿದ್ಧಲಿಂಗೇಶನು ತನ್ನ ಸರದಿ ಬಂದಾಗ ಎಣ್ಣೆಯನ್ನು ಕೇಳದೆ ನೀರು ಹೊಯ್ದು ದೀಪ ಉರಿಸುತ್ತಿದ್ದನು. ಹಗಲಿರುಳು ರವಿ ಶಶಿಗಳಿಂದ ಬೆಳಗಿಸಿ ಸ್ವಗುಣ ಜ್ಯೋತಿಯಿಂದ ಅಗಜಾಂಡವನ್ನು ಬೆಳಗಿಸುವ ಜ್ಯೋತಿ ಪ್ರಕಾಶನಿಗೆ ದೀಪವನ್ನು ಬೆಳಗಿಸುವುದೊಂದು ದೊಡ್ಡ ಕೆಲಸವೇ ? ಎಣ್ಣೆಯಿಂದುರಿಯುವ ದೀಪ ತಣ್ಣೀರಿನಿಂದ ಉರಿಯೆಂದರೆ ಉರಿಯುವುದು, ನೀರನ್ನು ಎರೆಯದೇ ನೀನು ಬೆಳಗೆಂದರೆ ಶಿವನಾಜ್ಞೆಯನ್ನು ಮೀರದೇ ಬೆಳಗುವುದು ಎಂದ ಮೇಲೆ ಇವನೇ ಸಾಕ್ಷಾತ್ ಶಿವಸ್ವರೂಪನು. ಭೂಮಿಯನ್ನು ಪಾವನಗೊಳಿಸಲು ನರದೇಹ ತಾಳಿ ಬಂದಿರುವ ಸಿದ್ಧ ಅವತಾರಿಯು. ಈ ದೀಪವನ್ನು ನೀರಿನಿಂದ ಉರಿಸುವ ಸಂಗತಿಯು ಗುರುಗಳ ಕಿವಿಗೆ ಬಿತ್ತು ತಂದೆ-ತಾಯಿಗಳ ಮನೆಯಲ್ಲಿ ವಿಶ್ವರೂಪವನ್ನು ತೋರಿದ ಈ ಮಹಾತ್ಮನು ಈ ಒಂದು ಸಣ್ಣ ದೀಪವನ್ನು ಬೆಳಗಿಸುವುದೇನಾಶ್ಚರ್ಯವೆಂದು ಮರ್ಯಾದೆಯಿಂದ ನಡೆಸಿಕೊಳ್ಳುತ್ತಿದ್ದರು.

ಬಸವಣ್ಣನಿಗೆ ಎಡೆ ಉಣಿಸುವುದು :

ಬಾಲಕರು ಬಸವಣ್ಣನಿಗೆ ನೈವೇದ್ಯ ಮಾಡಿ ಆ ನೈವೇದ್ಯವನ್ನು ಮತ್ತೆ ತರುತ್ತಿದ್ದರು. ಆದರೆ ಸಿದ್ಧಲಿಂಗೇಶ್ವರನು ಹಾಗೆ ತರಲಿಲ್ಲ. ದಿನ ಒಂದಾಯಿತು ಎರಡಾಯಿತು ಮೂರಾಯಿತು, ಬಸವಣ್ಣನ ಎಡೆ ಹಿಂದಿರುಗಲೇ ಇಲ್ಲ. ಈ ವಿಷಯವನ್ನು ಸ್ವಾಮಿಗಳೇ ಪ್ರತ್ಯಕ್ಷವಾಗಿ ನೋಡಿ, ಹುಡುಗರೆಲ್ಲರೂ ಪ್ರಸಾದವನ್ನು ತರುತ್ತಾರೆ. ನೀನೇನು ಮಾಡುತ್ತಿಯೆ ? ಎಂದು ಕೇಳಿದರು. ಸಿದ್ಧಲಿಂಗ ಮರಿಯು ಸಾಯಂಕಾಲ ಪೂಜೆ ಸಮಯಕ್ಕೆ ಬಂದರೆ ತೋರಿಸುತ್ತೇನೆ ಎಂದನು. ಅದರಂತೆ ಗುರುಗಳು ಬಂದರು. ಪದ್ಧತಿಯಂತೆ ಪೂಜೆ ಮಾಡಿ ಎಡೆಯನ್ನು ಮುಂದಿಟ್ಟು ಕಲ್ಲಿನ ಬಸವನನ್ನು ವಿಶ್ವಾಸ ದಿಂದ "ಸಲ್ಲಿಸಬೇಕು" ಎನ್ನಲು ಒಡನೆಯೇ ಆ ಬಸವಣ್ಣನು ನಿಜರೂಪ ಧರಿಸಿ ಸಿದ್ಧಲಿಂಗೇಶನ ಮಾತಿನಂತೆ ಸಲಿಸಿತು. ಇದನ್ನು ನೋಡಿದ ಗುರು ಗಳು ಅಚ್ಚರಿಪಟ್ಟು ಮನಸ್ಸಿನಲ್ಲಿ ಹಿಗ್ಗುತ್ತಾ ಜಗದೊಡೆಯನಾದ ಶಿವನ ಕಳೆಯೆ ಈ ರೂಪಿನಿಂದ ಆಡುತ್ತಿರುವುದೆಂದು ತಿಳಿದರು.

ಮುಕ್ತಿದಾಯಕ ನಿರಂಜನರೂಪ, ನಿಸ್ಪೃಹಾ, ನಿತ್ಯಾನಂದಾ, ನೀನೇ ಎನ್ನ ಗುರುವು. ನನ್ನನ್ನು ಕೈಹಿಡಿದು ಕಾಯೆಂದು ವಂದಿಸಿದರು. ಆಗಲಾ ಸಿದ್ಧಲಿಂಗೇಶ್ವರನು ಗುರುವನ್ನು ಹಿಡಿದೆತ್ತಿ ಈ ರೀತಿ ಗುರುಗಳಾದ ನೀವು ತರಳನಾದ ನನ್ನನ್ನು ಮರ್ಯಾದೆ ಮಾಡುವುದು ಸರಿಯಲ್ಲ. ನೀತಿಶಾಸ್ತ್ರವು ಗುರುಶಿಷ್ಯ ನ್ಯಾಯವನ್ನು ಹೇಳುತ್ತಿದೆ. ಅಕ್ಷರವನ್ನು ಹೇಳಿದವನೂ ಕಷ್ಟ ದಲ್ಲಿ ಕಾಪಾಡಿದವನೂ ಸಭೆಯಲ್ಲಿ ತನ್ನ ಪಕ್ಷವಹಿಸಿದವನೂ ಪ್ರಬಲನಾದ ವನೂ ಸಾಕ್ಷಾತ್ ಗುರುವು. ಅಲ್ಲದ ಮಾರ್ಗವನ್ನು ಬಿಡು ಎಂದು ಹೇಳು ವವನು ಜಗದ್ಗುರುವು. ಒಳ್ಳೆಯ ಮಾರ್ಗವಿದೆಂದು ಹೇಳುವವನೇ ಗ್ರಾಹ್ಯ ಗುರುವು. ಗುರುವೇ ಬ್ರಹ್ಮನು, ಗುರುವೇ ವಿಷ್ಣುವು, ಗುರುವೇ ಶಂಕರನು, ಗುರುವೇ ಸಾಕ್ಷಾತ್ ಪರಂಜ್ಯೋತಿಯು. ವೇದಾಗಮ ಶಾಸ್ತ್ರ ಪುರಾಣ ಶೃತಿ ಸ್ಮೃತಿಗಳಲ್ಲೆಲ್ಲಾ ಗುರುಶಬ್ದವೇ ದೊಡ್ಡದು. ಸ್ವರ್ಗ ಮರ್ತ್ಯ ಪಾತಾಳ ಲೋಕಗಳಲ್ಲೆಲ್ಲ ಗುರುವೆ ದೊಡ್ಡವನು, ಪೂಜ್ಯನು. ಗುರುವಾಕ್ಯವನ್ನು ಮೀರಿದವನಿಗೆ ಕೋಟಿ ಕಲ್ಪಾಂತ ನರಕ ತಪ್ಪದು, ಪಾಪ ತಪ್ಪದು. ಗುರು

ವಾಕ್ಯದಂತೆ ನಡೆಯುವವನಿಗೆ ಸಾಯುಜ್ಯ ಪದವಿಯು ದೊರಕುವದು. ಆದುದರಿಂದ ಗುರುಗಳು ಗುರುಗಳೇ. ತಾವು ಗುರುಗಳು, ನಾನು ನಿಮ್ಮ ಶಿಷ್ಯನು. ನಿಮ್ಮನ್ನು ಗುರುಗಳನ್ನಾಗಿ ಪಡೆಯಲು ನಾನು ಯಾವ ಪುಣ್ಯವನ್ನು ಮಾಡಿದ್ದೆನೋ ನಾನರಿಯೆ. ನಿಮ್ಮ ದಯದಿಂದ ನಾನು ಶಿವಪಿಂಡವಾಗಿ ಧನ್ಯನಾದೆನು. ನಿಮ್ಮ ಚರಣಕ್ಕೆ ನನ್ನ ಚರ್ಮವನ್ನು ಸುಲಿದು ಆವುಗೆ ಮಾಡಿ ಮೆಡಿಸಿದರೂ ನಿಮ್ಮ ಋಣವು ತೀರಲಾರದು. ನೀವು ನ್ಯಾಯ ನಿಯಮ ಗಳನ್ನು ಮೀರಿ ಹೀಗೆ ಮಾಡಬಾರದು ಎಂದು ನಮಸ್ಕರಿಸಿ ಬೇಡಿಕೊಂಡನು.

ಷಟ್‌ಸ್ಥಲ ಸಿದ್ಧಾಂತದ ನಿಶ್ಶೂನ್ಯ ನಿರಾಲಂಬಸ್ಥಾನದಿಂದ ಗುರುಶಿಷ್ಯ ಸಂವಾದದೋಪಾದಿಯಲ್ಲಿ ಉಭಯರೂ ಚರ್ಚಿಸಿ ಪ್ರಸಿದ್ಧವಾಗಿರುವ ಷಟ್ ಸ್ಥಲ ಕ್ಷೇತ್ರಜ್ಞ ಸುಮನೋವಾದವೆಂಬುವದು ೧೪೧೩ ನೇ ಇಸವಿಯಲ್ಲಿ ಪ್ರಸಿದ್ಧ ವಾಗಿರುವದು ಅಚ್ಚಾಗಿ ಎಲ್ಲರ ಅವಗಾಹನೆಯಲ್ಲಿರುತ್ತದೆ.

ಗುರುಶಿಷ್ಯ ಭಾವವನ್ನು ತಿಳಿಸಿ ನಮಸ್ಕರಿಸಿದ ಸಿದ್ಧಲಿಂಗೇಶ್ವರನು ದೇಶಾಟನೆ ಮಾಡಿ ಬರಲು ಅಪ್ಪಣೆಯಾಗಬೇಕೆಂದು ಗುರುಗಳನ್ನು ಪ್ರಾರ್ಥಿ ಸಿದನು. ಅವರು ನೀನು ಗುರುಪಟ್ಟವಾಳಿಕೊಂಡು ನಮ್ಮ ಕಣ್ಮಣಿಯಾಗಿ ಸುಖವಾಗಿರೆಂದು ಒತ್ತಾಯಪಡಿಸಿದರು. ಅದಕ್ಕೊಪ್ಪದೇ ಸಿದ್ಧೇಶ್ವರನು ಉಂಡು ಉಟ್ಟು ಮಠದಲ್ಲಿರುವದಷ್ಟೇ ಜ್ಞಾನಿಯ ಕೆಲಸವಲ್ಲ. ಅವನ ವಿಹಾರಕ್ಕೆ ಒಂದು ಮಠವಲ್ಲ, ಈ ಮರ್ತ್ಯಲೋಕವು ಸಾಲದು. ದುಷ್ಟನಿಗ್ರಹ ಶಿಷ್ಟಪರಿಪಾಲನೆ ಧರ್ಮವರ್ಧನ, ಅಧರ್ಮ ಮರ್ಧನಾರ್ಥಕವಾಗಿ ಭೂಸಂಚಾರ ಮಾಡಬೇಕು. ಪ್ರೇಮವನ್ನು ವಿಶ್ವಪ್ರೇಮವನ್ನಾಗಿ ಪರಿವರ್ತಿಸಿಕೊಳ್ಳಲು ಭೂ ಸಂಚಾರಕ್ಕಿಂತ ಒಳ್ಳೆಯ ಮಾರ್ಗವಿಲ್ಲ. ಭೂಸಂಚಾರಮಾಡಿ ಜ್ಞಾನ ವನ್ನು ಅಭಿವೃದ್ಧಿ ಮಾಡಿಕೊಂಡು ಬರಲು ಖಂಡಿತ ಅಪ್ಪಣೆ ದಯಪಾಲಿಸ ಬೇಕೆಂದು ಸಾಷ್ಟಾಂಗವೆರಗಿದನು.

ಆಗ ಗುರುಗಳು ತಂದೆಗೆ ಮಗನಿಂದ ಮರ್ಯಾದೆ ಬರುವಂತೆ ಶಿಷ್ಯನಿಂದ ಗುರುಗಳಿಗೆ ಮರ್ಯಾದೆ ಸಿಗುತ್ತದೆ. ಇಂಥ ಮಹಿಮನು ಸಿಕ್ಕುವುದು ಪೂರ್ವಜನ್ಮದ ಪುಣ್ಯ. ಇವನನ್ನು ಬಿಟ್ಟು ಹೇಗೆ ಇರುವುದೆಂದು ತಮ್ಮ

ಪರಂಪರಾಗತವಾಗಿ ಬಂದಿದ್ದ ಶೂನ್ಯ ಪೀಠದ ಪಟ್ಟಾಧಿಕಾರವನ್ನು ಇವರಿಗೆ ಮಾಡಿ ಸಾವಿರ ಸೇವಕರೊಡನೆ ತಾವೂ ಹೊರಟರು. ಕೈಲಾಸದಿಂದ ಸಿದ್ಧೇಶ್ವರನ ಜೊತೆಗೆ ಬಂದು ಸಿದ್ಧನ ಹರಕೆಯಂತೆ ಅಲ್ಲಲ್ಲಿ ನೆಲಸಿದ ಪ್ರಮಥರೂಪಿನ ಜಂಗಮರು ಒಂದು ಲಕ್ಷದ ವರೆಗೂ ಬಂದು ಕೂಡಿಕೊಂಡರು. ಮುಖದಲ್ಲಿ ವಿಭೂತಿಯವರು, ಕೊರಳಲ್ಲಿ ರುದ್ರಾಕ್ಷಿಯ ಸರದವರು, ಬೋಳು ತಲೆಯವರು, ಕಂಥೆ ಧರಿಸಿದವರು, ಕಾವಿ ಧರಿಸಿದವರು, ಮಳ್ಳು ಹಾವಿಗೆ ಮೆಟ್ಟಿದವರು, ಜಂಗು ಧರಿಸಿದವರು, ಕೈಯಲ್ಲಿ ಬೆತ್ತ ಹಿಡಿದವರು, ನೆತ್ತಿಯಲ್ಲಿ ಜಡೆ ಕಟ್ಟಿದವರು, ಶರೀರಕ್ಕೆಲ್ಲಾ ವಿಭೂತಿ ಧರಿಸಿದ ದಿಗಂಬರರು, ಚನ್ನಬಸವ, ಮಲ್ಲಿಕಾರ್ಜುನ ಶಿವ, ಪ್ರಸನ್ನ ಗಂಗಾಧರ, ಸಿದ್ಧ, ವಿರೂಪಾಕ್ಷರೆಂಬ ಹೆಸರಿನ ಸುಚಿತ್ತ ಹಸ್ತ ನಿರ್ವಾಣ ಪಡೆದವರ ಪಡೆಯೂ ಸೇರಿತು.

ಆ ಸಮಯದಲ್ಲಿ ಕೊರಳಲ್ಲಿ ಗಂಟೆಯ ಸರ, ಕೊಂಬಿನ ಕಲಶ ಪಾದದಲ್ಲಿ ಗೆಜ್ಜೆ, ಚಿನ್ನದ ಗದ್ದುಗೆಯುಳ್ಳ ಉತ್ತಮವಾದ ಬಸವಗಳೂ ಹೊರಟವು. ಪಲ್ಲಕ್ಕಿಗಳೂ, ಹೊಯ್ಲು ಬಂಡಿಗಳು ಲೆಕ್ಕವಿಲ್ಲದಷ್ಟು ಸೇರಿದವು. ಅವುಗಳ ನಡುವೆ ನಲಿದು ಪಲ್ಲವಿಸುವ ಒಂದು ನಂದಿ ಧ್ವಜವು ವಿರಾಜಿಸಿತು. ಸಿಂಹಲಲಾಟ ಕಾಯಕದ ಜಂಗಮರ ಗುಂಪಿನಿಂದ ಶುಭ ಶಂಖನಾದವೂ ಕಪ್ಪರವಿಡಿದು ಕಾಲಜ್ಞಾನವನ್ನು ಹೇಳುವ ಜಂಗಮರ ಕೈಯಿಂದ ಹಗಳ ಗುಪ್ಪೆಯನ್ನು ಕರಗಿಸುವ ಜಯಘಂಟೆ (ಜಾಗಟೆ) ಶುಭ ಧ್ವನಿಯು ಮೊಳಗಿತು. ಶಿವಶರಣರಾದ ಸಿದ್ಧರ ಕೈಯ ಗಂಟೆಗಳು ಝೇಂಕರಿಸಿದುವು. ವೀರಕಾಸೆಯನ್ನು ಕಟ್ಟಿ ಖಡ್ಗವನ್ನು ಹಿಡಿದು ವೀರಭದ್ರನ ಹಲಗೆಯನ್ನು ಧರಿಸಿದ ಲಿಂಗದ ವೀರರು ಆರ್ಭಟಿಸಿದರು. ಭೇರಿಯ ನಿನಾದವು ಎಂಟು ದಿಕ್ಕನ್ನು ತುಂಬಿತು. ಇಷ್ಟು ಸನ್ನಾಹದೊಡನೆ ಪ್ರಯಾಣ ಸನ್ನದ್ಧರಾದ ಗುರುಗಳೊಡನೆ ಸಿದ್ಧಲಿಂಗೇಶ್ವರನು ಸಂಚಾರಕ್ಕೆ ಸಿದ್ಧನಾಗಿ ತಿಗುಳ ದೇಶದ ದಾರಿ ಹಿಡಿದನು.

ತಂದೆ-ತಾಯಿಗಳಾದ ಮಲ್ಲಿಕಾರ್ಜುನ, ಜ್ಞಾನಾಂಗನೆಯರೂ ಬಂದು ಗುರುಗಳಿಗೆ ನಮಸ್ಕರಿಸಿ ಬೀಳ್ಕೊಟ್ಟರು. ಸಿದ್ಧಲಿಂಗೇಶ್ವರನನ್ನು ಮುದ್ದಾಡಿ ನಿನ್ನ ಪ್ರಯಾಣವು ಸುಖಮಯವಾಗಲೆಂದು ಶುಭವನ್ನು ಕೋರಿದರು.

ಸಿದ್ಧಲಿಂಗೇಶ್ವರನು ನಿಮ್ಮ ಮನಸ್ಸಿಗೆ ಬೇಸರವಾದಾಗ ನನ್ನನ್ನು ಸ್ಮರಿಸಿರಿ. ನೀವು ನಿಶ್ಚಿಂತರಾಗಿ ಶಿವಪೂಜಾಲೋಲರಾಗಿರಿ ಎಂದು ಕೋರಿ, ತಾಯಿ–ತಂದೆಗಳನ್ನು, ಶ್ರೀ ಗುರು ಗೋಸಲ ಚನ್ನಬಸವೇಶ್ವರ ಸ್ವಾಮಿಗಳನ್ನು, ಪುರಜನ ಬಂಧುಗಳನ್ನು ಹಿಂದಕ್ಕೆ ನಿಲ್ಲುವಂತೆ ಅಪ್ಪಣೆ ಕೊಡಿಸಿದನು. ಅವನೊಡನೆ ಅವನ ಜೊತೆಯ ಜಂಗಮ ಬಾಲಕರೂ ಬಂದು ಸೇರಿಕೊಂಡರು. ಸಮತೆಯೆಂಬ ಭಸ್ಮದಗಟ್ಟಿ, ಸದ್ಭಾವವೆಂಬ ದೃಢವಾದ ದಂಡ, ದಯೆ ಎಂಬ ಕಮಂಡಲ, ವೈರಾಗ್ಯವೆಂಬ ಕಪ್ಪರವಿಡಿದು ಸುಜ್ಞಾನವೆಂಬ ಕಥೆಯನ್ನು ತೊಟ್ಟು ಸಿದ್ಧಲಿಂಗ ಸ್ವಾಮಿಯು ಹೊರಟನು.

ಶಿವಶರಣರ ದಂಡು ವೈಭವದಿಂದ ಬರುತ್ತಿರಲು ವಸಂತನು ಎದುರುಗೊಳ್ಳಲು ಬಂದವನಂತೆ ದಾರಿಯುದ್ದಕ್ಕೂ ಚಿಗುರು ಮರಗಳೂ, ಹೂವಿನ ಕೊಂಬೆಗಳೂ, ಹಣ್ಣಿನ ಗೊನೆಗಳೊಡನೆ ರಾರಾಜಿಸುವ ಸುಗಂಧ ಮಾರುತನು ಮೆಲ್ಲನೆ ಸುಳಿದು ತಂಪನ್ನು ಹರಡುತ್ತಿದ್ದನು. ಪ್ರಕೃತಿಯು ಹೂ ಕಾಯಿ ಚಿಗುರು ಮುಂತಾದ ಒಡವೆಗಳನ್ನು ಧರಿಸಿ ಯೌವನವತಿಯಂತೆ ಶೋಭಿಸಿತು. ಎತ್ತ ನೋಡಿದರೂ ಕೆರೆಗಳೂ, ಕೊಳಗಳೂ, ಹೂವಿನ ತೋಟಗಳೂ, ಅರವಟ್ಟಿಗೆಗಳೂ, ಸಾಲು ವನಗಳೂ, ಸಾಲು ತೋಪುಗಳೂ ಕಾಣಿಸಿದವು. ದಾರಿಯುದ್ದಕ್ಕೂ ಮನೆ ಮಠಗಳೂ ಶೃಂಗಾರಗೊಂಡು ಎದುರಾಗಿ ತಮ್ಮ ಊರ ಹೆಸರು ಹೇಳಲು ನಿಂತ ಹಿರಿಯರಂತೆ ಕಂಗೊಳಿಸುತ್ತಿದ್ದವು.

ದಾರಿಯಲ್ಲಿ ಒಂದು ಬೆಟ್ಟದಾವರೆಯ ಮರವು ನಿಂತಿತ್ತು. ಅದರ ಹೆಗ್ಗೊಂಬೆಯಲ್ಲಿ ಹೂವರಳಿದ್ದವು. ಅದರ ಅಂದವನ್ನು ಕಂಡ ಜಂಗಮರು ಈ ಹೂ ಶಿವಾರ್ಚನೆಗೆ ತಕ್ಕವೆಂದು ಸಿದ್ಧಲಿಂಗೇಶನೊಡನೆ ಹೇಳಿದರು. ಸಿದ್ಧಲಿಂಗೇಶನು ನಗುತ್ತಾ "ಕೊಟ್ಟು ಕೆಟ್ಟವರಿಲ್ಲ" ಎಂದನು. ಕೂಡಲೇ ಶ್ರುತಿಗಳಿಂದ ಸ್ತುತಿಸಿಕೊಂಬ ಈ ಯತೀಶ್ವರನ ಆಜ್ಞೆಯೇ ಶಿರೋಧಾರ್ಯವೆಂದು ಮರವು ತಲೆ ತಗ್ಗಿಸಿ ನಮಸ್ಕರಿಸಿತು. ಜಂಗಮರು ಅದರಲ್ಲಿದ್ದ ಹೂಗಳನ್ನು ಬಿಡಿಸಿ ಶಿವಾರ್ಚನೆ ಮಾಡಿದರು.

ಅದೇ ಸಮಯಕ್ಕೆ ಆ ಮರದಿಂದ ಎರಡು ಜೇಡರ ಹುಳುಗಳು ಬಂದು ತಾವು ನೇಯ್ದ ದಾರದ ಉಂಡೆಯ ಕಾಣಿಕೆಯನ್ನರ್ಪಿಸಿ ಸಿದ್ಧಲಿಂಗೇಶ್ವರನಿಗೆ

ನಮಸ್ಕರಿಸಿದವು. ಆಗ ಅವನ್ನು ಮುಟ್ಟಿ ಸುಖವಾಗಿ ಬಾಳಿರಿ ಎಂದು ಹರಸಿದನು. ಕೂಡಲೇ ಅವು ಆ ರೂಪವನ್ನು ಬಿಟ್ಟು ಗಂಧರ್ವ ರೂಪವನ್ನು ತಳೆದವು. ಅದನ್ನು ಕಂಡ ಜಂಗಮರು ಆಶ್ಚರ್ಯಗೊಂಡು ನೀವು ಯಾರು ? ಎಂದು ಕೇಳಲು ಅವರು ತಮ್ಮ ಕಥೆಯನ್ನು ತಿಳಿಸಿದರು.

ನಾವು ಹಾವಾಡಿಗರು. ಕೈಲಾಸದಲ್ಲಿ ಪ್ರತಿದಿನವೂ ಪಾರ್ವತಿ-ಪರಮೇಶ್ವರರಿಗೆ ಹೂ ಕೊಡುತ್ತಿದ್ದೆವು. ಒಂದು ದಿನ ಶಿವಸಭೆಗೆ ಹೋಗುವಾಗ ನಮ್ಮ ಸೆರಗು ಶರಣರ ಮುಖಕ್ಕೆ ತಗುಲಿತು. ಆಗಲವರು ಮುನಿದು ಭೂಮಿಯಲ್ಲಿ "ಜೇಡರ ಹುಳುಗಳಾಗಿ ಹುಟ್ಟಿ" ಎಂದರು. ಆಗ ಶಿವನಿಗೆ ನಮಸ್ಕರಿಸಿ ನಿಶ್ಶಾಪವನ್ನು ಕೇಳಲು, ಶಿವನು ನನ್ನ ರೂಪಿನ ನಿರಂಜನ ಗಣಾಧೀಶನು ಸಿದ್ಧಲಿಂಗನಾಗಿ ಮರ್ತ್ಯಕ್ಕೆ ಬರುವನು. ಅವನು ಸಂಚಾರಕ್ಕೆ ಬಂದ ಸಮಯದಲ್ಲಿ ಅವನನ್ನು ಕಾಣಿಸಿಕೊಳ್ಳಲು ನಿಮ್ಮ ಶಾಪ ನಿವಾರಣೆಯಾಗುವುದು ಎಂದು ಅಪ್ಪಣೆ ಕೊಟ್ಟನು. ಅದರಂತೆ ನಾವು ಜೇಡರ ಹುಳುಗಳಾಗಿ ಈ ಮರವನ್ನು ಸೇರಿದೆವು. ಇದು ಏಳನೆಯ ಜನ್ಮ. ಈಗ ಈ ಸಿದ್ಧಲಿಂಗೇಶ್ವರನ ದರ್ಶನದಿಂದ ನಮ್ಮ ದೋಷಹರಿದು ಪೂರ್ವಜನ್ಮ ಬಂದಿತು. ಈತನು ಬ್ರಹ್ಮಾಂಡ ಭಾಂಡಕ್ಕೆ ಕರ್ತನು, ದುರಿತಹರನಾಗಿರ್ಪನು, ನಿರಂಜನ ಪ್ರಮಥನು. ಈತನ ಮಾಯಾನಾಟಕ ಸೂತ್ರದಿಂದ ಈ ಭೂತಳವು ನಿಂತಿದೆ. ಈತನು ಪಾಪರಾಶಿಯನ್ನು ಸುಟ್ಟು ಭೂ ಭಾರವನ್ನಿಳಿಸಿ ಕಲಿಯನ್ನು ಕಟ್ಟಿ ಆಳಲಿಕ್ಕಾಗಿ ಭೂಮಿಗಿಳಿದಿದ್ದಾನೆ. ಈ ಮೂರ್ತಿಯ ಜೊತೆಗಿರುವ ನೀವೇ ಧನ್ಯರು. ನಾವಿನ್ನು ಬರುತ್ತೇವೆ ಅನುಗ್ರಹಿಸಿರಿ ಎಂದು ಅಪ್ಪಣೆ ಪಡೆದು ಹೊರಟುಹೋದರು. ಮರದ ಸೇವೆಯಲ್ಲಿದ್ದ ಜೇಡಗಳಿಗೆ ಪದವಿ ಪಾಲಿಸಿದುದನ್ನು ಕೇಳಿ ಅಂತರಿಕ್ಷದಲ್ಲಿ ಅಮರರು ಹೊಗಳಿದರು. ಈ ಮಹಿಮೆಯನ್ನು ಕೇಳಿದ ಜನರು ಕಾಮ್ಯಾರ್ಥಗಳನ್ನು ಪಡೆಯಲು ಬಂದು ಪರಿಷೆ, ಜಾತ್ರೆ ಕೂಡಿ ಪರ್ವಗಳನ್ನು ಮಾಡುವರು.

ಸಿದ್ಧಲಿಂಗೇಶ್ವರನು ಸಂತೋಷದಿಂದ ಮುಂದು ಮುಂದಕ್ಕೆ ಬರುತ್ತಿರಲು ಶಿವನ ಕೈಲಾಸವೋ ಎಂಬಂತೆ ತಿರುಣಾಮಲೆಯ ಅರುಣಾದ್ರಿಯು ಕಾಣಿಸಿತು. ಅದು ಹರನಿವಾಸದ ಕೈಲಾಸದಂತೆಯೂ, ಸುರಗದಾಶುಯವಾಗಿ

ಕನಕಾದ್ರಿಯಂತೆಯೂ ಶೋಭಿಸಿತು. ನಾನಾಜಾತಿಯ ವೃಕ್ಷಗಳೂ, ಹೂಬಳ್ಳಿಗಳೂ, ನಾನಾ ಜಾತಿಯ ಮೃಗಗಳೂ, ಖಗಗಳೂ, ನಾನಾ ವಿಧವಾದ ತಪಸ್ವಿಗಳೂ, ಸಿದ್ಧರೂ, ಮುನಿಗಳೂ, ಮನುಗಳೂ ಅಲ್ಲಿ ವಾಸಿಸಿದ್ದರು. ಆ ತಿರುವಣ್ಣಾಮಲೆಯಲ್ಲಿ ಅರುಣಾಚಲೇಶನ ಗುಡಿಯಲ್ಲಿಗೆ ಸಿದ್ಧಲಿಂಗನು ಪರಿವಾರದ ಜೊತೆಗೆ ಬಂದನು.

ಸುತ್ತಲೂ ಬಂಗಾರದಲ್ಲಿ ಒತ್ತಿರುವ ರನ್ನಮಣಿಗಳಿಂದ ಸುಂದರವಾಗಿ ಕೆತ್ತಿರುವ ಬೊಂಬೆಗಳ ಚಿತ್ರದ ಶಿವಾಲಯವು ನೋಡುವವರ ಕಣ್ಣಿಗೆ ಹಬ್ಬದಂತೆ ಕಾಣಿಸಿತು. ಎಂಟುದಿಕ್ಕಿನ ಬಾಗಿಲು, ಮುಗಿಲುಮುಟ್ಟಿನ ಕೋಟೆ, ಬೆಳಗಿಸುವ ಮೇಲುಪ್ಪರಿಗೆ, ಮಂಟಪ, ಕೈಸಾಲೆ, ಒಳಗಿನ ಚಾವಣಿ, ನವರಂಗ ಸುಖನಾಸಿ, ಗರ್ಭದ್ವಾರಗಳಿಂದ ಕೂಡಿದ ದೇವಾಲಯವು ವಿಶಾಲವಾಗಿ ವಿಚಿತ್ರವಾಗಿ ದೇವಾಲಯದಲ್ಲಿ ಲಕ್ಷ ಕಂಬಗಳು ಸ್ಥಿರವಾಗಿ ನಾಟವಾಗಿದ್ದವು. ಅಲ್ಲಿ ಗಳಿಗೆಗೊಂದಭಿಷೇಕ, ಗಳಿಗೆಗೊಂದು ನೈವೇದ್ಯ, ಗಳಿಗೆಗೊಂದು ತಳಿಗೆಗಳು ದಿನಚರಿಯಾಗಿ ನಡೆಯುವವು. ತಾಳಮೇಳಗಳಿಂದ ಅರುಣಾಚಲೇಶನ ಸೇವೆ ನಡೆಯುವುದು. ಇಂಥ ಸುವರ್ಣಮಣಿಯುಕ್ತ ತಿರುವಣ್ಣಾಮಲೆಯ ಶಿವಾಲಯಕ್ಕೆ ಸಿದ್ಧಲಿಂಗೇಶ್ವರನು ಬಂದು ಇಳಿದುಕೊಂಡನು.

ಶ್ರೀ ಸಿದ್ಧಲಿಂಗೇಶ್ವರನು ಸಾಯಂಕಾಲದ ಶಿವಪೂಜೆಯನ್ನು ಸಕಲರೊಡನೆ ಮುಗಿಸಿ ಘಮಘಮಿಸುವ ವ್ಯಂಜನಾನ್ನಗಳನ್ನು ಸೇವಿಸಿ ಶಿವಪುರಾಣವನ್ನು ಓದಿ ಹರಸ್ತುತಿಯನ್ನು ಮಾಡಿ ಮಲಗಲು. ಸರಿರಾತ್ರಿಯಲ್ಲಿ ಅರುಣಾಚಲೇಶ್ವರನು ಜಂಗಮರೂಪ ಧರಿಸಿ ಜಾವಮಾರ್ತೆ ಸಿದ್ಧಲಿಂಗೇಶ್ವರನ ಬಳಿಗೆ ಬಂದು ತನ್ನ ಪರಿಚಯವನ್ನು ತಿಳಿಸಿ ವಂದನೆ ಪ್ರತಿ ವಂದನೆಗಳಾದ ಮೇಲೆ ಕುಳಿತುಕೊಂಡು ಲೋಕವಾರ್ತೆ ಕಾಲಜ್ಞಾನಾದ್ಯನೇಕ ಪ್ರಸಂಗಗಳನ್ನು ಮಾತನಾಡಿ, ತಾನು ಹಾಕಿಕೊಂಡಿದ್ದ ಮುತ್ತಿನ ಸಂಚ ತಾಳಕಹಾರವನ್ನು ಸಿದ್ಧಲಿಂಗೇಶ್ವರನ ಕೊರಳಿಗೆ ಹಾಕಿ ಹೊರಟುಹೋದನು. ಸಿದ್ಧಲಿಂಗೇಶ್ವರನು ಕನಸು, ನಿದ್ರೆ, ಎಚ್ಚರಿಕೆ ಎಂಬ ಮೂರವಸ್ಥೆಗಳಿಂದ ಪ್ರಕಾಶಿಸಿದನು. ನೆನೆವವರ ಪಾಪಗಳನ್ನು ಕದ್ದುಕೊಳ್ಳುವ ಚೋರನು ಬಂದನೆಂದು ಸಿದ್ಧನನ್ನು ದೂರಿ ರಾಜನಿಗೆ ಚಾಡಿಯನ್ನು ಹೇಳಬಂದವನಂತೆ ದನಿಯುಗಿಸಿದನು.

ಚರಮೂರ್ತಿಗಳೆಲ್ಲರೂ ಎದ್ದು ತಮ್ಮ ತಮ್ಮಲ್ಲಿ ಶರಣ ಸಂಬಂಧವನ್ನು ಮಾಡಿ ಸಿದ್ಧೇಶನಡಿಗಳಿಗೆ ನಮಿಸಿ ಹೊಸ ಹಾರವು ಕಂಠದಲ್ಲಿ ಬೆಳಗುತ್ತಿರುವುದನ್ನು ನೋಡಿ ಬೆರಗಾದರು. ಪೂಜಾರಿಗಳು ಬಂದು ಅರುಣಾಚಲೇಶ್ವರನ ಕೊರಳಲ್ಲಿ ಮುತ್ತಿನ ಹಾರವಿಲ್ಲದ್ದನ್ನು ಕಂಡು ಸೋಜಿಗಗೊಂಡು ಹುಡುಕಾಡಿದರು. ಶಿವಶಿವಾ, ಈ ದಿನ ನಮಗೆ ಹೊಸ ಕಷ್ಟವು ಬಂದೊದಗಿತೆಂದು ತಮ್ಮ ತಮ್ಮಲ್ಲಿ ಅಂಗಲಾಚುತ್ತಾ ಮಾತನಾಡಿಕೊಂಡರು. ಎಲ್ಲೆಲ್ಲಿ ಹುಡುಕಿದರೂ ದೇವರೊಡವೆಯು ಕಾಣದಿರಲು ಶಿವನು ಇಂದಿಗೆ ನಮ್ಮ ಪ್ರಾಣಗಳಿಗೆ ಮುನಿದನೆಂದು ಪೂಜಾರಿಗಳು ಭಯಗೊಂಡರು.

ಒಳಗುಡಿಯನ್ನು ನೋಡಿ ಹೊರಪ್ರಾಕಾರಕ್ಕೆ ಬಂದು ಕುಳಿತಿದ್ದ ಜಂಗಮರ ಬಳಗವನ್ನು ಶೋಧಿಸುತ್ತಿರುವಾಗ ಸಿದ್ಧಲಿಂಗೇಶ್ವರನ ಕೊರಳಲ್ಲಿ ಅದರ ಬೆಳಕು ಹೊಳೆಯಿತು. ಬೀಗಮುದ್ರೆಗಳಿದ್ದ ಕದವನ್ನು ತೆಗೆಯುವುದು ಮನುಷ್ಯ ಮಾತ್ರರಿಗಸಾಧ್ಯ. ಹಾರಿ ಒಳಹೊಕ್ಕು ಇದನ್ನು ಕದ್ದು ತಂದ ಈತನಾರೆಂದು ನೋಡಿದರು. ಒಂದೊಂದು ಮಣಿಗೆ ಕೋಟಿ ಬೆಲೆಯಾಗುವ ಮುತ್ತುಗಳಿನ್ನೂರಕ್ಕೆ ಒಂದೊಂದು ಸರ. ಅಂತಹ ಸರಗಳು ಐದು ಸೇರಿಸಿರುವ ಪಂಚ ತಾಪುಡವು ಸಿದ್ಧಲಿಂಗನಿಗೆ ಒಂದು ಹೊಸ ಶೋಭೆಯನ್ನು ಕೊಟ್ಟು ಪ್ರಕಾಶಿಸುತ್ತಿರುವುದನ್ನು ಕಂಡ ಕೂಡಲೇ ಪೂಜಾರಿಗಳು ಹೋ ಎಂದು ಕೂಗುತ್ತ ಆ ನಗರದ ರಾಜನೆಡೆಗೆ ಓಡಿ ಬಂದು, ಯಾರೋ ಒಬ್ಬನು ಮಾಯದಿಂದ ಈಶ್ವರನ ಹಾರವನ್ನು ಕದ್ದಿರುವನೆಂದು ತಿಳಿಸಿದರು. ನಂಬಿಗಳ ಮಾತನ್ನು ನಂಬಿ, ರಾಜನು ಕೋಪಾರೂಢನಾಗಿ, ಕೊಂಬು, ಕೊಳಲು, ಕಹಳೆಯ ನಾದದೊಡನೆ ಗುಡಿಗೆ ಬಂದನು. ಗುಡಿಯನ್ನು ಹೊಕ್ಕು ಒಡವೆಯನ್ನು ಕದ್ದ ಚೋರನನ್ನು ಹಿಡಿಯಿರಿ, ಬಡಿಯಿರಿ, ಕೊಲ್ಲಿರಿ, ಹಿಡಿತನ್ನಿರಿ ಎನ್ನುವ ರಾಜನ ಆರ್ಭಟವನ್ನು ನೋಡಿ ಜಂಗಮರೆಲ್ಲರೂ ಹೆದರಿದರು. ಇದರಂತರಂಗವನ್ನು ಶಿವನೇ ಬಲ್ಲ. ಇಂದಿನ ಪವಾಡವನ್ನು ಗೆದ್ದರೆ ನಾವೆಲ್ಲರೂ ಬದುಕುವೆವು, ನಮ್ಮ ಮತಕ್ಕೆ ಒಳ್ಳೆಯ ಹೆಸರು ಬರುವದು. ಇಲ್ಲದಿದ್ದರೆ ನಮಗೆಲ್ಲಾ ಶಿವನ ಪಾದಾರವಿಂದವೇ ಗತಿ. ನಮ್ಮ ಮತದವರಿಗೆ ಕಳ್ಳರೆಂಬ ಹೆಸರು ಶಾಶ್ವತವಾಗಿ, ವಿಷವೂ ಕೂಡ ಸಿಗಲಾರದು ಎಂದು ಚಿಂತಿಸಿ

ದರು. ಹರಿಯುವ ಹಾವಿಗೆ ಇದಿರಾಗಬಹುದು, ಉರಿಯುವ ಕಿಚ್ಚಿಗೆ ಎದುರಾಗಬಹುದು. ಆದರೆ ಸ್ಥಿರ ಶಕ್ತಿಯುಳ್ಳ ರಾಜಭಯಕ್ಕೆ ಇದಿರು ನಿಲ್ಲುವವರು ನರ, ಸುರ, ಉರಗರಲ್ಲಿ ಯಾರೂ ಇಲ್ಲ ಎಂದು ಚರಪತಿಗಳು ಸಂಶಯಚಿತ್ತರಾಗಿರಲು ಅದನ್ನು ಕಂಡು ಸಿದ್ಧಲಿಂಗೇಶ್ವರನು ನಗೆಮುಖದೊಡನೆ ರಾಜನಿಗೆದುರಾದನು. ರಾಜನು ಸಿದ್ಧಲಿಂಗೇಶ್ವರನ ಕೊರಳಿನಲ್ಲಿರುವ ಹಾರವನ್ನು ನೋಡಿ ನೀನೇಯೇನೋ ಕಳ್ಳನು ? ಎಂದನು.

ಸಿದ್ಧಲಿಂಗ— ರಾಜಾ, ನಿಮ್ಮ ಲಿಂಗದ ಒಡವೆ ನನ್ನಲ್ಲಿರುವುದು ನಿಜ. ಆದರೆ ಅದನ್ನು ನಾನು ಕಳುವು ಮಾಡಿಲ್ಲ. ನಿಮ್ಮ ದೇವರೇ ಬಂದು ಬಲವಂತ ಮಾಡಿ ನನಗೆ ಕೊಟ್ಟಿದ್ದಾನೆ.

ರಾಜಾ— ಅಹಾ, ಏನೀ ಆಶ್ಚರ್ಯ ? ಕಲಿಯುಗದಲ್ಲಿ ಶಿಲಾಮೂರ್ತಿಯು ನರರಿಗೆ ಕಾಣಿಸಿಕೊಳ್ಳುವುದುಂಟೆ ? ಇವನು ಸುಳ್ಳು ಹೇಳುವನು. ಮಾವಿನ ಮರವನ್ನು ಏರಿ ಬಹು ಹಣ್ಣು ಕೊಯ್ದನೆಂಬುದು ಹೇಗೆ ಸುಳ್ಳೋ, ದೇವರನ್ನು ಒಲಿಸಿ ಆಭರಣವನ್ನು ಸಂಪಾದಿಸಿರುವೆನೆಂಬುದೂ ಹಾಗೆಯೇ ಸುಳ್ಳು. ಅದು ಕಳವಲ್ಲದೇ ಬೇರೇನೂ ಅಲ್ಲ.

ಸಿದ್ಧಲಿಂಗ— ಜನನಾಥ, ಇದೇನು ಅಣಕವಲ್ಲ, ನಿಮ್ಮ ಸ್ವಾಮಿಯು ನಮಗೆ ಮುತ್ತಿನ ಹಾರವನ್ನು ಕಾಣಿಕೆ ಇತ್ತಿರುವದು ನಿಜ.

ರಾಜ— ಯಾರೂ ಕಾಣದಂತೆ ಕೊಟ್ಟ ಈ ಸ್ಥಾವರ ಲಿಂಗನು ಊರವರೆಲ್ಲರೂ ಕಾಣುವಂತೆ ಕೊಡಲಾರನೇ ? ಈಗ ಹಾರವನ್ನು ಅವನ ಬಳಿ ಒಪ್ಪಿಸು. ಅವನು ಮತ್ತೆ ಕೊಟ್ಟರೆ ತೆಗೆದುಕೊ.

ಸಿದ್ಧಲಿಂಗ— ನರಪಾಲ ನಿನ್ನ ಮಾತು ನ್ಯಾಯ, ಇಗೋ ನಿಮ್ಮ ಲಿಂಗನ ಆಭರಣವನ್ನು ಲಿಂಗನಿಗೇ ಕೊಟ್ಟು ಬಿಡುತ್ತೇನೆ.

ಎಂದು ಲಿಂಗದ ಕೊರಳಿಗೆ ಹಾರ ಹಾಕುವನು. ಕೂಡಲೇ ಐದು ಮುಖದ ಹರನು, ಹತ್ತುಭುಜ, ಮೂರು ಕಣ್ಣು, ಶೂಲ, ಡಮರುಗ, ಸಾರಂಗ, ಬ್ರಹ್ಮಕಪಾಲ, ವಿಷ್ಣು ನೇತ್ರಗಳನ್ನು ಧರಿಸಿ ಕಾಳಿ ಗಂಗೆಯೊಡನೆ

ಗಾಂಭೀರ್ಯವನ್ನು ಹೊಂದಿದ ನಿಜ ರೂಪವನ್ನು ತಾಳಿ ರಾಜನೂ ಪ್ರಜೆಗಳೂ ನೋಡುತ್ತಿರಲು ಈ ಸಂಚಲನವನ್ನು ಈ ಸಿದ್ಧಲಿಂಗನಿಗೆ ನಾನೇ ವಂಚನೆ ಇಲ್ಲದೆ ಧರಿಸುವನು. ಈ ರೂಪವು ಸನಾಗಿಂತ ಇವನ ಕಣ್ಣಿಗೆ ಯೋಗ್ಯವಾದದ್ದು ಎಂದು ಹಾಡಿ ಮಾಯವಾದನು. ಇದನ್ನು ಕಂಡು ಅರಸನೂ ಜನರೂ ಆಶ್ಚರ್ಯಪಟ್ಟು ಸಿದ್ಧಲಿಂಗೇಶ್ವರನಿಗೇ ಶರಣಾದರು. ಆಗ ಸಿದ್ಧೇಶ್ವರನು ಅವರಿಗೆಲ್ಲಾ ದೀಕ್ಷೆಯನ್ನು ಕೊಟ್ಟು ಶಿವಭಕ್ತರನ್ನಾಗಿ ಮಾಡಿ ಆಶೀರ್ವದಿಸಿದನು. ಅದೇ ಊರಿನಲ್ಲಿ ತಮ್ಮ ಹಿರಿಯರ ಮಠವಾದ ಶಿವಾಯ ನಮಃ ಓಂ, ಹರಾಯ ನಮಃ ಓಂ ಎಂಬ ಎರಡು ಮಠಗಳನ್ನು ಸಂದರ್ಶಿಸಿದ ನಂತರ ಇದನ್ನು ಕೇಳಿ ಆ ನಾಡಿನ ಜನರು ಗುಂಪು ಗುಂಪಾಗಿ ಬಂದು ಸರ್ವ ಜಾತ್ರೆಗಳನ್ನು ಮಾಡಿ ಇಷ್ಟಾರ್ಥಗಳನ್ನು ಬೇಡಿ ಪಡೆದುಕೊಂಡರು.

ಸಿದ್ಧಲಿಂಗೇಶ್ವರನು ಅರುಣಾಚಲೇಶ್ವರನ ಕ್ಷೇತ್ರದಿಂದ ಸಂಚಲನವನ್ನು ನಡೆದು ಮುಂದಕ್ಕೆ ಹೊರಟನು. ಕಹಳೆಯು ವಾದ್ಯ ಘೋಷಿಸುತ್ತಿರಲು ಧ್ವಜವದ ಹೊರಗೆ ಎಂಟು ದಿಕ್ಕುಗಳೂ ಹಾರುತ್ತಿರಲು, ಜಯಘಂಟೆ ಶಂಖಗಳು ಮೊಳೆಯುತ್ತಿರಲು, ನಂದಿಯು ಕೊಂಬು ಮೊರೆಯುತ್ತಿರಲು ಸಿದ್ಧಲಿಂಗೇಶ್ವರನ ಸವಾರಿಯು ಮುಂದಕ್ಕೆ ಹೊರಟಿತು. ಆರಂಭದಲ್ಲಿ ಅವರದು ಧರ್ಮೋದ್ಧಾರದಶ್ಯಾಗಿ ಮರ್ತ್ಯಕ್ಕಿಳಿದ ಶಿವನೆಂದು ಸ್ತುತಿಸಿದರು. ಜಂಗಮಯೋಗನ ಮುಂದು ಮರೆದು ಬರುತ್ತಿರಲು ಕಾವೇರಿ ನದಿಯು ಕಾಣಿಸಿತು. ಎರಡು ದಡಗಳೂ ತುಂಬಿ ಹೊರಳುತ್ತಾ ಅಬ್ಬರಿಸಿ ಹರಿಯುವ ಕಾವೇರಿಯು ದಡದಲ್ಲಿ ಶಿವಯೋಗ ತಲ್ಲೀನರಾದ ಮುನಿವರ ಹಿಮವಂತ ಲಿಂಗಾಭಿಷೇಕ ಮಾಡಿ ಏಕಾಗ್ರಚಿತ್ತದಿಂದ ಜಪಧ್ಯಾನಗಳಲ್ಲಿ ನಿರತರಾದರು. ಆ ನಾಡಿನ ಜನರು ಸಿದ್ಧಲಿಂಗನ ಪವಾಡಗಳನ್ನು ಕೇಳಿ ದಾನ ಧರ್ಮಗಳನ್ನು ಮಾಡುತ್ತಾ ಜ್ಞಾನಿಗಳೆನಿಸಿ ಶಿವಭಕ್ತರಾಗಿ ಆನಂದದಿಂದ ಇರಲಾರಂಭಿಸಿದರು. ದಾರಿಯಲ್ಲಿ ಅಲ್ಲಲ್ಲಿಗೆ ಹೊಸಗೆ ಜಾತ್ರೆ ಸರ್ವ ದೇವತಾರಾಧನೆಗಳು ಸಡಗರದಿಂದ ನಡೆಯುತ್ತಿದ್ದುವು. ಅದರಲ್ಲೆಲ್ಲಾ ಶಿವಭಕ್ತಿಯು ಸಿದ್ಧಲಿಂಗೇಶ್ವರನಿಗೆ ಎಡೆಯನ್ನು ತಂದಳು. ಸಮಭಕ್ತಿ ರಸದಲ್ಲಿ ಮಿಂದು ಸುಜ್ಞಾನದ ಧವಳ ಮುಡಿಯುಟ್ಟು ಸನ್ಮಾರ್ಗವೆಡೆಯ ಶಿವ ಸ್ವರೂಪೆಯೆಂಬ ಎಡೆಯನ್ನು ಶಿರದಲ್ಲಿ ಧರಿಸಿ ಆನಂದದಿಂದ ಬಂದಳು. ಬರುವ

ಕೋಣೆಯ ಬಾಗಿಲನ್ನು ಶಿವಶರಣರು ನೋಡುತ್ತಿರುವಂತೆಯೇ ಒಂದು ಮದ್ದಾನೆಯು ಬೆನ್ನಟ್ಟಿ ಬಂದು ಸೊಂಡಿಲಿನಿಂದ ಎತ್ತಿಕೊಂಡಿತು. ಆಗವರು ನಿತ್ಯಾತ್ಮ ಸಿದ್ಧಲಿಂಗೇಶಾ !! ಮೃತ್ಯುವು ಪ್ರತ್ಯಕ್ಷವಾಗಿ ಬಂದಂತಿದೆ. ನನ್ನನ್ನು ಬಿಡಿಸಿಕೋ ಎಂದು ಮೊರೆಯಿಟ್ಟರು. ಆ ಸತ್ಯವಂತರ ದನಿಕೇಳಿ ಧಟ್ಟನೆದ್ದು ಬಂದ ಸಿದ್ಧಲಿಂಗೇಶನಿಗೆ ಸೊಂಡಿಲಿನಲ್ಲಿಯೇ ಆ ಶಿವಶರಣರನ್ನು ನಮಸ್ಕರಿಸಲು ಆನೆಯು ಅವರನ್ನು ಸಿದ್ಧಲಿಂಗೇಶನಿಗೆ ಒಪ್ಪಿಸಿತು. ಸರ್ವಸಾಧಾರಣವಾದ ನೈವೇದ್ಯದ ಹೊರೆಯನ್ನು ಹೊತ್ತಿದ್ದಂತೆಯೆ ಸಿದ್ಧಲಿಂಗೇಶನ ಪಾದಗಳಿಗೆರಗಿದ ಭಕ್ತರನ್ನು ಕಂಡು ಸಿದ್ಧೇಶನು ದಯೆಯಿಂದ ಹಿಡಿದೆತ್ತಿದನು. ಜಂಗಮರು ಆನೆಯ ಕೈಗೆ ಸಿಕ್ಕಿ ಉಳಿದ ಮಹಾತ್ಮರೆಂದು ಕೊಂಡಾಡಿ ಮರ್ಯಾದಿಸಿದರು.

ಬಳಿಕ ಆನೆಯು ಸಿದ್ಧಲಿಂಗೇಶ್ವರನ ಪಾದಗಳಿಗೆರಗಿ ಸೊಂಡಿಲಿನಿಂದ ಎತ್ತಿ ಬೆನ್ನಮೇಲೆ ಕುಳ್ಳಿರಿಸಿಕೊಂಡು ಹೊರಟಿತು, ಸ್ವರ್ಗಕ್ಕೆ ಹೊರಟ ಇಂದ್ರನಂತೆ ಕಾಣಿಸಿತು. ಆ ಸಿದ್ಧನ ಹಿಂದುಗಡೆ ಜಂಗಮರೆಲ್ಲರೂ ಭಯಗ್ರಸ್ತರಾಗಿ ಶಿವನೇ ಗತಿ ಎಂದು ಹೋಗುತ್ತಿರಲು ಆ ಆನೆಯು ನದಿಯ ದಂಡೆಗೆ ಬಂದಿತು. ಲೋಕನಾಯಕನು ಬರುತ್ತಿರುವುದನ್ನು ಕಾವೇರಿಯು ದಾರಿ ಬಿಟ್ಟಳು. ಚೇತನವುಳ್ಳವನಿಗೆ ಪ್ರಕೃತಿಯು ಅಧೀನವಲ್ಲವೇ ?? ಒಂದಾಗಿ ಹರಿಯುತ್ತಿದ್ದ ನದಿಯು ಇಬ್ಭಾಗವಾಗಿ ದಾರಿಕೊಟ್ಟಿತು. ಜಂಗಮರೆಲ್ಲರೂ ಕೋಲಾಹಲದೊಡನೆ ನದಿಯನ್ನು ದಾಟಿದರು. ಇದನ್ನು ನೋಡಿ ಗಗನದಲ್ಲಿ ನಿರ್ಜರರು ತುಂಬಿದ ಹೂವಿನ ಮಳೆಗರೆದರು. ಆ ಹೂವು ಬೆಳದಿಂಗಳು ಚೆಲ್ಲಿದಂತೆ ಧರೆಯಲ್ಲಿ ತುಂಬಿ ಹೋಯಿತು. ಈ ಮಹಿಮೆಯನ್ನು ನೋಡಿದ ಮತ್ತು ಕೇಳಿದ ಜನರೆಲ್ಲರೂ ಸಿದ್ಧಲಿಂಗನನ್ನು ಹೊಗಳಿ ಧನ್ಯರಾಗುತ್ತಿದ್ದರು.

ಆನೆಯು ದಡವನ್ನು ತಲುಪಿದ ಮೇಲೆ ನದಿಯು ಮೊದಲಿನಂತೆ ಹರಿಯ ಹತ್ತಿತು. ಸಿದ್ಧಲಿಂಗೇಶ್ವರನು ಆನೆಯಿಂದಿಳಿದು ಶಿವಭಕ್ತರು ತಂದ ನೈವೇದ್ಯವನ್ನು ಆ ಜಂಗಮರೆಲ್ಲರಿಗೂ ನೀಡಿ ತೃಪ್ತಿಪಡಿಸಿದನು. ಒಬ್ಬನಿಗಿಷ್ಟು ಅನ್ನದ ನೈವೇದ್ಯವನ್ನು,, ಒಬ್ಬನಾದ ಸಿದ್ಧಲಿಂಗೇಶ್ವರನು ಬಹಳ ಸಮರ್ಥನಾದ ಜಂಗಮರನ್ನೆಲ್ಲಾ ತೃಪ್ತಿಪಡಿಸಿದ್ದರಲ್ಲಿ ಆಶ್ಚರ್ಯವೇನು ?? ಇವನ ಮಹಿಮೆಯನ್ನು ಹೊಗಳಲು ಎರಡು ಸಾವಿರ ನಾಲಿಗೆಗಳುಳ್ಳ ಆದಿಶೇಷನಿಗೂ ಸಾಧ್ಯ

ವಿಲ್ಲವೆಂದಮೇಲೆ ನರರ ಪಾಡೇನು ? ನಿಮಿಷ ನಿಮಿಷಕ್ಕೂ ಅನೇಕ ಮಹಿಮೆಗಳನ್ನು ಮಾಡುತ್ತ ಜನರ ಮನೋಭೀಷ್ಟಗಳನ್ನು ನೆರವೇರಿಸಿ ಧರ್ಮವನ್ನು ವೃದ್ಧಿ ಮಾಡುತ್ತಿರಲು ಬಿಡುಗಣ್ಣಿನವರೂ ಸಾವಿರ ಕಣ್ಣಿನವರೂ ಸಿದ್ಧಲಿಂಗನ ಮಹಿಮೆಗಳಲ್ಲಿ ಹಲಕೆಲವನ್ನು ಮಾತ್ರ ಕಂಡರೆಂದರೆ ಧರಣಿಯ ಜನರಿಗೆ ಇವನ ಅನಂತ ಮಹಿಮೆಗಳನ್ನರಿಯಲು ಸಾಧ್ಯವಹುದೇ ?

ನಿರಂಜನ ಗಣಾಧೀಶನಾದ ಶ್ರೀ ಸಿದ್ಧಲಿಂಗೇಶ್ವರನು ಈ ರೀತಿಯಾಗಿ ಅನೇಕ ಪವಾಡಗಳನ್ನು ತೋರಿಸುತ್ತಾ ಧರೆಯಲ್ಲಿ ಧರ್ಮವನ್ನು ಬಿಡುತ್ತಾ, ಭಕ್ತಿಯನ್ನು ಬೆಳೆಯುತ್ತಾ, ಸತ್ಯವನ್ನು ಸಾರುತ್ತಾ, ಶಿವನಿಷ್ಠೆಯನ್ನು ಶಾಶ್ವತಗೊಳಿಸುತ್ತಾ ಬರುತ್ತಿರಲು ಒಂದು ಕಡೆ ಎಂಟುದಿನಗಳಿಂದಲೂ ಹುಲ್ಲು ನೀರು ಮುಟ್ಟದೇ ನಿಂತಿದ್ದ ಒಂದು ಬಸವನು ಕಾಣಿಸಿತು. ಎಳೆಯ ಪೈರನ್ನು ಹಾಸಿ ಮಾಡುವ ಗೂಳಿಯನ್ನು ಕಂಡು ಹೊಲದ ಯಜಮಾನನು ಇನ್ನು ನೀನು ತಿಂದರೆ ನಿನಗೆ ಕಲಿಸಿದ್ಧಲಿಂಗನಾಣೆ ಎಂದು ಆಣೆ ಇಟ್ಟನು. ಆ ಸಿದ್ಧಲಿಂಗನ ಆಣೆಯನ್ನು ಮೂರು ಲೋಕದಲ್ಲಿ ಮೀರುವವರಾರು ? ತ್ರಿಗುಣಾತ್ಮಕರಾದ ತ್ರಿಮೂರ್ತಿಗಳೂ ಅವನ ಆಜ್ಞೆಯೊಳಿರುವಾಗ ಈ ಬಸವನ ಮಾತೇನು ?

ಮೇವು ನೀರು ಬಿಟ್ಟು ನಿಂತಿರುವ ಬಸವನು, ಸಿದ್ಧಲಿಂಗನು ಬರಲು ಸ್ವಧರ್ಮವು ಈ ಧರೆಯಲ್ಲಿ ನಾಲ್ಕು ಕಾಲಿನಿಂದ ನಿಂತಿರುವಂತೆ ಕಾಣುತ್ತಿತ್ತು. ಹಾಗೆ ಚಲಿಸದೆ ನಿಂತಿರುವ ಗೂಳಿಯನ್ನು ಕಂಡು ಸಿದ್ಧಲಿಂಗನು ಮೈನೀವಿ ಒಲಿದು “ಆಣೆಬಿಟ್ಟಿತು” ಎನ್ನಲು ಆಗ ಹಿಣಿಲನ್ನು ಅದುರಿಸುತ್ತಾ ಬಾಲವನ್ನು ಬೀಸುತ್ತಾ ಕಿವಿಗಳನ್ನು ಬಡಿಯುತ್ತಾ ಗುಟುರಿಕೆ ಹಾಕಿ ಸಿದ್ಧಲಿಂಗೇಶನ ಇದಿರಿನಲ್ಲಿ ಓಡಾಡಿತು. ಅವನ ಅಪ್ಪಣೆಯಂತೆ ಆಹಾರವನ್ನು ಕೊಂಡಿತು. ಹೀಗೆ ಬಸವನ ಆಣೆಯನ್ನು ಬಿಡಿಸಿ ಯತಿವರನು ಜಂಗಮ ಪರಿವಾರದೊಡಗೂಡಿ ಮಹಮ್ಮಳೇಶ್ವರನ ದೇವಸ್ಥಾನಕ್ಕೆ ಹೊರಟನು. ದೇಶ ದೇಶದ ಜನರೆಲ್ಲರೂ ಸಿದ್ಧಲಿಂಗಾ, ಸಿದ್ಧೇಶ, ಶಿವಸಿದ್ಧ ಎಂದು ಹಗಲೂ ರಾತ್ರಿ ಹಂಬಲಿಸಿ ನಾಮ ಜಪ ಮಾತ್ರದಿಂದ ತಮ್ಮ ಕಷ್ಟ ಕಾರ್ಪಣ್ಯಗಳನ್ನು ಕಳೆದು ಕೊಂಡು ಇಷ್ಟಾರ್ಥಗಳನ್ನು ಪಡೆದು ಸಂತೋಷ ಚಿತ್ತರಾಗಿ ಧರ್ಮಾತ್ಮರಾಗ ಹತ್ತಿದರು.

ಸೂರ್ಯನ ಕಿರಣಗಳು ಎಂಟು ದಿಕ್ಕಿನಲ್ಲಿಯೂ ಹರಡಿಕೊಳ್ಳುವಂತೆ ಸಿದ್ಧಲಿಂಗನ ಚರಿತ್ರೆಯೆಂಬ ಲತೆಯು ಕುಡಿವರಿದು ಇಳೆಯ ದೇಶಗಳಲ್ಲೆಲ್ಲಾ ಪವಿತ್ರವಾಗಿ ಹಬ್ಬಿತು. ದಿನದಿನವೂ ನಡೆದ ಮಹಿಮೆಗಳ ಕೀರ್ತಿಯು ದೇಶಗಳಲ್ಲೆಲ್ಲಾ ಜನಜನಿತವಾಗಿ ಚಿಗಿತು, ಮರ್ತ್ಯರ ಮನವನ್ನು ಹೊಕ್ಕು ಬಾಯಲ್ಲಿ ಕುಣಿಯುತ್ತಿತ್ತು. ಹೀಗಿರಲು ಶ್ರೀಶೈಲದಾಚೆಯಿರುವ ಕುಂತಳ ದೇಶದಲ್ಲಿ ನಿರಂಜನ ಗಣವರ್ಯನ ಸಂತತಿಯಲ್ಲಿ ಒಬ್ಬ ಹೆಂಗಸು ಜನಿಸಿರುವಳು. ಅವಳ ಹೆಸರು ಸುಶೀಲೆ, ಅವಳು ಸುಜ್ಞಾನಿ, ಸದಾ ಶಿವಪೂಜೆ ಪಾರಾಯಣೆ; ಆದರೂ ಅವಳಿಗೆ ಪೂರ್ವಾರ್ಜಿತದ ಕರ್ಮದಿಂದ ಮಹಾರೋಗವಡಗಿ ಕಣ್ಣು ಕುರುಡಾಗಿ, ಕೀವು ರಕ್ತವು ಸುರಿಯುತ್ತಾ, ತೊನ್ನು ಕುಷ್ಠ ಹತ್ತಿ ಮೈಯಲ್ಲಿ ಬಾವೆದ್ದು ಬೇಯುತ್ತಿರುವಳು. ಅವಳು ಮೊದಲ ಜನ್ಮದಲ್ಲಿ ಸೌರಾಷ್ಟ್ರ ದೇಶದ ರಾಜನ ಹೆಂಡತಿ ಶಿವಭಕ್ತೆಯಾಗಿ ಚಲುವೆಯಾಗಿ, ಕುಲಕ್ಕೆ ಯಜಮಾನಿಯಾಗಿ ಪತಿವ್ರತೆಯಾಗಿದ್ದಳು. ಆ ನಗರದ ಮಂತ್ರಿಯ ಮಗ ಮದಜ್ಞಾನನೆಂಬ ವಿಪ್ರನು ಒಂದು ದಿನ ಕೈತೋಟಕ್ಕೆ ಬಂದ ಚಲುವೆಯಾದ ರಾಣಿಯನ್ನು ನೋಡಿ ಭ್ರಮಿಸಿದನು. ಕಾಮನ ಉಪಟಳವನ್ನು ತಾಳಲಾರದೆ ಅವಳ ಬೆನ್ನಟ್ಟಿ ತಿರುಗಹತ್ತಿದನು.

ಆ ರಾಣಿಯು ಒಂದು ದಿನ ಸಖಿಯರೊಡನೆ ಉಪವನದಲ್ಲಿ ವಿಶ್ರಾಂತಿ ಪಡೆಯುತ್ತಿದ್ದಳು. ಆ ಸುಂದರಿಯನ್ನೇ ಅನುಸರಿಸಿ ಬಂದ ಮದಜ್ಞಾನಿಯು ತೋಟಗಾರನಂತೆ ಸುಳಿದು ಆರಳಿದ ಸುಗಂಧ ಪುಷ್ಪಗಳನ್ನು ಕಿತ್ತು ತಂದು ತಂಪು ಮಾತನಾಡಿ ನೋಡಿದನು. ಇವನು ವನಪಾಲಕರ ಗುಂಪಿನವನಿರ ಬೇಕೆಂದು ಸಂಪನ್ನನಂತೆ ಕಾಣುತ್ತಾನೆಂದು ಅವನು ಕೊಟ್ಟ ಹೊನ್ನೆಯ ಹೂವನ್ನು ತೆಗೆದುಕೊಂಡು ಶಿವನಿಗರ್ಪಿಸಿ ತನ್ನ ಜಡೆಯಲ್ಲಿ ಮುಡಿದು ಕೊಂಡಳು. ಅವನಿಗೆ ಧೈರ್ಯ ಹುಟ್ಟಿ ನೀನು ಶಿವಶರಣೆಯಾದರೆ ನಮ್ಮ ವನದಲ್ಲಿ ಪುರಹರ ಲಿಂಗನಿದ್ದಾನೆ ನೋಡು ಬಾ ಎಂದನು. ರಾಣಿಯು ಅವನು ಜಾರನೆಂದರಿಯದೆ ಅವನೊಡನೆ ಹೋದಳು. ಎಷ್ಟು ದೂರ ಹೋದರೂ ದೇವಾಗಾರವು ಕಾಣದೇ ಇನ್ನೆಷ್ಟು ದೂರವಿದೆ ಎಂದಳು.

ಮದಜ್ಞಾನ— ಅಲ್ಲಿ ಹುಡುಕುವುದೇಕೆ,, ನೀನು ಶಿವಭಕ್ತೆ.. ಲಿಂಗಜ್ಞಾನ ನಿನ್ನಲ್ಲಿಲ್ಲವೇ ?? ನಿನ್ನ ಮುಖವು ಲಿಂಗವಲ್ಲವೇ ?? ನನಗೆ ಪೂಜಾಪರಿಕೆ ಕೊಡು. ನಾನು ಪೂಜಿಸುತ್ತೇನೆ.

ರಾಣಿ— ಮಾತನಾಡುವ ಚದುರಾ !! ನೀನಾರು ?? ಈ ಮಾಂಸದ ಮುದ್ದೆಯಲ್ಲಿ ಲಿಂಗವನ್ನು ಕಂಡ ಬಗೆಯೆಂತು ??

ಮದಜ್ಞಾನ— ಸುಂದರಿಯೆ !! ನಾನು ಮಂತ್ರಿಯ ಮಗ. ನಾನು ಮದನಾಗಮವಿಶಾರದ. ನನ್ನ ಹೆಸರು ಮದಜ್ಞಾನ, ನನ್ನ ದೃಷ್ಟಿಯಲ್ಲಿ ಯಾವ ಮಾಂಸದ ಮುದ್ದೆಯೂ ಪೂಜಾರ್ಹವಾದ ಶಿವಲಿಂಗವಾಗಿದೆ. ನನ್ನ ಸೊಗಸನ್ನಾದರೂ ನೋಡು. ರಸಿಕ ಚಕೋರವು ಚಂದ್ರ ಕಿರಣಾಮೃತ ಪಾನ ಮಾಡುವುದಲ್ಲದೇ ಮುಸುರೆಯ ನೀರು ಕುಡಿಯದು. ಒಂದು ಸಾರಿ ನನ್ನಲ್ಲಿ ಸುಖವನ್ನನುಭವಿಸಿದರೆ ಬೇರೆಯವರನ್ನು ಬಯಸೆ.

ರಾಣಿ— ಈ ಚಿನ್ಹೆಗಳನ್ನೆಲ್ಲಾ ಸಾಕ್ಷಿಯಾಗಿ ತೋರಿಸುವುದುಚಿತವಲ್ಲದೇ ತಾಯಿಯೊಡನೆ ಮಗನಿಗೆ ಹಾಸ್ಯ ತರವಲ್ಲ.

ಮದಜ್ಞಾನ— ಗೋವು ತನ್ನ ಕರುವಿನಿಂದಲೇ ತಾಯಿಯಾಗುವುದಿಲ್ಲವೆ ?? ಅದರಂತೆ ನೀನು ನನ್ನೊಡನೆ ಕ್ರೀಡಿಸಿದರೆ ಅದರಲ್ಲೇನೂ ದೋಷವಿಲ್ಲ.

ರಾಣಿ— ಹುಲಿಯುಗುಡು, ಆನೆಯ ದಂತ, ಪತಿವ್ರತೆಯರ ಮಾನ ಇವು ಮರಣ ಜೀವಮಾನವರೆಗೂ ಪರರ ವಶವಾಗಲಾರವು ಎಂಬ ನೀತಿಯನ್ನು ಕೇಳಿದಂತೆ ಕಾಣುವುದಿಲ್ಲವೆಂದು ಹೇಳಿ ಈ ಪಾಪಿಯ ಮುಖ ನೋಡಬಾರದೆಂದು ತಿರುಗುವಳು.

ಮದಜ್ಞಾನ— ((ಸೆರಗು ಹಿಡಿದು)) ಇಷ್ಟು ನಿರ್ದಯವೇಕೆ ?? ನನ್ನನ್ನು ಪಾಲಿಸು, ಮೊರೆ ಹೊಕ್ಕವರನ್ನು ಕಾಯುವುದು ಅಧಿಕ ಧರ್ಮಗಳು. ಮದನನು ನನ್ನ ಮೇಲೆ ಕೋಪಗೊಂಡಿದ್ದರಿಂದ ನಾನು ಬಂದು ನಿನ್ನನ್ನು ಮರೆ ಹೊಕ್ಕೆ, ಕಾಪಾಡು ಎಂದು ಅತ್ತ ಕಡೆಗೆ ಎಳೆಯುತ್ತಿರಲು ಇವಳು ಇತ್ತ ಕಡೆಗೆ ಎಳೆಯುವಳು, ಹೀಗೆ ಹೋರಾಡಿ ಸೆರಗನ್ನು

ಬಿಡಿಸಿಕೊಂಡು ಕೆಳದಿಯರ ಗುಂಪಿಗೆ ಓಡಿಬಂದಳು. ಸುರೆಯನ್ನು ಕುಡಿದವನು, ಕಾಮಾಂಧಕಾರಕ್ಕೆ ಸಿಕ್ಕಿದವನು, ಕಳವು ಮಾಡುವವನು ಈ ಮೂವರೂ ಶಿರವು ಹೋಗುವುದನ್ನೂ ಅರಿಯರೆಂಬ ನೀತಿಯು ಸತ್ಯವಾದದ್ದು.

ದಾದಿಯರ ಗುಂಪನ್ನು ಹೊಕ್ಕರಾಣಿಯು ದುಮ್ಮಾನದೊಡನೆ ಅರಮನೆಯನ್ನು ಸೇರಿ ಚಿಂತೆಯಿಂದ ನರಳುತ್ತಿದ್ದಳು. ಮನ್ಮಥಸಮರೂಪನಾದ ರಾಜನು ಬಂದು ರಾಣಿಯ ದುಮ್ಮಾನವನ್ನು ನೋಡಿ,

ರಾಜ— ಮನದ ಕಳವಳವೇನು ?

ರಾಣಿ— ಗೆಳತಿಯರೊಡಗೂಡಿ ನಾನು ವನಕ್ಕೆ ಹೋಗಿದ್ದೆನು. ಮಂತ್ರಿಕುವರನು ಕಳವಿನಿಂದ ಬಂದು ಪೀಡಿಸಿದನು. ನಾನು ಅವನಿಗೊಲಿಯದೇ ಪಾತಿವ್ರತ್ಯ ಕಾಪಾಡಿಕೊಂಡು ಹೇಗೊ ಓಡಿಬಂದೆನು. ಮಾನ ಹೋದುದಕ್ಕಿಂತಲೂ ಪ್ರಾಣ ಹೋಗಿದ್ದರೆ ಚನ್ನಾಗಿತ್ತು.

ರಾಜ— (ಮುನಿದು) ಆ ನೀಚನ ಪ್ರಾಣವನ್ನು ತೆಗೆಯುವುದೇ ಲೇಸು. ಇಷ್ಟು ಚಿಕ್ಕವಯಸ್ಸಿನಲ್ಲೇ ಇಷ್ಟು ಅನೀತಿಗಿಳಿದವನು ಮುಂದೆಷ್ಟು ಜನರ ಮಾನಹಾನಿ ಮಾಡುವನೋ ! ಎಷ್ಟು ಜನರ ಕಣ್ಣೀರು ಕಾಲುವೆ ಹರಿಸುವನೋ ! ಎಂದು ವಿಚಾರಿಸಿ ಚಂಡಾಲರನ್ನು ಕರೆಯಿಸಿ ಮಂತ್ರಿಯ ಕಳ್ಳಮಗನ ಕಣ್ಣುಗಳನ್ನು ಅರ್ಧ ನಿಮಿಷದೊಳಗಾಗಿ ಕಿತ್ತು ದೇಹವನ್ನು ಪಂಜಿನಿಂದ ಸುಡಿರಿ ಎಂದು ಅಜ್ಞಾಪಿಸಿದನು.

ರಾಜಾಜ್ಞೆಯಂತೆ ತಾಯಿಗೆರಡು ಬಗೆದ ಪಾಪಿಯ ಕಣ್ಣು ಕಿತ್ತು ಕಾಯುವ ಬೆಂಕಿಯಿಂದ ಸುಡಲು ಆ ಬ್ರಹ್ಮಹತ್ಯವು ಆ ಸ್ತ್ರೀಗೆ ಹತ್ತಿ ಪೀಡಿಸ ತೊಡಗಿತು. ಆ ಬ್ರಹ್ಮಹತ್ಯಾಪಾತಕದಿಂದ ರೋಗ ಹುಟ್ಟಿ ಏಳು ಜನ್ಮವಾದರೂ ಹೋಗದೆ ಎಂಟನೇ ಜನ್ಮದಲ್ಲಿ ಆ ಸತಿಯನ್ನು ಕಾಡುತ್ತಿರುವುದು. ತೊನ್ನು ಕುಷ್ಠವು ಹತ್ತಿ ಕಣ್ಣು ಕುರುಡಾಗಿ ಶಿವಶಿವಾ ಈ ಜನ್ಮ ಇನ್ನು ಸಾಕು ಎಂದು ವ್ರತಧರ್ಮಗಳನ್ನು ನಡೆಯಿಸುತ್ತಿದ್ದರೂ ನಿವಾರಣೆಯಾಗದಿರುವುದು.

ಲೋಕದ ದೇವರುಗಳನ್ನೆಲ್ಲಾ ನೊರೆಹೊಕ್ಕು ಅನೇಕ ಸೇವೆಗಳನ್ನೆಲ್ಲಾ ನಡೆಸಿದರೂ ಈ ಕರ್ಮವು ತೊಲಗಲಿಲ್ಲ. ಕಡೆಗೆ ಅವಳು ಸಿದ್ಧಲಿಂಗೇಶ್ವರನ ಮಹಿಮೆಯ ಪರಿಮಳವು ಹರಡಿರಲು ಅದನ್ನು ಕೇಳಿ ಸಿದ್ಧಲಿಂಗನನ್ನು ಶರಣು ಹೊಕ್ಕಳು. ತೊನ್ನು ಮೈಯಿಗೆ, ಕುರುಡು ಕಣ್ಣಿಗೆ ಭಸ್ಮವನ್ನು ಧೂಳಿಸಿ ಪ್ರಣವ ಮೂರ್ತಿಯಾದ ಸಿದ್ಧೇಶ್ವರನನ್ನು ಧ್ಯಾನಿಸತೊಡಗಿದಳು. ಮೂರು ದಿನಕ್ಕೆ ಭವರೋಗ ವೈದ್ಯನ ಅನುಗ್ರಹದಿಂದ ಕುಷ್ಠವು ಹತೋಟಿಗೆ ಬಂದು ಕಣ್ಣ ದೃಷ್ಟಿಯು ಕಾಣಬಂದಿತು. ಆಕೆಯು ಕಾಲನಡಿಗೆಯಿಂದಲೇ ಸಿದ್ಧೇಶ ನೆಡೆಗೆ ಹೊರಟಳು. ಈ ರೀತಿಯಾಗಿ ಕುಂತಳ ದೇಶದಿಂದ ನಡೆಯುತ್ತ ದ್ರಾವಿಡ ದೇಶದಲ್ಲಿ ಪ್ರಸಿದ್ಧವಾದ ಮಹಾಬಲೇಶ್ವರನ ಗುಡಿಯಲ್ಲಿಳಿದಿರುವ ಸಿದ್ಧೇಶನ ಬಳಿಗೆ ಬಂದಳು.

ಸಿದ್ಧಲಿಂಗೇಶ್ವರನು ಮಹಾಬಲೇಶ್ವರ ದೇವಾಲಯವನ್ನು ಕಲುಪಿದ ಸಮಯದಲ್ಲಿಯೇ ಸುಶೀಲೆಯು ಬಂದಿದ್ದಾಳೆ. ಘನ ಶರಣೆಯು ಬಂದಳೆಂದು ಆಪದ್ಬಾಂಧವನೂ ಶರಣ ಜನಮನ ವಸಂತನೂ, ಭಕ್ತ ಚಕೋರ ಚಂದಿ ರನೂ ಆದ ಸಿದ್ಧೇಶನು ಎದುರಾಗಿ ಬಂದು ಕಾಣಿಸಿಕೊಳ್ಳಲು ಭಕ್ತಳು ಓಡೋಡಿ ಬಂದು ಸಿದ್ಧನ ಪಾದಗಳಿಗೆ ಅತ್ಯಾನುರಾಗದಿಂದ ಎರಗಿದಳು. ಬಾಣನ ಮನೆಯ ಬಾಗಿಲನ್ನು ಕಾಯ್ದ ಜಗದೀಶಾ, ಅಣುರೇಣುತೃಣಕಾಷ್ಠ ಪರಿಪೂರ್ಣ ಶರಣು ಜನಮನೋಜಗತ್ ಶಂಭೂ ಎಂದು ಸ್ತುತಿಸಿದಳು.

ಆಗ ಸಿದ್ಧೇಶ್ವರನು, ಮಗಳೇ ! ಬದುಕೆಂದು ಮುಂಡೆಯಲ್ಲಿ ಕೈಯೂರಿ ಮೇಲೆತ್ತಿ ತೊಡೆಯೊಳಗೆ ಕೂರಿಸಿಕೊಂಡು ಉಪಚರಿಸಿದನು. ಏಕೋರಾಧ್ಯನ ಕರದಿಂದ ಮನ್ನಣೆಗೊಂಡ ಮುದ್ದುಮಗಳನ್ನು ಆ ಕೋಟಿ ಕೋಟಿ ಜಂಗಮರು ಸ್ತುತಿಸಿದರು.

ನಮ್ಮ ರೂಪಿನ ಈ ಸಿದ್ಧೇಶನು ನಾವು ಮಾಡಬೇಕಾದ ಕೆಲಸವನ್ನು ತಾನೇ ಮಾಡುತ್ತಾ ನಮ್ಮ ಧರ್ಮದ ಬಿರುದನ್ನುದ್ಧರಿಸಿದನು. ಆ ಮಹಿಮ ನನ್ನು ಕರೆದು ಉಪಚರಿಸಬೇಕೆಂದು ಮಹಾಬಲೇಶ್ವರನು ಗುಡಿಯಿಂದ ವೃದ್ಧ ಜಂಗಮ ವೇಷಧರಿಸಿ ಬಂದನು. ನೀನು ಕೈಲಾಸದಿಂದಿಳಿದು ಬಂದ ಪವಾಡ

ಪುರುಷ, ನೀನು ಮಾಡುವ ಮಹಿಮೆಯ ನಿಲವಿಗೆ ನಾನು ಮೆಚ್ಚಿದೆನು ಎಂದು ಕೊಂಡಾಡಿ ಸಿದ್ಧೇಶನನ್ನಪ್ಪಿಕೊಂಡನು. ಸ್ಥಿರ ಚರಲಿಂಗಗಳೆರಡೂ ಜೊತೆಯಾಗಿ ಬೆರೆತು ಮಾಯವಾದರು. ಅಯ್ಯಗಳೆಲ್ಲರೂ ಬೆಪ್ಪಾದರು. ದಿಕ್ಕುದಿಕ್ಕಿನಲ್ಲಿ ಹುಡುಕಲಾರಂಭಿಸಿದರು. ಕೆಲವರು ಮರವಾಗಿ ಕುಳಿತು ಬಿಟ್ಟರು. ಸುಶೀಲೆಯ ಕಣ್ಣಿಗೆ ಇಬ್ಬರೂ ಸೇರಿ ಗುಡಿಯ ದಿಕ್ಕಿಗೆ ಹೋದಂತೆ ಕಾಣಿಸಿತು.

ಮಹಮ್ಮಳೇಶ್ವರನ ನಂಬಿಯರು ಪೂಜೆಗೆಂದು ಬಂದು ಬೀಗಮುದ್ರೆ ತೆಗೆದು ಒಳಹೋಗಲು ಸಿದ್ಧೇಶನು ದೇವರ ಮೇಲೆ ಕುಳಿತಿರುವುದು ಕಾಣಿಸಿತು. ಮಹಮ್ಮಳೇಶನ ಭಕ್ತಿಗೆ ಸಿಕ್ಕಿ ಲಿಂಗವನ್ನಪ್ಪಿ ಮೇಲೆ ನರಜಂಗಮವು ಕುಳಿತಿರುವುದು ಬಲು ದ್ರೋಹವೆಂದು ಆಗ್ರಹಗೊಂಡು ನಿಂದಿಸಿದರು. ಆ ಸುದ್ದಿಯನ್ನು ಅರಸನಿಗೆ ಮುಟ್ಟಿಸಿದರು. ರಾಜನು ಮುನಿದು ಆಗ್ರಹದಿಂದ ನಮ್ಮ ಲಿಂಗದ ಮೇಲೆ ಕುಳಿತ ಜಂಗಮನ ಚರ್ಮವನ್ನು ಸುಲಿಸುತ್ತೇನೆ. ಹಿಡಿದು ತನ್ನಿರೆಂದು ಆರ್ಭಟಿಸುತ್ತಾ ಬರುವ ಭೂಪನ ಕಣ್ಣಿಗೆ ಗುಡಿಯು ಮಾಯವಾಗಿ ನಿರ್ಬಯಲಾಯಿತು. ಆಗ ರಾಜನು ಬೆರಗಾದನು. ಅಪಶಕುನಗಳಾದುವು, ಯಾರಿಂದ ತಪ್ಪು ನಡೆಯಿತೆಂದು ಯೋಚಿಸುವ ರಾಜನಿಗೆ ಮಾನವ ಮಾತ್ರದವನು ಬಂದು ಲಿಂಗವೇರುವ ತ್ರಾಣವು ಲೋಕದಲ್ಲಿಲ್ಲ. ಇದನ್ನರಿಯದೇ ದೂಷಿಸಿದ್ದು ನನ್ನದೇ ತಪ್ಪು. ಇವನಾರೋ ಭೂರುದ್ರನಲ್ಲದೇ ಸಾಮಾನ್ಯನಲ್ಲ. ಇನ್ನೇನನಿಷ್ಟಗಳಾಗುವವೋ ಎಂದು ಹೆದರಿ ಭಕ್ತವತ್ಸಲಾ, ದೇವೋತ್ತಮ, ಅಜ್ಞಾನತಿಮಿರ, ಚಿಜ್ಯೋತಿ, ನನ್ನ ಅಪರಾಧವನ್ನು ಕ್ಷಮಿಸು ಎಂದು ಕೊಂಡಾಡಿದನು. ಅಷ್ಟರಲ್ಲಿ ಅರುಣಾಚಲೇಶ್ವರನ ಪಂಚತಾವಡದ ಸುದ್ದಿಯನ್ನು ಜಂಗಮರು ತಿಳಿಸಿದರು. ಆಗ ರಾಜನಿಗೆ ಅರಿವು ತಲೆದೋರಿ ಸರ್ವಾಪರಾಧವನ್ನೂ ಕ್ಷಮಿಸೆಂದು ಬೇಡಿಕೊಳ್ಳಲು ದೇವಾಲಯವು ಮೊದಲಿನಂತೆ ಕಾಣಿಸಿತು. ಈ ಕಥೆಯನ್ನು ಕೇಳಿ ಸುತ್ತಮುತ್ತಣ ಪುರಗ್ರಾಮಗಳ ಜನರು ಆಚಾರ ಕ್ರಿಯಾಭಕ್ತಿಯಿಂದ ಇಷ್ಟಾರ್ಥವನ್ನು ಪಡೆಯಲು ಸಿದ್ಧೇಶನೆಡೆಗೆ ನಡೆದರು. ಧೂಪದ ಹೊಗೆ ಹಾಕುತ್ತ ಷಡ್ರಸದ ನೈವೇದ್ಯವನ್ನು ಹೊತ್ತು ಜನರು ಬಂದು ಸೇರಿದರು. ಸ್ಥಿರಲಿಂಗ ಪೂಜೆ

ಮಾಡಹೋಗಲು ಮಹಬಲೇಶ್ವರನು ಪ್ರತ್ಯಕ್ಷವಾಗಿ ಈತನು ಭೂರುದ್ರನು, ಈತನೇ ಸಾಕ್ಷಾತ್ ನಿರಂಜನ ಜಂಗಮನು, ಈತನೇ ಕ್ರಿಯಾಮೂರ್ತಿಗಳ ನಿಯಾಮಕನು. ಈತನೇ ನನ್ನ ಧರ್ಮ, ಈತನೇ ನನ್ನ ಮರ್ಮ, ಈತನೇ ನನ್ನ ಪ್ರಾಣ, ಈತನ ಪೂಜೆಯಿಂದ ನಾನು ಪ್ರಸನ್ನನಾಗುವೆನು. ಈತನ ಪೂಜೆಯೇ ನಡೆಯಲಿ ಎಂದು ಹೇಳಲು ಅದರಂತೆ ಸಿದ್ಧಲಿಂಗನ ಪೂಜೆ ನಡೆಯಿತು. ಜಂಗಮಾರ್ಚನೆಯಾಯಿತು.

ಸಿದ್ಧೇಶ್ವರ ತೃಪ್ತನಾಗಿ ಮೂಲ ವಿಗ್ರಹದಿಂದ ಹೊರಟು ಬಂದನು. ಶರಣು ಬಂದ ರಾಜನನ್ನು ಕಂಡು ಮಗನೇ, ನೀನು ಈಶಭಕ್ತಿ ಸಾಮ್ರಾಜ್ಯವನ್ನು ಪಡೆದು ಸುಖವಾಗಿ ಬಾಳೆಂದು ಆಶೀರ್ವದಿಸಿದನು. ರಾಜನು ಗುರುವೇ ಸಿನ್ನಾಜ್ಞೆಯಲ್ಲಿರುವಂತೆ ಹರಸೆನ್ನಲು, ಆಗ ಆತನಿಗೆ ಭಸಿತ, ರುದ್ರಾಕ್ಷಿ ಪಂಚಾಕ್ಷರಿಯ ಮಂತ್ರಗಳನ್ನು ಅನುಗ್ರಹಿಸಿ ಮುಂದಕ್ಕೆ ಹೊರಟನು.

ಭೂರುದ್ರರ ದಂಡಿನೊಡನೆ ಸಿದ್ಧೇಶ್ವರನು ಅಜ್ಞಾನ ಸಂಹಾರಾರ್ಥವಾಗಿ ಹೊರಟ ಸುಜ್ಞಾನ ನಿಧಿಯಂತೆ ಭೇರಿನಿನಾದ ನಂದಿಯ ಧ್ವಜಪಟಗಳೊಡಗೂಡಿ ಶ್ರೀರಂಗ ಕುಂಭಕೋಣಗಳನ್ನು ನೋಡುತ್ತಾ ಸಾಗರದ ದಿಣ್ಣೆಯಲ್ಲಿರುವ ರಾಮೇಶ್ವರನ ದೇವಾಲಯಕ್ಕೆ ಬಂದಿಳಿದನು. ಈ ಕ್ಷೇತ್ರ ಮಹತ್ವವೇನೆಂದು ಕೇಳುವ ಜಂಗಮರಿಗೆ ಸಾವಧಾನವಾಗಿ ಪೂರ್ವ ವೃತ್ತಾಂತವನ್ನರುಹಿದನು. ಹರಿಯು ಶ್ರೀರಾಮನಾಗಲು ಸುರರೆಲ್ಲರೂ ವಾನರರಾಗಿ ಭೂಮಿಯಲ್ಲಿ ಜನಿಸಿದರು. ತಂದೆಯಾದ ದಶರಥನ ಮಾತಿಗಾಗಿ ರಾಮನು ಅರಣ್ಯಕ್ಕೆ ಹೊರಟನು. ವನದಲ್ಲಿ ತಮ್ಮ ಮತ್ತು ಹೆಂಡತಿಯೊಡನೆ ವಾಸಿಸುತ್ತಿರುವಾಗ ರಾಕ್ಷಸನಾದ ರಾವಣನು ಮಾಯದಿಂದ ಹೆಂಡತಿಯಾದ ಸೀತೆಯನ್ನು ಕದ್ದೊಯ್ದನು. ಶ್ರೀರಾಮನು ಹನುಮಂತ ಸುಗ್ರೀವರ ಸ್ನೇಹವನ್ನು ಬೆಳೆಸಿ, ಸುಗ್ರೀವನ ಅಣ್ಣನಾದ ವಾಲಿಯನ್ನು ಕೊಂದು ಸುಗ್ರೀವನಿಗೆ ಪಟ್ಟಗಟ್ಟಿದನು. ಆ ಸುಗ್ರೀವನ ವಾನರ ಸೇನೆಯಿಂದ ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ ಲಂಕೆಯನ್ನು ಸೇರಿ, ಅತಿಕಾಯ ಇಂದ್ರಜಿತ್, ಕುಂಭಕರ್ಣರನ್ನು ಕೊಂದು ರಾವಣನನ್ನು ಸಂಹರಿಸಿ, ವಿಭೀಷಣನಿಗೆ ಲಂಕೆಯ ಪಟ್ಟಗಟ್ಟಿ ತನ್ನ ಹೆಂಡತಿಯಾದ ಸೀತೆಯೊಡನೆ ಅಯೋಧ್ಯೆಗೆ ಬಂದು ಪಟ್ಟಾಭಿಷಿಕ್ತನಾದನು.

ಶಿವಭಕ್ತರೂ ಬ್ರಹ್ಮ ವಂಶೀಯರೂ ಆದ ರಾಕ್ಷಸರನ್ನು ಕೊಂದ ಪಾಪವು ಕಾಡುತ್ತಿರಲು ಬ್ರಹ್ಮಹತ್ಯೆಗೆ ಲಿಂಗ ಪ್ರತಿಷ್ಠೆಯೊಂದೇ ನಿವಾರಣೋ ಪಾಯವೆಂದರಿತ ರಾಮನು ಕಾಶಿಯ ಲಿಂಗವನ್ನು ತರುವಂತೆ ಹನುಮಂತ ನಿಗೆ ಹೇಳಿದನು.

ಅವನು ಬರುವುದು ತಡವಾಗಲು ಮುಹೂರ್ತವು ಮೀರದಂತೆ ಮರಳ ಲಿಂಗವನ್ನೇ ಮಾಡಿ ಪೂಜಿಸಲು ಪ್ರಾರಂಭಿಸಿದನು. ಅಷ್ಟರಲ್ಲಿ ಹನುಮಂತನು ಲಿಂಗವನ್ನು ತರಲು ಅವನಿಗೆ ಕೋಪ ಬರದಂತೆ ಕಾಶಿಯ ಲಿಂಗಕ್ಕೆ ಮೊದಲು ಪೂಜೆ ನಡೆದ ನಂತರ, ಮೃತ್ತಿಕಾ ಲಿಂಗಕ್ಕೆ ಪೂಜೆ ಸಲ್ಲಲಿ ಎಂದು ವಚನ ವಿತ್ತನು. ಹೀಗೆ ವಿಧ್ಯುಕ್ತವಾಗಿ ಲಿಂಗ ಪ್ರತಿಷ್ಠೆಯನ್ನು ಮಾಡಿ ಲಿಂಗಪೂಜೆ ಯನ್ನು ನಡೆಸಿ ಸೂರ್ಯವಂಶದ ಶ್ರೀರಾಮನು ರಾಕ್ಷಸರನ್ನು ಕೊಂದ ಶಾಪವನ್ನು ಕಳೆದುಕೊಂಡನು.

ಪಂಚವಿಧಶುದ್ಧಿಯುಂತು ವಂಚನೆಯಿಲ್ಲದೇ ಪೂಜಿಸಿದರೆ ಪಂಚಮಹಾ ಪಾತಕಗಳು ನಾಶವಾಗುವವು. ಬ್ರಹ್ಮನು ಶಿಲಾಲಿಂಗವನ್ನು ಪೂಜಿಸುವನು. ಇಂದ್ರನು ನೀಲಮಣಿ ಲಿಂಗವನ್ನು ಪೂಜಿಸುವನು. ಹರಿಯು ರತ್ನದ ಲಿಂಗ ವನ್ನು ಪೂಜಿಸುವನು, ಕುಬೇರನು ಹೊನ್ನಲಿಂಗವನ್ನೂ, ವಿಶ್ವದೇವತೆಗಳು ಬೆಳ್ಳಿಯ ಲಿಂಗವನ್ನೂ, ವಾಯುವು ಹಿತ್ತಾಳೆ ಲಿಂಗವನ್ನೂ, ಅಶ್ವಿನಿ ದೇವತೆ ಗಳು ಮೃತ್ತಿಕಾಲಿಂಗವನ್ನೂ, ಅಗ್ನಿಯು ಅನ್ನಮಯ ಲಿಂಗವನ್ನು, ಬೃಹ ಸ್ಪತಿಯು ಮಾಣಿಕ್ಯ ಲಿಂಗವನ್ನು, ಶುಕ್ರನು ಕಬ್ಬಿಣದ ಲಿಂಗವನ್ನು, ಶನಿಯು ಸೀಸದ ಲಿಂಗವನ್ನೂ, ಸಪ್ತರ್ಷಿಗಳು ಕುಶಮಯ ಲಿಂಗವನ್ನೂ, ಅನಂಗನು ಕುಸುಮಲಿಂಗವನ್ನೂ, ಶಕ್ತಿಯರು ನಾನಾವರ್ಣದ ಲಿಂಗವನ್ನು ಪೂಜಿಸುತ್ತಿರುವರು. ಈ ರೀತಿ ಶಿವಲಿಂಗ ಪೂಜೆಯನ್ನು ಮಾಡಿ ದೇವಾನು ದೇವತೆಗಳು ತಮ್ಮ ತಮ್ಮ ಪದವಿಗಳನ್ನು ಪಡೆದರು. ತಮ್ಮ ತಮ್ಮ ಇಷ್ಟಾರ್ಥಗಳನ್ನು ಪಡೆದರು ಎಂದು ಸಿದ್ಧೇಶ ಶರಣರಿಗೆ ತಿಳಿಸಿ ಲಿಂಗಾರ್ಚನಾ ವಿಧಿಯನ್ನು ವಿವರಿಸಿದನು.

ದೋಣಿಯಲ್ಲಿ ಕುಳಿತು ಸಮುದ್ರದಲ್ಲಿ ಕೊಂಚ ಹೊತ್ತು ಆನಂದದಿಂದ ಸಂಚರಿಸಿದ ಮೇಲೆ ಸಿದ್ಧೇಶ್ವರನು ಭೂರುದ್ರರ ಗಣದೊಡಗೂಡಿ ಪಡುವೊಗ

ನಾಗಿ ಹಿಂದಿರುಗಿ ಅನಂತಶಯನ, ತಾಮ್ರಪರ್ಣಿಯ ತೀರದ ಪುಣ್ಯಕ್ಷೇತ್ರಗಳನ್ನು ನೋಡುತ್ತಾ ಮಲೆಯಾಳ ದೇಶಕ್ಕೆ ಬಂದನು. ಅಲ್ಲಿ ಎಲ್ಲ ವಿಧವಾದ ವೃಕ್ಷಗಳು ತುಂಬಿರುವ ವನಗಳು ಬೆಳೆದು ಅಡವಿಯು ಮುಚ್ಚಿಹೋಗಿತ್ತು. ಆ ವನದಲ್ಲಿ ನಾನಾ ವಿಧವಾದ ಪಕ್ಷಿಗಳು ವಾಸವಾಗಿದ್ದವು. ಆ ದೇಶದ ಜನರು ಮರದಡಿಯಲ್ಲಿ ಮನೆಕಟ್ಟಿ ವಾಸವಾಗಿರುವರು. ಮನೆಯ ಅಂಗಳವು, ಗಿಡ ಮರಗಳಿಂದ ತುಂಬಿರುವುದು, ಅವರ ನುಡಿಯು ಹಸನಲ್ಲ; ಆಚಾರ ಕ್ರಿಯೆಗಳ ಗೊಡವೆಯೇ ಅವರಲ್ಲಿಲ್ಲ. ಈಶಭಕ್ತರ ಸುಳಿವೇ ಅಲ್ಲಿಲ್ಲ. ಜಡದೇಹಿಗಳು, ಸರ್ವರೂ ಶಕ್ತಿ ಪೂಜಕರು. ಆ ಶಕ್ತಿಯ ಬಲದಿಂದ ಹೊರಗಣ್ಣಿಂದ ಬಂದವರು ಅರಿಯದೇ ಆಶೆಪಟ್ಟು ಹಣ್ಣು ಹೂ, ಕಡ್ಡಿ ಮುಂತಾದ ಯಾವುದೊಂದಕ್ಕೆ ಕೈಯಿಟ್ಟರೂ ಕೈಸಿಕ್ಕಿಕೊಂಡು ಕಿತ್ತರೂ ಬಾರದು. ಇಂಥಾ ನಾಡಿನಲ್ಲಿ ಸಿದ್ಧೇಶನು ಬರುತ್ತಿರುವಾಗ ಹಿಂದಿದ್ದ ಜಂಗಮರು ಅರಿಯದೇ ದುಡುಕಿ ಮಾಗಿದ ಹಣ್ಣು ಅರಳಿದ ಹೂಗಳಿರುವ ತೋಟಗಳನ್ನು ಗುಂಪು ಗುಂಪಾಗಿ ಹೊಕ್ಕು ಗೊನೆಗೆ ಕೈಯಿಟ್ಟು ಶಕ್ತಿ ಮಹಿಮೆಯಿಂದ ಕೈಗಳು ಸಿಕ್ಕಿಕೊಂಡು ಕಿತ್ತರೂ ಬಾರದೆ ಗೊನೆಗಳಲ್ಲಿಯೇ ಸಿಕ್ಕಿಕೊಂಡವು. ಇದನ್ನು ನೋಡಿ ಸಿದ್ಧೇಶ್ವರನು ಎಲ್ಲರ ಕೈಗಳೂ ಚಳಕವಾಗಲಿಯೆಂದನು. ಕೂಡಲೇ ಅವರ ಕೈಗಳು ಬಿಡುಗಡೆಯಾಗಿ ಬೇಕು ಬೇಕಾದ ಹೂ ಹಣ್ಣುಗಳನ್ನು ಮನ ಬಂದಂತೆ ಕಿತ್ತು ತಂದರು. ತೋಟಗಳೆಲ್ಲವೂ ಸೂರೆಯಾದವು, ಹಣ್ಣು ಹೂಗಳು ರಾಶಿ ರಾಶಿಯಾಗಿ ಬಿದ್ದವು. ಶರಣ ಸಮೂಹವು ಸಂತೋಷದದಿಂದ ಶಿವಪೂಜೆಯನ್ನು ಮುಗಿಸಿ ಸಾಕು ಬೇಕಾಗುವವರೆಗೂ ಫಲಗಳನ್ನು ತಿಂದು ನಿರ್ಭಯರಾಗಿದ್ದರು.

ವನಪಾಲಕರು ಈ ವಿಷಯವನ್ನು ಆ ದೇಶದ ಶಾಕ್ತೇಯ ರಾಜನಿಗೆ ತಿಳಿಸಿದರು. ಆ ರಾಜನು ಕಾತುರದಿಂದ ಆ ಜಂಗಮರ ಸೇನೆಯನ್ನು ಮೋಸದಿಂದ ಕೊಂದು ಬನ್ನಿರೆಂದು ತಾನು ಪೂಜಿಸುವ ಹಿರಿಯ ಭೂತವನ್ನು ಕಳಿಸಿದನು. ಆ ಮಹಾಭೂತವು ಏಳು ಸಮುದ್ರಗಳನ್ನು ಒಂದು ಸಾರಿಗೆ ಆಪೋಶನಗೊಳ್ಳುವುದು. ಇಂಥಾ ಭೂತವು ತನ್ನ ಪರಾಕ್ರಮದಿಂದ ಎಂಟು ದಿಕ್ಕುಗಳನ್ನು ವ್ಯಾಪಿಸಿ ಹೊಗೆ ಬೆಂಕಿಯನ್ನು ಸುರಿಸುತ್ತಾ, ಮರಗಳನ್ನು

ಉರಿಸಿ ಕೆಂಡಗಳನ್ನು ತೂರುತ್ತಾ, ಚಿಟಲ್ ಸಿಟಲ್ಲೆಂದು ಮಹಾಶಬ್ದವನ್ನು ಮಾಡುತ್ತಾ ಬರುತ್ತಿರುವುದನ್ನು ಸಿದ್ಧೇಶ್ವರನು ನೋಡಿ ತನ್ನಲ್ಲಿರುವ ಚಂಡಿ ಪ್ರಚಂಡಿಗಳನ್ನು ಕರೆದು ಆ ಶಕ್ತಿ ಭೂಪಾಲನನ್ನು ಭೂತಸಹಿತ ಕೊಂದು ಬನ್ನಿರೆಂದು ಆಜ್ಞಾಪಿಸಿದನು. ಆ ಭೂತಗಳು ಸಿದ್ಧೇಶ್ವರನ ನುಡಿಗೇಳಿ ಹಿರಿಯ ಭೂತವು ಭೂಪಾಲಕನನ್ನು, ಕಿರಿಯ ಭೂತವು ಶಕ್ತಿ ಭೂತವನ್ನು ಮುತ್ತಿದವು. ಚಂಡಿಯು ಸಮುದ್ರದ ನೀರನ್ನು ಕುಡಿದು, ಶಕ್ತಿಭೂತವು ಹಚ್ಚಿದ ಉರಿಗೆ ಕುಡಿದ ನೀರನ್ನು ಉಗುಳಿ ಆರಿಸಿ ರಾಜನ ಭೂತದ ಎದುರಿಗೆ ನಿಂತಿತು. ಮಲಯಾಳ ಭೂತವು ಮುನಿದು ಕಲ್ಲು ಗುಂಡುಗಳ ಮಳೆ ಸುರಿಸಿತು. ಅದನ್ನು ಕಂಡು ಶಿವಭೂತವು ಅವನ್ನು ನುಂಗಿ ಆ ಭೂತವನ್ನು ಕೊಲ್ಲಲು ಎದುರಾಯಿತು. ಅದನ್ನು ಕಂಡು ಮಲಯಾಳ ಭೂತವು ಮಾಯವಾಗಿ ಆಕಾಶಕ್ಕೆ ಗರಿಚಂಡಿಸಿತು. ಹಗಲು ಅಂಧಕಾರ ಕವಿದು ಬಿರುಗಾಳಿ ಬೀಸಿತು. ಅಗಣಿತ ಹಾವು ಚೇಳುಗಳ ಮಳೆ ಸುರಿಯಿತು ಜನರೆಲ್ಲರೂ ಬೆದರಿದರು. ಹಾವು ಚೇಳುಗಳು ಹರಿದಾಡುತ್ತಿರಲು ಶಿವಭೂತವು ತನ್ನ ರೋಮವನ್ನು ಕಿತ್ತೆಸೆದ ಕೂಡಲೇ ಅದು ಗರುಡನಂತೆ ಆವರಿಸಿ ಹಾವು ಚೇಳುಗಳನ್ನು ನುಂಗಿತು. ಬಾನಿನಲ್ಲಿ ನಿಂತು ಸೆಣಸಾಡುವ ಮಲಯಾಳ ಭೂತವನ್ನು ಕಂಡು ಶಿವಭೂತವು ಅದರ ಮೇಲೆಗರಿ ಹರಿಣಶಾರ್ದೂಲನ್ಯಾಯದಂತೆ ಕೊಂದು ಬಿಸಾಡಿತು. ಹಿರಿಯ ಪ್ರಚಂಡಿ ಭೂತವು ಗರ್ವದಿಂದಿದ್ದ ಶಕ್ತಿ ಭೂಪಾಲನ ಕೈಹಿಡಿದು ಕೊಲ್ಲದೇ ಸಿದ್ಧೇಶ್ವರನ ಬಳಿಗೆ ಕರೆತಂದು ಹಸಿದಿರುವೆನು, ಈ ಮಲೆಯಾಳ ರಾಜನ ಪ್ರಾಣವನ್ನು ಆಹಾರವಾಗಿ ಕೊಡಬೇಕೆನ್ನಲು ಆ ಭೂತವನ್ನು ಮನ್ನಿಸಿ ರಾಜನನ್ನು ಬಿಡಿಸಿದನು. ಕೈಬಿಡಲು ಆನೆಯ ಕೈಯ ಕಬ್ಬಿನಂತೆ ಪ್ರಾಣವುಳಿದು ಶಕ್ತಿರಾಜನು ಸಿದ್ಧೇಶ್ವರನ ಪಾದಕ್ಕೆ ನಮಿಸಿ ಕಾಯಬೇಕೆಂದು ಬೇಡಿದನು. ಆಗ ಅವನನ್ನು ಮನ್ನಿಸಲು ರಾಜನು ಈಗ ಕರುಣಿಸಿದಂತೆ ಕೇವಲ ಶಕ್ತಿಮಾರ್ಗವನ್ನು ತಿಳಿದಿರುವ ನನಗೆ ಬೇರೆ ಮಾರ್ಗವನ್ನು ತೋರಿಸಿ ಮುಂದಕ್ಕೆ ದಯಮಾಡಬೇಕೆಂದು ಬೇಡಿಕೊಳ್ಳುವನು. ಆಗ ಆ ರಾಜನಿಗೆ ಭಸ್ಮ ರುದ್ರಾಕ್ಷಿ, ಲಿಂಗಗಳನ್ನು ಧರಿಸಿ ಅದರ ಆಗಮಗಳನ್ನೆಲ್ಲಾ ಸಾಂಗವಾಗಿ ತಿಳಿಸಿ ಆಶೀರ್ವದಿಸಿ ಸಿದ್ಧೇಶ್ವರನು ಸ್ತ್ರೀ ರಾಜ್ಯಕ್ಕೆ ತೆರಳಿದನು.

ಮಲಯಾಳ ಭೂತವನ್ನು ನಿಗ್ರಹಿಸಿದ ಸಿದ್ಧಲಿಂಗೇಶ್ವರನು ಸರ್ವ ಸಂಪನ್ನರೊಡಗೂಡಿ ಹೆಣ್ಣರಸಿಯ ರಾಜ್ಯಕ್ಕೆ ಬಂದನು. ಆ ಹೆಣ್ಣು ಕುಲದ ರಾಜ್ಯವು ಕಟ್ಟಾಣಿಯ ಚಿನ್ನದಂತೆ, ಸದ್ಗುಣ ರನ್ನದಂತೆ, ಕಳಂಕ ಸೇರದ ಚಂದ್ರಬಿಂಬದಂತೆ, ಹುಳಿಗೂಡದ ಅಮೃತಭೋಜನದಂತೆ, ಮಂದಗಮನೆ ಯರಿಂದ ಮನ್ಮಥ ನಿವಾಸವಾಗಿತ್ತು. ಅಲ್ಲಿ ತ್ರೈಲೋಕದ ಚಾತುರ್ಯ, ಇಳಿಯವಶ್ಯಗಳು ತುಂಬಿದ್ದವು. ಅರಸು, ಪ್ರಧಾನಿ, ನಿಯೋಗಿ, ರಾಯಭಾರಿ, ಸೇನಾಪತಿ, ಕರಣಿಕ, ಪಾರುಪತ್ತೇದಾರ ಚರರೆಲ್ಲರೂ ಕೂಡ ಹೆಂಗಸರೇ ಆಗಿದ್ದರು.

ಅಲ್ಲಿ ಗಂಡಸರ ಜನನವೇ ಇಲ್ಲ. ಆರತಿ ಕರ್ಪೂರವು ಅಗ್ನಿಯನ್ನು ಜಿರೆ ದಂತೆ ಪರದೇಶದಿಂದ ಅಲ್ಲಿಗೆ ಹೋದ ವಿಟರು, ಮರಳಿ ತಮ್ಮ ದೇಶಕ್ಕೆ ಬರದಿ ರುವರು. ಅಲ್ಲಿ ನಾನಾ ಚದುರಿನ ಕುರುಳ ಹೆರಳಿನ ನಾಯಕಿಯರೂ, ಮಂದರವಾದ ನಗುಮುಖದ ಸುಂದರಿಯರೂ, ಬಗೆಗಣ್, ಬೊಗಸೆಗಣ್, ಸೊಗಸುಗಣ್ಣಿನ ಬಾಲೆಯರೂ, ಸುಲಿಪಲ್-ಬಿಳಿಪಲ್ಗಳ ಸುಂದರಿಯರೂ, ಹೊಂಬಣ್ಣ-ಕೆಂಬಣ್ಣದ ಕೋಮಲೆಯರೂ, ಕೆಂದುಟಿ-ಚಿಂದುಟಿಯ ಜವ್ವ ನೆಯರೂ, ಮುಸಿಬಾಯ್ ಶಶಿಬಾಯ್‌ಗಳ ಮುಗ್ಧೆಯರೂ, ತಂಪಿಂಪು ಸೊಂಪುನುತಿಯಂ ತರುಣಿಯರೂ, ಸಿಂಗನುಡು ಉಂಗುರ ಶೃಂಗಾರ ನಡು ವಿನ ಮಂಗಳಾಂಗಿಯರೂ, ಅಂಚೆನಬೆಯ ಕೊಂಚೆನಡೆಯ ಭೂಜಾಲೆಯರು, ಪದ್ಮಿನಿ, ಚಿತ್ತಿನಿ, ಹಸ್ತಿನಿ, ಶಂಕಿನಿಯರೂ ತುಂಬಿರುವರು. ಮುಂಗಾರ ಮೇಘಕ್ಕೆ ಆಶಿಸುವ ಚಾತಕ ಪಕ್ಷಿಗಳಂತೆ ವಿಟರ ಬರವನ್ನೇ ನಿರೀಕ್ಷಿಸುತ್ತಿರುವ ಹೆಣ್ಣರಸಿಯ ದೇಶಕ್ಕೆ ಸಿದ್ಧೇಶ್ವರನು ಕಾಲಿಟ್ಟನು.

ಬೇಕಾದಷ್ಟು ಜನರು ನಮ್ಮ ದೇಶಕ್ಕೆ ಇಳಿದರು, ಇನ್ನು ನಮ್ಮ ಬರವು ಹಿಂಗಿತೆಂದು ಚಂದ್ರಮುಖಿಯರು ಸಂತೋಷಗೊಂಡು ಶೃಂಗಾರವಾದರು. ವಿಷಯಾಚಲವಜ್ರರಾದ ಸಿದ್ಧಲಿಂಗನ ಭಕ್ತರೆಲ್ಲರೂ ಅತಿಜಿತೇಂದ್ರಿಯರಾದ್ದ ರಿಂದ ಸಸಿ-ಗಿಡವನಗಳನ್ನಾಶ್ರಯಿಸಿದ್ದರಲ್ಲದೇ ಊರಿನ ಕಡೆ ಸುಳಿಯಲಿಲ್ಲ. ಅತ್ತಲವರು ಪರದೇಶದವರು ಆಗ ಬರುವರು, ಈಗ ಬರುವರು ಎಂದು ಕಾದು ಕಾದು ಕಾತುರಗೊಂಡರು. ಗರುಡನ ಗುಂಪು ಗೂಬೆಗಳೆಡೆಗೆ ಹೋಗುವುದೇ?

ಕಂಠೀರವನು ಗ್ರಾಮಸಿಂಹಗಳೊಡನೆ ಬೆರೆಯುವುದೇ ? ವಿರಕ್ತನು ಹೆಂಗಸರನ್ನು ವರಿಸುವನೇ ? ದಾರಿ ಕಾದು ಕಾದು ಹೆಂಗಸರು ದಣಿದರು. ಬಿಸಿಲು ಕುದುರೆಯನ್ನು ಕಂಡು ನೀರೆಂದು ಬಯಸಲು ಬಾಯಾರಿಕೆ ಹಿಂಗುವುದೇ ? ಅಬಲೆಯರು ವೈರಾಗಿಗಳ ವಾಸನೆಯನ್ನು ಬಯಸಿದರೆ ಮನೋವೃತ ಸಫಲವಾಗುವುದೆ ? ಆದರೂ ತಮ್ಮರಸಿಯು ಸಹಿತ ವಿರಹ ಸಾಗರದಲ್ಲಿ ಈಜುತ್ತಾ ತೇಲುತ್ತಾ ದಡ ಕಾಣದೇ ಪುರುಷವಶ್ಯಗಳಾಗಬೇಕೆಂದು ಶಕ್ತಿಯನ್ನು ಪೂಜಿಸಿದರು. ಪೂಜೆವಡೆದ ಆ ಶಕ್ತಿಗಳು ಬಂದು ಶರಣರ ಗೋಜಿಗೆ ಬರಲು ಭಯಪಟ್ಟು ಹಿಂದಿರುಗಿ ರಾಜೀವಲೋಚನೆಯರನ್ನೇ ಸೇರಿ ಕಾಡಹತ್ತಿದವು.

ಎಸೆಯಲು ಬಾರದ ಕವಣೆಯು ಸುತ್ತಿ ನೆತ್ತಿಯನ್ನೊಡೆದಂತೆ, ಸುಖವಾಗಿದ್ದ ಆಸನದಲ್ಲಿ ಮೊಳೆಯನ್ನು ನೆಟ್ಟಂತೆ, ಶಕ್ತಿಯನ್ನು ನಂಬಿ ಅತಿ ರೋಗ ಹತ್ತಿ ಆ ಹೆಣ್ಣಡೆಯು ಕಂಗೆಟ್ಟಿತು. ನಾಯ ಬಾಲವನ್ನು ಹಿಡಿದು ಹೊಳೆಯನ್ನು ಈಜ ಹೋದರೆ ಕೊನೆಗಾಣಬಹುದೇ ? ಜ್ಞಾನಮಾರ್ಗವನ್ನು ಬಿಟ್ಟು ವಿಷಯವನ್ನು ಹಿಡಿದರೆ ಗಮ್ಯಸ್ವಭಾವವು ಸಿಗುವುದೇ ? ಪ್ರಣವ ಮೂರ್ತಿಯನ್ನು ಬಿಟ್ಟು ಪೀಡೆ ದೈವವನ್ನು ನಂಬಲು ಮನೋರಥ ಫಲಿಸುವುದೇ ? ಎತ್ತಬಾರದ ಕಲ್ಲು-ನುಂಗಬಾರದ ತುತ್ತ ಎತ್ತಬಹುದೋ ? ನುಂಗಬಹುದೋ ? ಮದನವೈರಿಯ ಭಕ್ತರ ಮೇಲೆ ಕೋಪವು ಮತ್ತಗಮನೆಯರಿಗೆ ನ್ಯಾಯವೇ ? ಜ್ವರ ತಲೆನೋವುಗಳಿಂದ ಮೈಮೇಲೆಚ್ಚರತಪ್ಪಿ, ಮರಿ ಶ್ವಾನಗಳಂತೆ ಕೂಗುತ್ತ, ನೆಲ ಹಿಡಿದು, ಹುಚ್ಚು ಹತ್ತಿ ಆ ಹೆಂಗಸರೆಲ್ಲರೂ ಮಹಾ ರೋಗಕ್ಕೆ ತುತ್ತಾದರು. ಮತ್ತೆ ಮತ್ತೆ ಹತ್ತಿ ಒಲುಮೆಗೈಯಲು ಬಲು ವಿರುದ್ಧಗಳಾಗಿ ಆ ಭಾಮಿನಿಯರಿಗೆಲ್ಲಾ ಕಾಮಜ್ವರವು ಹೋಗಿ ಪೀಡೆ ಜ್ವರಕ್ಕೆ ತಿರುಗಿತು. ಮತ್ತು ಕವಿದು ಅಜ್ಞಾನವು ಮರುಕಳಿಸಿ ಕಳವಳ ಹೆಚ್ಚಾಗಿ ಸುತ್ತುಕೊಂಡು ಬಿದ್ದರು.

ಅಷ್ಟರಲ್ಲಿ ಹೆಣ್ಣರಸಿಗೆ ಜ್ಞಾನೋದಯವಾಯಿತು. ರೋಗ ಲಕ್ಷಣವನ್ನು ಕೃತ್ರಿಮವೆಂದರಿತಳು. ಲೋಕದೊಡೆಯನು ನಮ್ಮನ್ನು ಪಾಲಿಸಬೇಕೆಂದು ಬಂದರೆ ಆತನನ್ನು ಭಕ್ತಿಯಿಂದ ಕಾಣದೆ ಸ್ತ್ರೀ ಸಹಜವಾದ ಕೊಂಕು ಬುದ್ಧಿಯಿಂದ ಕಾಮನದೃಷ್ಟಿಯಿಂದ ನೋಡಿದೆವು. ಜನ್ಮದಲ್ಲಿ ಸ್ತ್ರೀ ಜನ್ಮವೇ

ಬಲು ಪಾಪದ ಜನ್ಮ. ಇದರಲ್ಲಿ ಹುರುಳಿಲ್ಲ. ಮನ್ಮಥಾರಿಯನ್ನು ಮೊರೆ ಹೋಗುವುದೇ ಸರಿಯೆಂದೆಣಿಸಿ ಫಾಲಾಕ್ಷ, ಕಾಳೀವರ, ಅರ್ಧನಾರೀಶ್ವರ, ಕಾಲಹರಾ-ಕಾಮಹರಾ ಪಾಲಿಸು ಎಂದು ಧ್ಯಾನಿಸಿದಳು. ಸಿದ್ಧೇಶ್ವರನು ಭಕ್ತಪರನಾದುದರಿಂದ ಸಂತುಷ್ಟನಾದನು. ಶಿವ ಕೃಪೆಯಿಂದ ರೋಗವು ಪರಿಹಾರವಾಯಿತು. ಆಗ ತಾನೊಬ್ಬಳೇ ಹೋಗಿ ಸಿದ್ಧಲಿಂಗೇಶ್ವರನಿಗೆರಗಿದಳು. ಆತ್ಮದಯಾಪರನಾದ ಸಿದ್ಧೇಶ್ವರನು ಅವಳನ್ನೆತ್ತಿ ಭಸಿತವನ್ನಿಟ್ಟು ಹರಸಲು, ಕಪಟವಳಿದು ದೇವ ಪ್ರೀತಿಯಿಂದ ನಮ್ಮ ದೇಶಕ್ಕೆ ಚಿತ್ತೈಸಿದಿರಿ, ಒಮ್ಮೆ ನಮ್ಮ ಪುರದಲ್ಲಿ, ಚಿತ್ತೈಸಿ ಮುಂದೆ ನಿಮ್ಮ ಮನಸ್ಸು ಬಂದಂತೆ ಮಾಡಬಹುದು, ತಪ್ಪದೇ ದಯಮಾಡಿಸಿ ಎಂದಳು. ಆ ಹೆಣ್ಣರಸಿಯ ಬಿನ್ನಹವನ್ನು ಕೈಗೊಂಡು ಅಯ್ಯಗಳನ್ನು ಕೂಡಿ ಒಡನೆಯೇ ಸಿದ್ಧೇಶ್ವರನು ಕನ್ನೆಯರ ನಗರಿಗೆ ಭುಗಲು ಭೋರೆನ್ನುವ ವಾದ್ಯಗಳೊಡನೆ ಬಂದನು.

ಸೂರ್ಯನನ್ನು ಕಂಡ ಅಂಧಕಾರದಂತೆ, ಸಿಂಹವನ್ನು ಕಂಡ ಗಜದಂತೆ ಕಾರಣಪುರುಷಸಿದ್ಧರು ಬರಲು ಸ್ತ್ರೀಯರ ಘೋರ ರೋಗವು ಬಿಟ್ಟು ಹೋಯಿತು. ಆಗ ಹೆಣ್ಣರಸಿಗೆ ಸಿದ್ಧಲಿಂಗನು ಶಿವಪೂಜಾ ವಿಧಿಯನ್ನು, ವಿಭೂತಿ ರುದ್ರಾಕ್ಷಿಗಳ ಧಾರಣಾಕ್ರಮವನ್ನು, ಮಂತ್ರ ರಹಸ್ಯವನ್ನೂ ತಿಳಿಸಿ ಶರಣಗಣದೊಡನೆ ಹೊರಟನು. ಕೊಡಗ, ಕೊಂಕಣ, ಮಲೆಯಾಳ, ಸುಬ್ರಹ್ಮಣ್ಯ ಮುಂತಾದ ಪ್ರಸಿದ್ಧ ಪುಣ್ಯ ಕ್ಷೇತ್ರಗಳನ್ನು ನೋಡುತ್ತಾ ಬರುತ್ತಿರಲು ಮಳೆಗಾಲವು ಬಂದಿತು.

ಮಾರುತನೆಂಬ ಮಾವಟಿಗನು ನೀರತೇರಿನ ಆನೆಯನ್ನೈಹಾಳಿ ಮಾಡುತ್ತಿರಲು ಆ ಆನೆಯು ಭೋರ್ಗುಟ್ಟುತ್ತಾ ಸೊಂಡಿಲಿನಿಂದ ನೀರನ್ನೆರಚುವಂತೆ ಮಳೆಯು ಮೋಡವೆರಸಿ ಕಾಣಿಸಿತು. ಆಕಾಶದಲ್ಲಿ ಮೇಘವೆಂಬ ಪರ್ವತವು ಆಡುತ್ತಿರಲು, ಇಂದ್ರನು ಮೆಚ್ಚಿ ಬಲು ಮುತ್ತುಗಳ ಓಕುಳಿ ಹೊಯ್ದಂತೆ ಆಲಿಕಲ್ಲುಗಳು ಮಳೆಯಲ್ಲಿ ಸುರಿದುವು. ಆ ಮಳೆಗಾಲದಲ್ಲಿ ಕೆರೆ ಕುಂಟೆಗಳು ತುಂಬಿ ಕೋಡಿವರಿದು ತೊರೆವರಿದು ಭರತ ಜೆಂಚೆಗಳೆಲ್ಲಾ ಪೂರ್ಣವಾಗಿ ಭೂಮಿಯು ತಂಪಾಯಿತು.

ಪರಶುರಾಮ ಕ್ಷೇತ್ರದಲ್ಲಿ ಮಳೆಗಾಲವು ಬರಲು ನರರೆಲ್ಲಾ ಛತ್ರೇಶರಾಗಿರಲು, ಸಿದ್ಧಲಿಂಗೇಶ್ವರರು ಅಯ್ಯಗಳೊಡನೆ ಆ ಸೀಮೆಗೆ ಬಂದರು. ಕ್ಷೇತ್ರಗಳನ್ನು ಸಂಚರಿಸುತ್ತಾ ಬರುತ್ತಿರಲು ಒಂದು ಘನಾರಣ್ಯವು ಸಿಕ್ಕಿತು. ದುಷ್ಟ ಖಗ ಮೃಗಗಳಿರುವ ಆ ಅಡವಿಗೆ ಸಿದ್ಧನು ಬರುವಷ್ಟರಲ್ಲಿ ದಿನ ಮಣಿಯು ಅವನ ಮಹಿಮೆಗಳನ್ನೆಣಿಸುತ್ತಾ ಅಸ್ತಾಚಲಕ್ಕೆ ನಡೆದನು. ಆ ಕಾಡಿನಲ್ಲಿ ಇರುಳನೆಂಬವನು ಸುತ್ತೈದು ಗಾವುದದಲ್ಲಿ ಪ್ರಜೆಗಳನ್ನು ಅಡಗಿಸಿ ಸುಲಿದು ತಿನ್ನುತ್ತಾ ಕಳ್ಳಬೇಡರೊಡನೆ ವಾಸಿಸುತ್ತಿದ್ದನು. ಕತ್ತಲಲ್ಲಿ ಜಂಗಮರೊಡನೆ ಬರುತ್ತಿರುವ ಸಿದ್ಧೇಶನನ್ನು ಆ ಕಳ್ಳರ ಗುಂಪು ಬಿಲ್ಲು–ಬಾಣ–ತೊಡಗತ್ತಿ–ಚಕ್ರ–ಚೂರಿ–ಭಲ್ಯ ಮುಂತಾದ ಆಯುಧಗಳನ್ನು ಹಿಡಿದು ಬಳಸಿ ಬಂದು ಅವರನ್ನು ಅಡ್ಡಗಟ್ಟಿತು. ಆನೆಯದಂತದ ಮುತ್ತು ಗುಲಗಂಜಿ ಮಣಿಯ ಸರಗಳನ್ನು ಹಾಕಿಕೊಂಡಿರುವ ಬೇಡರು ಶಿವಭಕ್ತರನ್ನು ಸುಲಿಗೆ ಕೊಟ್ಟು ಹೋಗಿ ಇಲ್ಲದಿದ್ದರೆ ಕಾದಬನ್ನಿರೆಂದರು. ಆ ಕಳ್ಳರ ಮಾತು ಕೇಳಿ ಸಿದ್ಧೇಶ್ವರನು ಚರತಿಂಥಿಣಿಯ ಸಹಿತ ತನ್ನ ಶೃಂಗಾರಾಭರಣಗಳನ್ನು ಕಳಚಿ ನೆಲದಲ್ಲಿಟ್ಟು ತೆಗೆದುಕೊಳ್ಳಿರೆಂದನು. ಹೊಂಬಣ್ಣದ ಪೀತಾಂಬರದುಡಿಗೆ ರತ್ನದೊಡವೆಗಳ ರಾಶಿ ಬೀಳಲು ಅವನ್ನು ತೆಗೆದುಕೊಳ್ಳಲೆಂದು ಕೈಯಿಕ್ಕಲು ಆ ಕಳ್ಳರ ಕಣ್ಣು ಇಂಗಿ ಹೋದವು. ಸುಳಿಮರಕ್ಕೆ ಬರಸಿಡಿಲೆರಗಿದಂತೆ ಕಣ್ಣುಗಳ ದೃಷ್ಟಿ ಹೋಗಿ ಕಳೆಗುಂದಿ, ಭೂಮ್ಯಾಕಾಶವನ್ನರಿಯದೇ ಚೋರರೆಲ್ಲಾ ದುಃಖಿಸಿದರು. ಅಟ್ಟಿಕೊಂಡು ಹೋಗಿ ಅಡಿಗೆರಗಿದಂತೆ ಕಳವಿಗೆ ಬಂದು ಕಣ್ಗಳು ಹೋಗಲು, ತಪ್ಪು ಮಾಡಿದೆವು, ಸಲಹೆಂದು ಬೇಡಿಕೊಳ್ಳುತ್ತಿರಲು ಮೆರೆಸಿ ಕುಣಿಸುವವರು ಕೈಬಿಡಲು ಮರದ ಬೊಂಬೆಯು ಸುಮ್ಮನಾಗುವಂತೆ ಮೇಲೆ ಬೀಳಲು ಬಂದ ಕಳ್ಳರು ಜೆಪ್ಪಾಗಿ ಮರವಟ್ಟು ನಿಂತರು. ಹಸಿಯ ಸೊಪ್ಪನ್ನುಟ್ಟು ಕೂದಲು ಬಿಚ್ಚಿರುವ ಕಂಪು ನಾತದ ಶರೀರವುಳ್ಳ ಹೆಂಗಸರು ಕಳ್ಳನಾದ ಇರುಳನ ಹೆಂಡತಿಯೊಡನೆ ಶಿವನೇ ತಮ್ಮನ್ನು ಸಲುಹು ಎನ್ನುತ್ತಾ ಬಂದರು. ಸಿದ್ಧೇಶನಿಗೆ ಆನೆಯ ದಂತ ಕಾಡುಹಂದಿಯ ಮುತ್ತುಗಳ ಕಾಣಿಕೆಯಿತ್ತು ಇರುಳನ ಹೆಂಡತಿಯು ನಮಸ್ಕರಿಸಿ ಅಳುತ್ತಾ ಕಳ್ಳಗಂಡನ ಪ್ರಾಣವನ್ನು ಕಾಯಿ ಸ್ವಾಮಿ ಎಂದು ಪಾದಗಳನ್ನು ಕಂಬನಿಯಿಂದ ಅಭಿಷೇಕಿಸಿ

ನಯನಾಂಬುಜಗಳಿಂದ ಪೂಜಿಸಲು ಹಂಬಲಿಕೆಯ ಮಂತ್ರದಿಂದ ಜಪಿಸುತ್ತಿರುವ ರಂಭೆಯರನ್ನು ನೋಡಿ—

ಸಿದ್ಧೇಶ್ವರ— ಮಗಳೇ ಕೇಳು, ನಿನ್ನ ಗಂಡ ಬಲುಕಳ್ಳ, ಲೆಕ್ಕವಿಲ್ಲದಷ್ಟು ಪಾಪ ಮಾಡಿದ್ದರಿಂದ ಕಣ್ಣು ಕುರುಡಾದರೆ ನಮಗೂ ಇದಕ್ಕೂ ಏನು ಸಂಬಂಧ, ನೀನೆ ಹೇಳು ಎಂದನು.

ಇರುಳನ ಹೆಂಡತಿ— ಕೋಟಿ ರುದ್ರರ ಪಡೆದವರಿಗೆ ಅದರೊಳಗೊಬ್ಬ ಪೋಟನಾದರೆ ದಯತಪ್ಪಿ ಕೋಟಲೆಗೊಳಿಸುವುದೇ ? ಸಾವಿರ ತಪ್ಪನ್ನು ಮಾಡಿದರೂ ಅಪರಾಧಿಗಳನ್ನು ಕಾಯುವುದು ಮಹಾತ್ಮರಿಗೆ ಸಹಜವಾದ ಗುಣ, ಆದ್ದರಿಂದ ದಯವಿಟ್ಟು ನನ್ನ ನಲ್ಲನನ್ನು ಕಾಯಬೇಕು.

ಸಿದ್ಧೇಶ್ವರ— ನಿನ್ನ ಗಂಡನಿಗೆ ಶಿವನು ಕಣ್ಣು ಕೊಡುವನು. ಆದರೆ ಮೊದಲಿನಂತೆ ಕಳ್ಳತನ ಮಾಡಿದರೆ ಮುನ್ನಿನಂತೆ ಆಗಿ ಹೋಗುತ್ತದೆ.

ಇರುಳನ ಹೆಂಡತಿ— ಸ್ವಾಮಿ ! ತಾವು ದಯಮಾಡಿದರೆ ಸಾಕು. ಅದರ ಮೇಲೆ ಪೂರ್ವದ ಚೇಷ್ಟೆ ಮಾಡಿದರೆ ಅವನಿಗೆ ದೃಷ್ಟಿ ಹೋಗದೆ ಇನ್ನೇನಿದೆ ? ಎನ್ನಲು, ಸಿದ್ಧೇಶನು ಅವಳ ಮಾತಿಗೆ ಮೆಚ್ಚಿ ಎಲ್ಲರಿಗೂ ಭಸ್ಮಧಾರಣೆ ಮಾಡಿದನು, ಎಲ್ಲರಿಗೂ ದೃಷ್ಟಿ ಬಂದಿತು.

ಇರುಳನು ಸಂತುಷ್ಟನಾಗಿ ಗುರುವೇ ನೀನು ನನ್ನ ಜೀವವನ್ನು ಕಾಯ್ದೆ. ನಾನು ನಿನ್ನ ತರುಳ ಎಂದು ತನ್ನ ಪರಿವಾರದೊಡನೆ ನಮಸ್ಕರಿಸಿದನು. ಆಗ ಅವನಿಗೆ ಜ್ಞಾನದೃಷ್ಟಿಯು ಬಂದು, ಗುರುವೇ ನಿಮ್ಮ ಪಾದಧ್ಯಾನವನ್ನು ಬಿಟ್ಟಿರಲಾರೆ. ನನ್ನನ್ನು ಪವಿತ್ರನನ್ನಾಗಿ ಮಾಡು ಎಂದು ಬೇಡಿಕೊಂಡನು. ಆಗ ಸಿದ್ಧೇಶ್ವರನು ಆ ಇರುಳನಿಗೂ, ಅವನ ಪರಿವಾರಕ್ಕೂ, ಭಸ್ಮ, ರುದ್ರಾಕ್ಷಿ ಧರಿಸಿ, ಲಿಂಗಧಾರಣೆ ಗೈದು, ಅವನಿಗೆ ಬುದ್ಧಿ ಕಲಿಸಿದನು.

ಕತ್ತಲೆಗಳ್ಳರನೋಡಿಸಿ ತಾವರೆ ಮುಖವೆತ್ತುವಂತೆ ಮಾಡಿದನೆಂದು ಈಶ್ವರನಿಗೆ ಬಿನ್ನವಿಸುವವನಂತೆ ಸೂರ್ಯನು ಉದಯಾದ್ರಿಗೆ ಬಂದನು. ತವಸಿರಿಯೊಲಿದರೆ ದಾರಿದ್ರ್ಯವು ಹರಿದುಹೋಗುವಂತೆ ಶಿವನ ದಯವಾದ

ಮೇಲೆ ಭವಿಯ ಮಾಂಸಪಿಂಡವು ಹೋಗಿ ಶಿವಮಂತ್ರಪಿಂಡವಾಗುವುದು ದೊಡ್ಡದಲ್ಲ. ಕಳ್ಳರು ಶಿವಭಕ್ತರಾದರೆಂಬ ಸಮಾಚಾರವು ಜನರ ಕಿವಿಗೆ ಬೀಳಲು ಆ ರಾಜ್ಯದ ಅರಸು, ಪ್ರಜೆಗಳೆಲ್ಲರೂ ಸಿದ್ಧೇಶ್ವರನ ಬಳಿಗೆ ಬಂದು ಕಾಣಿಕೆಗಳನ್ನಿತ್ತು ದರ್ಶನ ಪಡೆದು ನಾನಾ ಕಾಮ್ಯಗಳನ್ನು ಪಡೆದರು. ಹೀಗೆ ನಾಡಿನ ಮಾನವರೆಲ್ಲರೂ ಜ್ಞಾನಿಗಳಾಗಿ ಆನಂದದಿಂದಿದ್ದರು.

ಪರಶುರಾಮ ಕ್ಷೇತ್ರದಲ್ಲಿ ಸಿದ್ಧಲಿಂಗೇಶ್ವರನು ಬಹುಮಹಿಮೆಗಳನ್ನು ಮಾಡುತ್ತಿರಲು ಸರ್ವಜನರೂ ಬಂದು ಸೇವಿಸಿ ಇಷ್ಟಾರ್ಥವನ್ನು ಪಡೆದರು. ಆಗಮ, ಶಾಸ್ತ್ರ, ಪುರಾಣವೇತ್ತರೆಲ್ಲರೂ ಬಂದು ನಮಸ್ಕರಿಸಿ ಶಂಕರಾ, ಪರ ಬ್ರಹ್ಮಯೋಗಿ, ಮಾನಸಹಂಸಾ ಎಂದು ಸ್ತುತಿಸಿದರು. ಅವರಲ್ಲಿ ಪರಬ್ರಹ್ಮಯ್ಯ ನೆಂಬವನು ಆಚಾರನಿಷ್ಠನು. ಅವನು ಪ್ರಣವ ಪಂಚಾಕ್ಷರೀ ಮಂತ್ರವೇ ಪಾಪನವಾದ ಮಂತ್ರ. ಚಿನ್ಮಯ ಪರಶಿವನೇ ದೇವನು ಎಂದು ಆ ದೇಶದಲ್ಲಿ ಬಿರುದನ್ನು ಉಗ್ಗಡಿಸುತ್ತಿರುವನು. ಫಾಲಲೋಚನನೇ ಪರಬ್ರಹ್ಮನೆಂಬ ಅವನ ನುಡಿಯನ್ನು ಕೇಳಿ ನಾಸ್ತಿಕರು ಕೋಪಿಸಿ ಅವನ ಮನೆಗೆ ಬೆಂಕಿ ಇಟ್ಟರು. ಆ ಭಕ್ತನು ಆ ಉರಿಯ ಮಧ್ಯದಲ್ಲಿ ಸಿದ್ಧಲಿಂಗನ ಪಾದಗಳನ್ನು ಭಜಿಸುತ್ತಾ ಕುಳಿತಿದ್ದನು. ಭುಗಿಭುಗಿಲೆನ್ನುವ ದಳ್ಳುರಿಯ ಮಧ್ಯದಲ್ಲಿ ಅಗಣಿತ ಶಿವ ಶಾಸ್ತ್ರ ಗ್ರಂಥಗಳೊಡನೆ ಅಂಜಿಕೆಯಿಲ್ಲದೆ "ಮನಸಿಜ"ನನ್ನು ಸುಟ್ಟು ಭಸ್ಮ ವನ್ನು ಧರಿಸಿದ ತ್ರಿನಯನನಂತೆ ಬೂದಿ ಮುಸುಗಿ ಉಳಿದುಕೊಂಡಿದ್ದನು. ಚಿನ್ನವು ಅಗ್ನಿಯ ಪುಟದಿಂದ ಪುನಃ ಬಣ್ಣವೇರುವಂತೆ ಶಿವಶರಣನು ಪುಸ್ತಕ ಸಹಿತ ಉರಿಯಲ್ಲಿ ತಣ್ಣಗಿದ್ದನು. ಆ ಶೀಲವಂತನ ಸ್ಥಿತಿಯನ್ನು ತಿಳಿದ ಸಿದ್ಧ ಲಿಂಗೇಶ್ವರನು ನಾಸ್ತಿಕರಿಗೆ ಧರ್ಮಬುದ್ಧಿಯನ್ನು ಕಲಿಸಬೇಕೆಂದು ಆ ನಿರಪ ರಾಧಿಯ ಮನೆಗೆ ಬೆಂಕಿ ಇಟ್ಟವರ ಮನೆಗಳಿಗೆ ಬೆಂಕಿ ತಗಲುವಂತೆ ಮಾಡಿ ದನು. ಅವರ ಮನೆಗಳು ಬೆಂದು ಕುಪ್ಪೆಯಾದವು. ಬೆಂಕಿಯು ಏನು ಮಾಡಿದರೂ ಶಾಂತವಾಗಲಿಲ್ಲ. ಆಗಲಾ ಕುಹಕಿಗಳು ಬೆಂಕಿಗಂಜಿ ಓಡಿ ಬಂದು ಸಿದ್ಧಲಿಂಗನ ಪಾದಗಳಿಗೆರಗಿ ನಮ್ಮನ್ನು ಕಾಯಬೇಕೆಂದು ಬೇಡಿ ಕೊಂಡರು. ಸಿದ್ಧಲಿಂಗನು ನಿಮ್ಮ ಕರ್ಮವು ನಿಮ್ಮನ್ನು ಅಗಲಲಾರದೆನ್ನಲು ಆ ನಾಸ್ತಿಕರು ಮಾಯವಾದ ಮಂತ್ರಗಳ ವಿಷ ತಲೆಗೇರಿ ನಾವು ಅನ್ಯಾಯ

ಮಾಡಿದೆವು, ಅದರ ಫಲವಾಗಿ ಈಗ ಇದ್ದ ಮನೆಗಳನ್ನು ಕಳೆದುಕೊಂಡೆವು. ನಮ್ಮನ್ನು ಕಾಯಬೇಕೆಂದರು. ಆಗ ಸಿದ್ಧೇಶನಿಗೆ ಕರುಣೆ ಹುಟ್ಟಿ, ಹರುಷ ದಿಂದ, ಸಮತೆಯಿಂದ, ಶಾಂತಿಯಿಂದ ಬಾಳಿರೆಂದು ಭಸ್ಮವನ್ನು ಮುಂಡೆಯ ಲ್ಲಿಟ್ಟು ಹರಸಿದನು. ಆಗವರೆಲ್ಲರೂ ದೇವ ದೇವ, ಭಸಿತವನ್ನು ಕೊಟ್ಟು ಕಾಪಾಡಿದೆ. ಲಿಂಗಧಾರಣೆ ಮಾಡಿ ಪಾವನರನ್ನಾಗಿ ಮಾಡಬೇಕೆಂದು ಪ್ರಾರ್ಥಿಸಿದರು. ಅದಕ್ಕೆ ಸಿದ್ಧಲಿಂಗನು ಒಂದು ಭಸಿತದುಂಡೆಯನ್ನು ಧರಿಸಿ ಇನ್ನೊಂದು ಉಂಡೆಯನ್ನು ಪೂಜಿಸುತ್ತಿರಿ. ಪೂಜಿಸಿದ ಉಂಡೆಯೇ ಲಿಂಗ ವಾಗುವುದು ಎಂದನು. ಆ ಸಿದ್ಧೇಶನ ನುಡಿಗೇಳಿ ಮನೆಗೆ ಬಂದು ಭಯಭಕ್ತಿ ಯಿಂದ ಒಂದು ಭಸಿತದುಂಡೆಯನ್ನು ಧರಿಸಿ ಇನ್ನೊಂದನ್ನು ಪೂಜಿಸಿದರು. ಅದು ಕೂಡಲೇ ಲಿಂಗವಾಯಿತು. ಈ ಮಹಿಮೆಯನ್ನು ನೋಡಿ ಅವರೆಲ್ಲರೂ ಲಿಂಗಧಾರಿಗಳಾದರು. ಹೀಗೆ ಸಿದ್ಧಲಿಂಗನ ಸ್ಮರಣಮಂತ್ರದಿಂದ ಇಳೆಯ ಮಹಾಪಾತಕವು ಅಳಿದುಹೋಯಿತು. ಪ್ರಣವ ಮಂತ್ರೋಚ್ಚಾರ, ಪರ ಮೇಶ್ವರಾರ್ಚನೆ ಇಳೆಯಲ್ಲಿ ಹೆಚ್ಚಿತು. ಕಲಿಪುರುಷನು ಮನೆದಪ್ಪಿ ನಗ್ಗಿ ಹೋದನು.

ಹೀಗೆ ಸಿದ್ಧಲಿಂಗೇಶ್ವರನು ಪಡುವಣ ದೇಶದಲ್ಲಿ ಅನೇಕ ಚರಿತ್ರೆಗಳನ್ನು ನಡೆಸಿ ಆನಂದದಿಂದ ಕೂಡಿ ಸದ್ಭಕ್ತರ ಬೆರೆದು ಉತ್ತರ ರಾಜ್ಯಕ್ಕೆ ನಡೆದನು. ದಾರಿಯಲ್ಲಿ ಎದುರಾಗಿ ಒಬ್ಬ ಬಂಜೆಯು ಬಂದು ಸಂತಾನವನ್ನು ಕರುಣಿ ಸೆಂದು ನಮಸ್ಕರಿಸಿದಳು. ಹಿಂದಿದ್ದ ಜಂಗಮರು ತಾಯಿ ನೀನಾರು ? ಎಲ್ಲಿಂದ ಬಂದೆ ? ಎನ್ನಲು ಗುರುರಾಯಾ, ನಾನು ಹುಟ್ಟಿದ್ದು ಬಂಗಾಳ ದೇಶ, ಸೇರಿದ್ದು ಗುರ್ಜರ ದೇಶ, ನನ್ನ ಗಂಡನ ಹೆಸರು ವಿಕ್ರಮರಾಯ, ನನ್ನ ತಂದೆ ತಾಯಿಗಳು ಗಂಗಾಯಾತ್ರೆಗೆ ಹೋಗಿ, ಗಂಗೆಯನ್ನು ಮರೆಬಿದ್ದ ಮೇಲೆ ನಾನು ಹುಟ್ಟಿದ್ದರಿಂದ ನನಗೆ ಗಂಗೆ ಎಂದೇ ಹೆಸರಿಟ್ಟರು.

ನನಗೆ ಮಕ್ಕಳಿಲ್ಲದೇ ಭೂಮಿ ಮೇಲಿರುವ ದೇವರಿಗೆಲ್ಲಾ ಕೈಮುಗಿದೆ ಆದರೂ ಯಾರೂ ಕೈಹಿಡಿಯಲಿಲ್ಲ. ನನ್ನ ಪೂರ್ವಜನ್ಮದ ಪಾಪದ ಫಲವೆ ಷ್ಟಿದೆಯೋ ? ನಿಮ್ಮ ವಿಷಯವನ್ನು ಕೇಳಿ ಬಂದಿದ್ದೇನೆ. ಪುತ್ರಫಲವನು ಕೊಟ್ಟು ಕಳುಹಿಸಿಕೊಡಿರೆಂದು ಆ ಹುಟ್ಟು ಬಂಜೆಯು ಬೇಡಿಕೊಂಡಳು.

ಅದನ್ನು ಕೇಳಿದ ಸಿದ್ಧಲಿಂಗೇಶನಿಗೆ ಥಟ್ಟನೆ ದಯವಾಗಿ ಮಗಳೇ ಚಿಂತಿಸಬೇಡ ಶರಣರ ತೀರ್ಥಪ್ರಾಶನವ್ರತವನ್ನಾಚರಿಸಿದರೆ ಶ್ರೀ ಗುರುವು ಕರುಣಿಸಿ ನಿನಗೆ ಸಂತಾನ ಫಲವನ್ನು ಪಾಲಿಸುವನು ಎಂದು ಆಶೀರ್ವದಿಸಿ ಕಳುಹಿಸಿದನು. ಗುರುಸಿದ್ಧನುಪದೇಶ ಪಡೆದ ಗಂಗಮ್ಮನು ತನ್ನ ದೇಶಕ್ಕೆ ಬಂದು ಶಿವಶರಣರ ಪಾದತೀರ್ಥವ್ರತ ಧುರೀಣಳಾದಳು.

ಪತಿಯ ರೇತಸ್ಸು ಕ್ರೀಡಾ ಕಾಲದಲ್ಲಿ ಸ್ತ್ರೀಯ ಗರ್ಭವನ್ನು ಸೇರುವುದು. ಗರ್ಭದಲ್ಲಿ ಹುಳು ಸೇರಿಕೊಂಡಿದ್ದರೆ ಅದನ್ನು ಕುಡಿದುಬಿಡುವುದು. ಆದ್ದರಿಂದ ಗರ್ಭವು ಕಟ್ಟುವುದಿಲ್ಲ. ಶಿವಶರಣರ ಪಾದತೀರ್ಥವು ಜಠರವನ್ನು ಹೊಕ್ಕು ಅಲ್ಲಿರುವ ಹುಳುಗಳನ್ನೆಲ್ಲಾ ಸಂಹಾರ ಮಾಡುವುದು. ಆಗ ಅವಳಿಗೆ ಗರ್ಭ ನಿಲ್ಲುವುದು. ಅದೇ ಪ್ರಕಾರ ಆ ವ್ರತನಿಷ್ಠಳಾದ ಗಂಗಮ್ಮನಿಗೆ ಕೆಲ ದಿನಗಳ ಮೇಲೆ ಗರ್ಭ ನಿಂತಿತು. ನವಮಾಸ ತುಂಬಿತು. ಹುಟ್ಟು ಬಂಜೆಯೆನಿಸಿದ್ದ ಗಂಗಮ್ಮನು ಆನಂದದಿಂದ ಗಂಡು ಮಗುವನ್ನು ಹೆತ್ತಳು. ಕಲಿಯುಗದ ಶಿವನಾದ ಸಿದ್ಧಲಿಂಗನ ಮಹಿಮೆಯು ವಿವರಿಸಲು ಅಸಾಧ್ಯವಾಯಿತು.

ಬಂಜೆಗೆ ಮಕ್ಕಳನ್ನು ಕೊಟ್ಟನೆಂಬ ವಾರ್ತೆಯು ಹರಡಲು ಶಾಕ್ತೇಯನೊಬ್ಬನು ನಿಂದೆ ಮಾಡಿ ಹಾಸ್ಯಕಿಟ್ಟುಕೊಂಡನು. ಕಾಲು ತೊಳೆದ ನೀರಿನಿಂದ ಬಂಜೆಗೆ ಮಕ್ಕಳಾಗುವಂತೆ ಜಂಗಮನು ಹೇಳಿದನು, ಇದು ನಿಜವೆ? ಹುಚ್ಚೋ? ಬೆಪ್ಪೋ? ಎಲ್ಲಿಯಾದರೂ ಉಂಟೆ? ಎಂದು ಹಾಸ್ಯ ಮಾಡಿ ನಿಂದಿಸಹತ್ತಿದನು. ಯಾರೂ ಸಡ್ಡೆಗೊಳ್ಳದಿರಲು ಗಟ್ಟಿಯಾಗಿ ಕೂಗಿ "ಹುಚ್ಚ ಯೋಗಿ ಕಾಲು ತೊಳೆದ ನೀರಿನಿಂದ ಮಕ್ಕಳ ಫಲ ಕೊಡುತ್ತಾನಂತೆ" ಎಂದು ಹುಚ್ಚನಂತೆ ಕಿರುಚುತ್ತಾ ತಿರುಗಹತ್ತಿದನು. ಕೂಗಿದ ಗಂಟಲು ಕಿತ್ತು, ನಿಂದಿಸುವ ನಾಲಿಗೆ ಒಣಗಿ, ಅಪಹಾಸ್ಯ ಹಾಡಿದ ಬಾಯಲ್ಲಿ ಹುಳುಗಳು ಕಾಣಿಸಿಕೊಂಡವು. ಆ ಗುರುಸಿದ್ಧನಲ್ಲಿ ಸಂಶಯಪಟ್ಟ ನಾಸ್ತಿಕನ ಬಾಯಲ್ಲೆಲ್ಲಾ ರಕ್ತವು ಸುರಿಯುತ್ತಾ ಹುಳುಗಳು ಗೂಡು ಗೂಡಾಗಿ ಬೀಳುತ್ತಾ ವಾಸನೆ ಹತ್ತಿ ನರಕದ ಗುಣಿಯಂತೆ ಕಾಣಿಸಿದನು.

ಗಂಟಲ ಸೆಲೆ ಬಿಗಿಯುತ್ತಾ ಬಿಕ್ಕು ಹತ್ತಿ ವಾಂತಿಯಾಗಿ ಒಮ್ಮೆಂದೊಮ್ಮೆ ಸುಂಟಗೆಯಿಂದ ಹೊರಟು ಗರ್ವಿಷ್ಠನ ಬಾಯಲ್ಲಿ ರಕ್ತದ ಹುಳುಗಳು ಉದುರಿದವು. ದೇಶದವರೆಲ್ಲಾ ಸಿದ್ಧೇಶನನ್ನು ದೂಷಿಸಿದವನಿಗೆ ತಕ್ಕ ಶಿಕ್ಷೆಯಾಯಿತು ಎಂದುಕೊಳ್ಳುತ್ತಿದ್ದರು. ಆವರೆ ಆ ದೋಷಿಯು ಕಡೆಗೆ ಬಳಲಿ ಅರಿಯದೇ ನಿಂದಿಸಿ ಕೆಟ್ಟೆನೆಂದು ಚಿಂತಿಸಿದನು. ಅನಂತರ ಬಂಜೆಯಾಗಿದ್ದ ತಾಯಿಯ ಬಳಿಗೆ ಹೋಗಿ ಅಮ್ಮಾ ಪುತ್ರವತಿ, ತಾಯಿ ಗುರುಪುತ್ರಳೇ, ನೀನು ನನ್ನನ್ನು ಕಾಪಾಡು. ನಿನ್ನ ಗುರುವಿನ ತೆರವನ್ನರಿಯದೇ ಗರ್ವದಿಂದ ಮೆರೆದ ನನಗೆ ಸರಿ ಶಿಕ್ಷೆ ಮಾಡಿದೆ. ಈ ದುರಿತವನ್ನು ಪರಿಹರಿಸಲು ನೀನಲ್ಲದೆ ಬೇರಾರಿಂದಲೂ ಸಾಧ್ಯವಿಲ್ಲ. ನನ್ನ ಗುರುವನ್ನು ನಿಂದಿಸಿದ ಕರ್ಮಿಯೆಂದು ಮುಖದಿರುವದೇ ಪುತ್ರವತಿಯಾದ ನೀನು ಮಗನೆಂದು ನನ್ನ ಕಷ್ಟವನ್ನು ನೋಡು ತಾಯಿ, ತಾಯಿ ! ಕೈಯಿಡಿದು ತಾಯಿ ಎಂದು ಬೇಡಿಕೊಂಡನು. ಆಗಲವಳು ಕನಿಕರಗೊಂಡು ಆ ನಿಂದಕನ ಮುಖಕ್ಕೆ ಭಸಿತವಿಟ್ಟು ಶಿವಶರಣರ ಪಾದ ತೀರ್ಥದಲ್ಲಿ ಸ್ನಾನ ಮಾಡಿಸಿ ಆ ತೀರ್ಥವನ್ನೇ ಪಾನಮಾಡಿಸುತ್ತಾ ಬಂದಳು. ಕ್ರಮೇಣ ಅವನಿಗೆ ಆರೋಗ್ಯವು ಬಂದು ಮೊದಲಿನಂತಾದನು. ಹರನಿಂದೆಯಿಂದ ಬಹುಪಾಪ ಬರುವುದು. ಶಂಕರ ನಾಮಸ್ಮರಣೆ ಮಾತ್ರದಿಂದ ದುಷ್ಕರ್ಮ ಹರಿಯುವುದೇ ಅಲ್ಲದೇ ಇಹಪರ ಸಾಧನೆಯಾಗುವುದು.

ಸಿದ್ಧೇಶ್ವರನ ಸಿದ್ಧಿಯು ಸನ್ಮಾರ್ಗದಲ್ಲಿ ಯುಕ್ತಾಯುಕ್ತ ವಿಚಾರದೊಡನೆ ಹದ್ದುಮೀರದೆ ನಡೆದುದರಿಂದ ದಿನೇ ದಿನೇ ವೃದ್ಧಿಯಾಗುತ್ತಾ ಬಂದಿತು. ಈಗ ಆತನು ಒಂದು ಸ್ಥಳದಲ್ಲಿದ್ದುಕೊಂಡು ಮತ್ತೊಂದು ಸ್ಥಳದಲ್ಲಿ ಮಹಿಮೆಗಳನ್ನು ತೋರಿಸಲು ಪ್ರಾರಂಭಿಸಿದನು. ಅವನ ಮನೋಶಕ್ತಿಯು ಹೆಚ್ಚು ಹೆಚ್ಚು ವ್ಯಾಪಕವಾಗಲಾರಂಭಿಸಿತು. ಅವರು ದಾರಿಯಲ್ಲಿ ಬಂದು ಮ್ಲೇಂಛ ರಾಜ್ಯವನ್ನು ಮುಟ್ಟಿದರು. ಅಲ್ಲಿ ಮ್ಲೇಂಛರು ಗೋವಿನ ತಲೆಯೊಡೆದು ಮೂಳೆಯನ್ನು ವಿಂಗಡಿಸಿ ಹಸಿಯ ಮಾಂಸವನ್ನು ಸುರೆಯೊಡನೆ ತಿನ್ನುವರು. ಅಲ್ಲೊಂದು ಕಡೆ ಒಬ್ಬ ಮ್ಲೇಂಛನನ್ನು ಹಿಡಿದು ತಂದು ಕಳ್ಳತನವನ್ನು ಮಾಡಿದನೆಂದು ಒಣ ಮರವನ್ನು ಕೆತ್ತಿ ಆ ಶೂಲಕ್ಕೆ ಅವನನ್ನೇರಿಸಬೇಕೆಂದಿದ್ದರು. ಸಿದ್ಧಲಿಂಗೇಶ್ವರನು ಅದನ್ನು ನೋಡಿದ

ಕೂಡಲೇ ಆ ಒಣ ಮರವು ಚಿಗುರಿ ಹೂ ಕಾಯಿ ಬಿಟ್ಟಿತು. ಇದೇನೆಂದು ಆಶ್ಚರ್ಯಪಟ್ಟು ಇನ್ನೊಂದು ಶೂಲ ಕೆತ್ತಿದರು. ಅದೂ ಚಿಗುರಿತು. ಆಗ ಆ ನೌಕರರು ರಾಜನಿಗೆ ದೂರು ಹೇಳಿದರು. ರಾಜನು ಒಣಗಿದ ಮರವು ಚಿಗುರಿದುದು ಆಶ್ಚರ್ಯವೇ ಸರಿ. ಆದರೂ ಇದು ಜಂಗಮನ ಮಾಯೆಯು. ಭಂಡಾರವನ್ನು ಕದ್ದ ಕಳ್ಳನನ್ನು ಶೂಲಕ್ಕೆ ಹಾಕಲು ಅಡ್ಡಬಂದ ತುಂಟರನ್ನು ಹಿಡಿದು ತನ್ನಿರೆಂದು ಕಾವಲಿನ ರಾವುತರ ದಂಡನ್ನು ಕಳಿಸಿದನು. ಆ ರಾಜನ ಮಾತನ್ನು ಕೇಳಿ ರಾಕ್ಷಸರ ತಂಡದಂತೆ ಸೈನ್ಯವು ಸಿದ್ಧಲಿಂಗನ ಕಡೆಗೆ ಬಂದಿತು. ಅದನ್ನು ಕಂಡ ಸಿದ್ಧಲಿಂಗೇಶ್ವರನು ತನ್ನ ಕರದಲ್ಲಿರುವ ಜೋಳಿ ಪ್ರಚಂಡ ಭೂತಗಳನ್ನು ಕರೆದು ಬಲವನ್ನು ನೋಡಿಕೊಳ್ಳಿರೆಂದನು. ಆ ಭೂತಗಳು ಮರಮರಗಳನ್ನೇ ಮುರಿದುಕೊಂಡು ಕರಿ, ಪದಾತಿ ರಾವುತರನ್ನೆಲ್ಲಾ ಕ್ಷಣಾರ್ಧದಲ್ಲಿ ಸವರಿ ಮುಗಿಸಿ ಬಿಟ್ಟವು. ಅನಂತರ ಪಟ್ಟಣವನ್ನು ಹೊಕ್ಕು ಆನೆ, ಕುದುರೆಗಳನ್ನು, ಮ್ಲೇಂಛ ರಾಜನ ಗಡ್ಡ ಮಂಡೆಯನ್ನು ಹಿಡಿದು ಗಲ್ಲವನ್ನು ಕುಟ್ಟಿ ಬೆನ್ನು ತುಳಿದು ಗಾಸಿಪಡಿಸಿದವು. ಅವುಗಳ ಹಿಂಸೆಯನ್ನು ತಾಳಲಾರದೆ ರಾಜನು ಅಲ್ಲಾನನ್ನು ನೆನೆಯುತ್ತ, ಇಳೆಯ ಪಾಲಿಸುವನಲ್ಲಾ ಸ್ವಭಕ್ತರನ್ನಾಳುವನಲ್ಲಾ. ಖುದಾಯೇ ಮಂಕಾದೆನಲ್ಲಾ, ಅಲ್ಲಾ ಎಂದು ಸಿದ್ಧಲಿಂಗೇಶನ ಬಳಿಗೆ ಬಂದು ತಲೆ ಬಗ್ಗಿ ನಮಸ್ಕರಿಸಿ, ಜಿನ್ನಯ್ಯನೇ— ಕಾಪಾಡು ಎಂದು ಸ್ತುತಿಸಿದನು. ಆಗಲವನ ಮುಖವನ್ನೆತ್ತಿ ನೋಡಿ, ರಾಜ ! ನಿನ್ನ ಕಳ್ಳನೆಂಬುವ ಶೂಲವು ಚಿಗುರಿದರೆ ಅದರಲ್ಲಿ ನನ್ನ ತಪ್ಪೇನಿದೆ? ನೀನು ನನ್ನ ಮೇಲೆ ಸೈನ್ಯವನ್ನು ಕಳುಹಿಸಿದ ಕಾರಣವೇನು ? ಎಂದನು. ಆಗಲಾ ನವಾಬನು ನೀನು ಮೂರ್ಖನೆಂದು ತಿಳಿದು. ನಿನ್ನಲ್ಲಿ ಬಹು ಕಪಟವನ್ನು ಮಾಡಿದೆನು. ಪ್ರತ್ಯಕ್ಷ ಕರ್ತಾರನೇ ನೀನಾಗಿರುವುದರಿಂದ ನನ್ನ ಮೃತ್ಯುವನ್ನು ಪರಿಹರಿಸು ಎಂದನು. ಆಗ ಸಿದ್ಧೇಶ್ವರನು ಆ ರಾಜನನ್ನು ಸತ್ತ ಕುದುರೆ ಆನೆ ಪರಿವಾರದವರನ್ನು ಕೃಪಾದೃಷ್ಟಿಯಿಂದ ಬದುಕಿಸಿ ಆಶೀರ್ವದಿಸಿ ಆ ನವಾಬ ಕಳ್ಳರಿಬ್ಬರನ್ನು ಕ್ಷಮಿಸಿ ಕಳುಹಿಸಿದನು. ಈ ಸುದ್ದಿಯು ಸುತ್ತಮುತ್ತಲೂ ಪಸರಿಸುತ್ತಿರಲು ಜಂಗಮ ಜಾಲದೊಡನೆ ಸಿದ್ಧಲಿಂಗನು ಕಾಶಿಯ ಪಟ್ಟಣಕ್ಕೆ ಬಂದನು.

ಸಗರ ವಂಶದಲ್ಲಿ ಹುಟ್ಟಿದ ರಾಯರಿಗೆ ಮುಕ್ತಿಯನ್ನಿತ್ತ ಜಾಹ್ನವಿಯ ಕಡೆಗೆ ಜಗದೊಡೆಯನು ಬಂದು "ಭಿಕ್ಷಾ" ಎನ್ನಲು ಆ ಗಂಗೆಯು ನಿಜರೂಪ ವನ್ನು ಧರಿಸಿ ಬಂದು ಹೊಳೆಯುವ ಬಳೆಗಳನ್ನು ಧರಿಸಿರುವ ಕರಾಂಜಲಿ ಯಿಂದ ಸಿದ್ಧಲಿಂಗನಿಗೆ ಭಿಕ್ಷವನ್ನು ನೀಡಿದಳು ಈ ಸುದ್ದಿಯು ಹರಡುತ್ತಿ ರಲು ಭಗೀರಥನ ತಪಸ್ಸಿನಿಂದ ದೇವಲೋಕದ ಗಂಗೆಯು ಭೂಮಿಗಿಳಿದು ಬಂದದ್ದರಿಂದ ಭಾಗೀರಥಿಯೆಂದು ಹೆಸರಾದುದನ್ನು ಜಹ್ನುಋಷಿಯ ಕಿವಿ ಯಿಂದ ಬಂದುದರಿಂದ ಜಾಹ್ನವಿಯೆಂದು ಹೆಸರಾದ ಸಂಗತಿಯನ್ನು ರುದ್ರ ಗಣಗಳಿಗರುಹಿ ಶಿವಭಕ್ತನಾದ ಹರಿಶ್ಚಂದ್ರನು ವಾಸಿಸಿದ ಸ್ಥಳವನ್ನು, ಹರಿ ಶ್ಚಂದ್ರನು ಸ್ನಾನಮಾಡುತ್ತಿದ್ದ ಘಟ್ಟವನ್ನ ತನ್ನ ಜಂಗಮರಿಗೆ ತೋರಿಸಿ ವಿಶ್ವೇಶ್ವರನ ಬಳಿಗೈದು ಅವನೊಡನೆ ತಮ್ಮ ಪ್ರೇಮ ಸಂಭಾಷಣೆಯನ್ನು ನೆರ ವೇರಿಸಿ ಕಾಶಿಯಿಂದ ಕಾಲಜ್ಞಾನಿ ಸಿದ್ಧಲಿಂಗೇಶ್ವರನು ಚರ ಸಮೂಹದೊಡನೆ ಅಲ್ಲಿಂದ ಹಿಮವದ್ಗಿರಿಗೆ ನಡೆದನು.

ಸಿದ್ಧಲಿಂಗೇಶ್ವರನು ಹಿಮಬೆಟ್ಟಕ್ಕೆ ಬಂದು ತಂದೆಯಾದ ದಕ್ಷಬ್ರಹ್ಮನು ಶಿವನ ಮೇಲೆ ದ್ವೇಷ ತಾಳಿ ದೇವತೆಗಳ ಗುಂಪಿನೊಡನೆ ಯಾಗ ಮಾಡುತ್ತಿರು ವದನ್ನು ನೋಡಲು, ಉಮೆಯು ಹರನ ಅಪ್ಪಣೆಯನ್ನು ಮೀರಿ ಪ್ರಮಥ ರೊಡನೆ ಹೋಗಲು ತಿರುಕನ ಹೆಂಡತಿಯು ಬರುವಳೆಂದು ಗರ್ವಿಸಿ ಮಗಳನ್ನು ಮಾತನಾಡಿಸದೆ ಶಿವನನ್ನು ಬೈದನು. ಅದನ್ನು ಕೇಳಿದ ಉಮೆಯು ಕೋಪಿಸಿ ಕಾಳಿಯಾಗಿ ಯಜ್ಞಕುಂಡದಲ್ಲಿ ಧುಮುಕಿಬಿಟ್ಟಳು. ಅದನ್ನು ಕೇಳಿದ ಶಿವನು ಕೋಪಾರೂಢನಾಗಿ ತನ್ನ ಜಡೆಯನ್ನು ಕಿತ್ತೆಸೆಯಲು ಆ ಜಡೆಯಲ್ಲಿ ಪರಾ ಕ್ರಮಶಾಲಿಯಾದ ವೀರಭದ್ರನುದಿಸಿ ದಕ್ಷನ ತಲೆಯನ್ನು ಕಡಿದು ಅಗ್ನಿಗೆ ಎಸೆ ದನು. ಯಾಗದ ಉರಿಯಲ್ಲಿ ಬೇಯುವ ದಕ್ಷನ ತಲೆಯು ತಪ್ಪು ಮಾಡಿ ದೆನು, ಪಾಲಿಸೆಂದು ವೇದ ವಾಕ್ಯಗಳಿಂದ ಸ್ತುತಿಸಿತು. ಅದನ್ನು ಕಂಡ ವೀರಭದ್ರನು ಕುರಿಯ ತಲೆಯನ್ನು ತಂದಿಟ್ಟುಬದುಕಿಸಿ ಕೈಲಾಸಕ್ಕೆ ಹೋದನು.

ಚಿತೆಯಲ್ಲಿ ಬೆಂದ ಉಮೆಯು ಹಿಮವಂತನ ಸತಿಯಾದ ಮೇನಕೆಯಲ್ಲಿ ಜನಿಸಿ ಗಿರಿಜೆಯೆಂಬ ಹೆಸರು ಪಡೆದು ಕೇದಾರೇಶನನ್ನು ಪೂಜಿಸಿದಳು. ದೃಢ ಚಿತ್ತಳಾದ ಗೌರಿಯನ್ನು ನೋಡಿ ಶಿವನು ಕಲ್ಯಾಣವಾಗಿ ಕೈಹಿಡಿದನು ಎಂದು

ದಕ್ಷನ ಕಥೆಯನ್ನೂ, ಪಾರ್ವತಿಯ ಜನನದ ಕಥೆಯನ್ನೂ ಜಂಗಮರಿಗೆ ವಿವರಿಸಿ ಹೇಳಿದನು. ಆಗಲವರೆಲ್ಲರೂ ಸಂತೋಷಗೊಂಡು ಸಿದ್ಧಲಿಂಗನ ಪಾದಗಳಿಗೆರಗಿ, ದೇವಾ ! ನಿನ್ನಿಂದ ಸಕಲ ಕ್ಷೇತ್ರಗಳ ದರ್ಶನವಾಯಿತು. ಅಖಿಲ ಪುಣ್ಯಗಳನ್ನು ಪಡೆದೆವು. ಸುಮನಸರು ಕಾಣದ ಪರಂಜ್ಯೋತಿಯಾದ ನೀನು ಪುಣ್ಯದಿಂದ ನಮಗೆ ಲಭಿಸಿದೆ. ಇನ್ನು ಹಿಂದುರುಗಿ ಹೋಗೋಣವೆಂದು ಬಿನ್ನೈಸಿದರು. ಅಷ್ಟರೊಳಗೆ ಒಂದು ಆರ್ಭಟದ ಧ್ವನಿಯೂ, ಒಬ್ಬ ಮನುಷ್ಯನ ಕೂಗೂ, ಗೋವುಗಳ ಶಬ್ದವೂ ಕೇಳಿಬಂದವು. ಎಲ್ಲರೂ ವಿಸ್ಮಯಗೊಂಡು ಈ ಶಿಖರಾಗ್ರದಲ್ಲಿ ಗೋವುಗಳ ಸಂಚಾರವೆಲ್ಲಿಯದೆಂದು ಯೋಚಿಸುತ್ತಿರಲು ಸಿದ್ಧಲಿಂಗನು ಮಾಯವಾದನು.

ಆ ಗಿರಿಗೆ ಇನ್ನೂರು ಗಾವುದದ ಉತ್ತರ ಭಾಗದಲ್ಲಿ ಒಬ್ಬ ಗೊಲ್ಲನಿರುವನು. ಅವನು ದನದ ಹಿಂಡನ್ನು ಅಡವಿಯಲ್ಲಿ ಮೇಯಿಸಿಕೊಂಡು ದೊಡ್ಡಿಗೆ ಬರುತ್ತಿರಲು ಹೆಬ್ಬುಲಿಯೊಂದು ಬಂದೆರಗಿ ಒಂದು ಗೋವನ್ನು ಹಿಡಿಯಲು "ಶಿವನೇ ಕಾಪಾಡು" ಎಂದು ಗೊಲ್ಲನು ಕೂಗಿದನು. ಆ ಮಾತು ಇನ್ನೂ ಗೊಲ್ಲನ ಬಾಯಲ್ಲಿರುವಾಗಲೇ ಅವನ ಗೃಭಕ್ತಿಗೆ ಮೆಚ್ಚಿ ಹೋಗಿ ಆ ಹುಲಿಯನ್ನು ಕೊಂದು ಗೋವುಗಳನ್ನು ಕಾಪಾಡಿದನು. ಒಂದೇ ಮನಸ್ಸಿನಿಂದ ನಂಬಿದ ಭಕ್ತರಿಗೆ ಒದಗಿದ ಕಷ್ಟಗಳನ್ನು ನಿವಾರಿಸಿ ತಾಯಿಯು ಮಗುವನ್ನು ಆರೈಕೆ ಮಾಡಿ ಕಾಪಾಡುವಂತೆ ಶಿವನು ಕಾಪಾಡುವನು. ಅಷ್ಟು ಮಾತ್ರವಲ್ಲದೆ ಹರನು ತನ್ನನ್ನು ಧ್ಯಾನಿಸುವ ಭಕ್ತರಿಗೆ ಕಿಂಕರನಾಗಿ ಜಗತ್ತನ್ನೇ ಮರೆತು ಅವರ ಜೊತೆಯಲ್ಲಿ ತಿರುಗುವನು. ಅದಕ್ಕೆ ನಿದರ್ಶನವಾಗಿ ಸಿದ್ಧಲಿಂಗೇಶ್ವರನು ವೃದ್ಧನಾದ ಆ ಗೊಲ್ಲನ ಭಕ್ತಿಗೆ ಮೆಚ್ಚಿ ಅವನ ದನಗಳನ್ನು ಕಾಯುತ್ತಾ ಅವನ ದೊಡ್ಡಿಯಲ್ಲಿ ಹನ್ನೆರಡು ವರ್ಷ ವಾಸವಾಗಿದ್ದು ಬಿಟ್ಟನು.

ಆ ಶಿವಭಕ್ತನಾದ ಗೊಲ್ಲನ ದೊಡ್ಡಿಯಲ್ಲಿ ನಡುವೆ ಲಿಂಗದಂತೆ ಒಂದು ಕಂಬಿಯ ಹುಟ್ಟುಕಲ್ಲು ನಿಂತಿರುವುದು. ಗೊಲ್ಲನು ಅದನ್ನೇ ತನ್ನ ಪ್ರಾಣವೆಂದು ನಂಬಿರುವನು. ಗೋವುಗಳ ಗೋಮಯ, ಗೋಮಂತ್ರದಿಂದ ಪಾವನವಾದ ಸ್ಥಳದಲ್ಲಿರುವ ಆ ಕಲ್ಲನ್ನು ಕರುಗಲ್ಲೇಶ್ವರನೆಂದೇ ಕರೆಯುವನು. ಹಸುಗಳು ಕರೆದ ಕ್ಷೀರದಿಂದ ಅಭಿಷೇಕ ಮಾಡುವನು. ಹಸಿಯ ಸೊಪ್ಪುತಂದು ಪೂಜಿ

ಸುವನು. ತಾನು ಊಟಮಾಡುವ ಅನ್ನವನ್ನು ತಂದು ಅವಕ್ಕೆ ನೈವೇದ್ಯ ಮಾಡುವನು. ಬಿಡುವಾದಾಗಲೆಲ್ಲಾ ಅಲ್ಲಿ ಬಂದು ನಿಂತು ಮೈಮರೆತು ನೋಡುತ್ತಿರುವನು. ಅವನನ್ನೇ ಸ್ಮರಿಸಿ ಕುಳಿತುಕೊಳ್ಳುವನು, ಕರುಗಲ್ಲೀಶ್ವರಾ ಎಂದು ಮಲಗುವನು. ಕರುಗಲ್ಲೀಶ್ವರಾ ಎಂದು ನಿದ್ದೆಯಲ್ಲಿ ಕನವರಿಸುವನು. ಉಂಬುವ ಉಡುವ ದ್ರವ್ಯವು ಸಿಕ್ಕಿದಾಗ ತಂದು ಮುಂದಿಟ್ಟು ಪ್ರೀತಿಯಿಂದ ಸಮರ್ಪಿಸಿ ತೆಗೆದುಕೊಳ್ಳುವನು. ನೀರು ಕುಡಿವಾಗಲೂ ಮರೆತವನಲ್ಲ. ಹತ್ತು ಗಾವುದ ದೂರ ಹೋಗಿ ಹಸಿವು ಬಾಯಾರಿಕೆಯಿಂದಿದ್ದರೂ ಬಂದು ಆ ಕರುಗಲ್ಲೀಶ್ವರನನ್ನು ಪೂಜಿಸುವನಲ್ಲದೇ ಆ ಗೊಲ್ಲನು ಉಣ್ಣ; ನೀರು ಕುಡಿಯ.

ಇಂತಹ ದೃಢಭಕ್ತನ ಎಳೆಗಂದಿಯಾದ ಗೋವು ಒಂದು ದಿನ ತಪ್ಪಿಸಿಕೊಂಡಿತು. ಗೊಲ್ಲನು ಅದನ್ನು ಅರಣ್ಯದಲ್ಲಿ ಹುಡುಕುತ್ತಾ ಹೊರಟನು. ಕೂಗುತ್ತಾ ದಾರಿಯಲ್ಲಿರುವಂತೆ ಕಣ್ಣಿಗೆ ಕಾಣಿಸುವುದು. ಅಲ್ಲಿಗೆ ಹೋದರೆ ಮಾಯವಾಗುವುದು, ಪುನಃ ಹುಡುಕುತ್ತಾ ಮುಂದುವರೆಯುವನು. ಈ ರೀತಿ ಹುಡುಕುತ್ತಾ ಆ ಗೊಲ್ಲನು ಕರುವಿನ ಬಾಯಿಗೆ ಎಳೆಗಂದಿ ಗೋವಿನ ಕೆಚ್ಚಲ ಮಲೆಯೂಡಿ ಕಚ್ಚಿಸುವವರೆಗೂ ದೊಡ್ಡಿಗೆ ಹೋಗುವುದಿಲ್ಲವೆಂದು ಹಟ ತೊಟ್ಟನು. ಅನ್ನವನ್ನುಣ್ಣದೆ, ನೀರನ್ನು ಕುಡಿಯದೆ ಗೋವನ್ನು ಹುಡುಕುತ್ತಾ ಎಂಟು ದಿನಗಳು ತಿರುಗಾಡಿ ಕಂಗೆಟ್ಟನು. ತೂಕ ತಪ್ಪಿತು. ಅನ್ನವಿಲ್ಲದೇ ಕಾಲೀಳದಾಯಿತು. ಬವಣೆ ಬಂದು ಬಿದ್ದು ಬಿಟ್ಟನು. ನಾಲಿಗೆ ಯೊಣಗಿ ಮಾತುಡುಗಿತು. ಕಾಲ ತುಂಬಿ ಬಂದವನಂತಿರಲು ಶಿವನು ಮಾಯದ ಬಾಲಕನಾಗಿ ತಲೆಯ ಮೇಲೆ ಬುತ್ತಿ ಹೊತ್ತು ಕೈಯಲ್ಲಿ ನೀರಿನ ಗಿಂಡಿ ಹಿಡಿದು ಬಂದನು. ಎಲೆ ಅಣ್ಣಾ ! ಹಸಿದೆ, ಉಣ್ಣೇಳು ಎಂದು ಕೂಗಿತು ಗೊಲ್ಲನನ್ನೆಬ್ಬಿಸಿದನು. ಆಗಲಾ ಗೊಲ್ಲನು ಕರುಗಲ್ಲೀಶ್ವರನ ಬಳಿಗೆ ಹೋಗಿ ಪೂಜಿಸಿದ ಮೇಲೆ ಊಟಮಾಡುತ್ತೇನೆಂದನು. ಅಲ್ಲಿಗೆ ಮೆಲ್ಲಗೆ ಕರೆದೊಯ್ಯುತ್ತೇನೆ ಬಾರೆಂದನು. ಅದಕ್ಕಾ ಗೊಲ್ಲನು ಕರುವು ಗೋವು ಅಗಲಿರಲು ಅವುಗಳನೊಂದು ಮಾಡದೆ ನಾನಲ್ಲಿಗೆ ಬರುವುದಿಲ್ಲವೆನಲು ಆ ಮಾತಿಗೆ ಶಿವನು ಮೆಚ್ಚಿ ನಿಜರೂಪುದೋರಿ, ಓ ದೃಢಭಕ್ತಾ, ಕೋರಿದ ಇಷ್ಟವನ್ನು ಕೊಡು

ತ್ತೇನೆ ಬೇಡು ಎಂದನು. ಗೊಲ್ಲನು ಶಂಕರನ ಪಾದಗಳಿಗೆರಗಿ ನನ್ನ ಗೋವುಗಳನ್ನು ಪೊಲಬು ತಪ್ಪದಂತೆ ಕಾದಿರು. ಶಿವನು ಒಳ್ಳೆಯದೆಂದು ಮಾಯವಾದನು. ಎದ್ದು ನೋಡಲು ಎದುರಿಗೆ ಕರುಗಲ್ಲೇಶ್ವರನಿರುವನು. ತಾನು ದೊಡ್ಡಿಯಲ್ಲಿ ಮಲಗಿರುವನು. ತಪ್ಪಿ ಹೋಗಿದ್ದ ಹಸುವು ಕರುವನ್ನು ಕುಡಿಸುತ್ತಿರುವುದು, ಇಂತಹ ದೃಢಭಕ್ತನ "ಶಿವನೇ ಕಾಯೊ" ಎಂಬ ನುಡಿಗೇಳಿ ಹುಲಿಯನ್ನು ಕೊಲ್ಲುವ ನೆವದಿಂದ ಅಲ್ಲಿಗೆ ಬಂದು ಸಿದ್ಧಲಿಂಗೇಶ್ವರನು ಶಿವರೂಪ ಧರಿಸಿ ಗೊಲ್ಲನಿಗೆ ಸೇವಕನಾದನು. ತಂದೆ ತಾಯಿಗಳ ಸುಖವನ್ನು ಕಾಣದ ಶಿವನಿಗೆ ಭಕ್ತರೇ ತಂದೆ ತಾಯಿಗಳಲ್ಲವೇ ? ಅವರ ಮಮತೆಗೆ ಶಿವನು ಕರಗಿ ಮೈಮರೆಯುವನಲ್ಲವೇ ?

ಹೊಸದಾಗಿ ಬಂದಿರುವ ಬಾಲಕ ! ನೀನಾರೆಂದು ಕೇಳಿದ ಗೊಲ್ಲನಿಗೆ ಸಿದ್ಧಲಿಂಗನು ಹೇಳಿ ಕೇಳಿ ಹೆತ್ತವರಿಲ್ಲ, ನಾನು ಪರದೇಶಿ, ನನ್ನ ಹೆಸರು ಸಿದ್ಧ ಎಂದನು. ಅದಕ್ಕೆ ಗೊಲ್ಲನು ನಮ್ಮ ಗೋವುಗಳನ್ನು ಕಾಯುತ್ತಾ ನಮ್ಮ ಹುಡುಗರ ಗುಂಪಿನಲ್ಲಿ ಸುಖವಾಗಿರು ಎಂದನು. ಒಳ್ಳೆಯದೆಂದು ಅವನ ದೊಡ್ಡಿಯಲ್ಲಿ ಬಾಲಕ ಸಿದ್ಧನಾಗಿ ನಿಂತನು. ತಲೆಯಲ್ಲಿ ಗುಲಗಂಜಿ ಮಣಿಯ ಸರ, ಬಲಗೈಯಲ್ಲಿ ಕವಣೆ, ಕಂಕುಳಲ್ಲಿ ಕಲ್ಲಿ, ನಡುಕಟ್ಟಿನ ಮುದ್ದು ಗೋಪಾಲಕನಾಗಿ ಸಿದ್ಧನು ಗೋವುಗಳನ್ನು ಕಾಯುವನು. ತರಳರೊಡನೆ ಮರವೇರಿ ಕೋತಿಯಾಟ ಆಡುವನು. ತಂಗೊಳಗಳಲ್ಲಿ ಈಜಾಡುವನು. ಕೊಳಲ ನಾದವನ್ನು ಮಾಡಿ ಗೋವುಗಳನ್ನೂ ಗೋವಿನ ಕರುಗಳನ್ನೂ ಕರೆಯುವನು. ಗೋಪಾಲ ಬಾಲಕರನ್ನು ನೋಡಿ ನಲಿಯುವನು. ಹೀಗೆ ಗೊಲ್ಲನಿಗೊಲಿದು ಸಿದ್ಧೇಶನು ದನ ಕಾಯುತ್ತಿದ್ದನು.

ಗೋವುಗಳೆಲ್ಲವೂ ಸಿದ್ಧನ ಮಾಯಾ ಜಾಲಕ್ಕೊಳಗಾಗಿ ಹಿಂದೆ ಮುಂದೆ ಸುತ್ತಾಡುವವು. ಗೊಲ್ಲ ಬಾಲಕರು ಎಡಬಿಡದೆ ಸಿದ್ಧನನ್ನು ಸುತ್ತವರಿದಿರುವರು. ಗೊಲ್ಲನು ದೊಡ್ಡಿಯಲ್ಲಿರುತ್ತಾ ನಿಂತು ನೋಡಿದರೆ ಸುತ್ತಲೂ ಐದು ಗಾವುದದಲ್ಲಿ ಗೋವಿನ ಹಿಂಡು ಸಂಚರಿಸುವ ವಿಸ್ತಾರವು ಶಿವನ ದಯೆಯಿಂದ ಚೆನ್ನಾಗಿ ಕಾಣಿಸುವುದು. ಹೀಗಿರುವಲ್ಲಿ ಒಂದು ದಿನ ಗೊಲ್ಲನು ಕರುಗಲ್ಲೇಶನನ್ನು ಪೂಜಿಸುತ್ತಿರಲು ಆಕಾಶದಲ್ಲಿ ಗರ್ಜಿಸುತ್ತಾ ಮಾಯದ ಮೋಡವು

ಒಡ್ಡಿತು. ಮಿಂಚು ಮಿರುಗಿತು. ಮಳೆ ಹಸಿಯಿತು. ಭೂಮಿ ಆಕಾಶಗಳನ್ನು ನಡುಗಿಸುತ್ತಾ ಗೊಲ್ಲನ ಎದುರಿಗೆ ಮಹಾಮಿಂಚೊಂದು ಹೊಳೆಯಿತು. ಆಗ ಗೊಲ್ಲನು ಈ ಸಿಡಿಲು ಬೀಳುವುದು ಅದೆಲ್ಲಾದರೂ ಕರುಗಲ್ಲೇಶನಿಗೆ ತಾಕೀತೆಂದು ಲಿಂಗದ ಮೇಲೆ ತನ್ನ ಬೆನ್ನನ್ನು ಸಿಡಿಲಿಗೊಡ್ಡಿದನು. ಸಿದ್ಧೇಶನು ಆ ಶರಣನ ದೃಢಭಕ್ತಿಗೆ ಮೆಚ್ಚಿ ಮೇಲೆ ಬೀಳುವ ಸಿಡಿಲನ್ನು ಹಿಡಿದನು. ದನ ಕಾಯುತ್ತಿದ್ದವನು ಬಂದು ಗೊಲ್ಲನನ್ನು ಕಾಯ್ದುದನ್ನು ದನ ಕಾಯುವ ಹುಡುಗರು ಕಂಡು ಇಲ್ಲಿದ್ದವನು ಕ್ಷಣಮಾತ್ರದಲ್ಲಿ ಅಲ್ಲಿಗೆ ಹೋಗಿ ನಮ್ಮೊಡೆಯನನ್ನು ಕಾಪಾಡಿದ ಇವನು ಸಾಮಾನ್ಯನಲ್ಲ. ಶಿವನೇ ಮಾಯವೇಷ ಧರಿಸಿ ಹೀಗಿದ್ದಾನೆಂದರೆ, ಗೊಲ್ಲನು ಮೂಲೋಕವೊಡೆಯನೇ, ಹರನೇ, ಮಾಯಾಸಿದ್ಧನೇ ಕಪಟವೇಷಿ ಇಂದಿಗೆ ನನ್ನನ್ನು ಕಾಪಾಡಿದೆ ಎಂದು ಕೊಂಡಾಡಿದನು. ಅವನ ಭಕ್ತಿಗೆ ಮೆಚ್ಚಿ ಸಿದ್ಧನು ಬೇಕಾದುದನ್ನು ಕೇಳು ಎನ್ನಲು ಗೊಲ್ಲನು ತನಗೆ ಕಾಲವು ಬಂದಾಗ ಕೈಲಾಸವನ್ನು ಕೊಡು ಎನ್ನಲು ಸಿದ್ಧನು ತಥಾಸ್ತು ಎಂದು ವೈದಡವಿ ಮಾಯವಾಗಿ ಮೇರುವಿಗೆ ಹೋಗಿ ಅಲ್ಲಿ ಬಸವನೊಡನೆ ಮಾತನಾಡಿ ಅಲ್ಲಿಂದ ಹಿಂದಿರುಗಿ ಕೇದಾರಕ್ಕೆ ಬಂದಿಳಿದನು.

ಶರಣರಿರುವ ಹಿಮಬೆಟ್ಟಕ್ಕೆ ಬಂದು ಸೇರಿದನು. ತಮ್ಮನ್ನಗಲಿದ ಸಿದ್ಧಲಿಂಗನನ್ನು ನೆನೆನೆನೆದು ತಾಯಿಯನ್ನಗಲಿದ ಮಕ್ಕಳಂತೆ ಬಾಯಿ ಬಾಯಿ ಬಿಡುತ್ತಾ ಎಲ್ಲರೂ ತಪೋನಿರತರಾಗಿದ್ದರು.

ಆ ಜಂಗಮರ ಹಿತಕ್ಕಾಗಿ ಶಿದ್ಧೇಶ್ವರನು ತನ್ನ ಚಂಡೀಭೂತವನ್ನು ನಿಲ್ಲಿಸಿರಲು ಅವರರಿಯದಂತೆ ಕಾಯ್ದುಕೊಂಡು ಸೇವಿಸುತ್ತಿತ್ತು. ಆ ಶಿವಶರಣರ ಮನಸ್ಸೆಂಬ ತಾವರೆಗೆ ದುಂಬಿಯಂತೆ ಮನಸ್ಸೆಂಬ ಕಾಸಾರಕ್ಕೆ ಹಂಸನಂತೆ ಸಿದ್ಧಲಿಂಗನು ಅಳಿಯಲು ಅನ್ನವಿಲ್ಲದವರಿಗೆ ಅಮೃತವು ದೊರೆತಂತೆ ಕಣ್ಣು ಹೋದವರಿಗೆ ದೃಷ್ಟಿ ಬಂದಂತೆ ಬಂದ ಸಿದ್ಧಲಿಂಗನನ್ನು ಜಂಗಮರು ಕಣ್ಣಾರೆ ಕಂಡು ಆನಂದಪರವಶರಾದರು. ಧರಿಸಿದ ಭಸಿತ ರುದ್ರಾಕ್ಷಿಯ ಸರವಿರುಗುವ ಕೆಂಜೆಡೆ ಮೆರೆಯುವ ಜಂಗಿನ ಪಾದದಿಂದ ರಂಜಿಸುವ ಹರನ ಪಾದಕ್ಕೆರಗಿದರು.

ನಿಗಮಕ್ಕೆ ಸಿಲುಕದವನೇ, ನಿತ್ಯಾನಂದನೇ, ನಿರವಯನೇ! ಅಗಣಿತ ಗುಣ ಮಹಿಮನೇ! ಜಗಜ್ಜನಕನೇ! ಸ್ಥಾವರ ಜಂಗಮ ಸಂಚಾಲಕನೇ!

ಕಾಯಿ ಭಕ್ತವತ್ಸಲಾ ! ಭವರೋಗ ವಿನಾಶಕಾ ! ಮುಕ್ತಿದಾಯಕಾ ! ಮನು ಮುನಿಮನೋಮಂದಿರಾ ಕಾಪಾಡು, ಕಮನೀಯವಿಗ್ರಹ ಬ್ರಹ್ಮಾಂಡ ರಕ್ಷಕಾ, ಗಂಗಾಧರಾ, ಕರುಣಾಸಮುದ್ರಾ, ಸಿದ್ಧೇಶ್ವರಾ ಕಾಪಾಡು. ಪಂಚ ಭೂತದ ಜಡತನುವಿನ ನಮ್ಮನ್ನು ನ್ಮುಡನೇ ಕಾಯಿ ಎಂದು ಸ್ತುತಿಸಲು, ನೀವು ಬಳಲಿ ದಿರಿ ಮನ್ನಿಸೆಂದನು. ಕೇದಾರ ಕ್ಷೇತ್ರವನ್ನು ಬಿಟ್ಟು ಅವರೆಲ್ಲರೊಡನೆ ದಕ್ಷಿಣಾಭಿ ಮುಖವಾಗಿ ಹೊರಟನು. ಗಂಗೆ–ಗೋದಾವರಿಗಳನ್ನು ದಾಟಿಕೊಂಡು ವಿದ್ಯಾಪುರಿಯಲ್ಲಿರುವ ಶಿವಶರಣೆಯೊಬ್ಬಳ ಮನೆಗೆ ಬಂದಿಳಿದರು.

ಬಸಮ್ಮನೆಂಬ ಆ ಶರಣೆಯು ಪ್ರತಿ ಸೋಮವಾರ ತಪ್ಪದೇ ನಾಲ್ಕು ಯಾಮಗಳಲ್ಲೂ ಶಿವಪೂಜೆ ಮಾಡುವಳು. ಒಳಗೂ ಹೊರಗೂ ಅತಿ ಶುಚಿ ಯಾಗಿ ಆತ್ಮಶುದ್ಧಿ ಮಾಡಿ ಭಸ್ಮ ರುದ್ರಾಕ್ಷಿಯ ಸರಗಳನ್ನು ಧರಿಸಿ ಲಿಂಗ ವನ್ನು ಕರಕಮಲದಲ್ಲಿಟ್ಟುಕೊಂಡು ಪೂಜಿಸುವಳು. ಸ್ಥಾನಶುದ್ಧಿ, ದ್ರವ್ಯ ಶುದ್ಧಿ, ಲಿಂಗಶುದ್ಧಿಗಳನ್ನು ಮಾಡಿ "ಓಂ ನಮಃ ಶಿವಾಯಸ್ವಾಹ" ಎಂದು ಲಿಂಗಪೂಜೆಯನ್ನು ಮಾಡುವಳು. ಅರ್ಘ್ಯ–ಪಾದ್ಯ–ಆಚಮನೀಯ ಮಧು ಪರ್ಕಗಳನ್ನು ಮಾಡಿ ಪಂಚಾಮೃತವೆರೆದು ಪಂಚಬ್ರಹ್ಮಮಂತ್ರದಿಂದ ಅಭಿ ಷೇಕವನ್ನು ಮುಗಿಸುವಳು. ವಿಭೂತಿಯಿಟ್ಟು ವಸ್ತ್ರ-ಉಪವೀತ ಆಭರಣ ಗಳನ್ನು ಧರಿಸಿ ಗಂಧ–ಅಕ್ಷತೆಯಿಡುವಳು. ತುಂಬೆಯ ಹೂ, ಬಿಲ್ವಪತ್ರೆ– ಕಮಲ ಪುಂಡರೀಕ ಕರವೀರಾದಿಕುಸುಮಗಳನ್ನರ್ಪಿಸಿ ಧೂಪದೀಪಗಳನ್ನು ಭಕ್ತಿಯಿಂದ ಅರ್ಪಿಸುವಳು. ಅನಂತರ ಮಧುರವಾದ ದಿವ್ಯಾಮೃತ ನೈವೇದ್ಯ ಮಾಡಿ ತಾಂಬೂಲವನ್ನು ಎದುರಿಗಿರಿಸಿ ಪಂಚಾರತಿಯೆತ್ತಿ ಮಂತ್ರಪುಷ್ಪ ವನ್ನೊಪ್ಪಿಸುವಳು. ಹೀಗೆ ಲಿಂಗಪೂಜೆಯನ್ನು ಮುಗಿಸಿ ಕೇವಲ ಪಾದೋದಕ ವನ್ನು ಸ್ವೀಕರಿಸುವಳು. ಇಂತಹ ಸೋಮವಾರ ವ್ರತದ ಶಿವಭಕ್ತೆಯ ಮನೆಗೆ ಸಂತೋಷದಿಂದ ಸಿದ್ಧಲಿಂಗೇಶನು ಬಂದಿಳಿದನು.

ಆ ಶಿವಶರಣೆ ಬಸಮ್ಮನು ಭಕ್ತಿಯಿಂದ ನಮಸ್ಕರಿಸಿ–ಆಚಾರದಂತೆ ಶಂಖವನ್ನೂದಿ–ಕರುಣಾಧಿಯನ್ನು ಕಂಡೆ, ಕಾಮಾರಿಯನ್ನು ಕಂಡೆ; ಖಂಡೇಂದುಧರನ ಕಂಡೆ, ತ್ರಿಶೂಲಿಯನ್ನು ಕಂಡೆ, ಕೈವಲ್ಯನಿಧಿಯನ್ನು ಕಂಡೆ, ಪಂಚಮುಖವನ್ನು ಕಂಡೆ, ತ್ರಿನೇತ್ರನನ್ನು ಕಂಡೆ, ಗಂಗಾಧರನನ್ನು ಕಂಡೆ

ನೆಂದು ಕೊಂಡಾಡಿದಳು. ಆಗ ಸಿದ್ಧೇಶನು ತೆಗೆದಪ್ಪಿ ನೀನೇ ಮತ-ಧರ್ಮ ಸಿಷ್ಯಳು, ನೀನೇ ಶಿವನ ಮೋಹದ ಮಗಳು. ನೀನೇ ಶಿವಧರ್ಮದ ಗಡ್ಡೆಯ ಎಸಳು ಎಂದು ಉಪಚರಿಸಿದನು.

ಹರ ಬಂದ, ದುರಿತಸಂಹರ ಬಂದ, ಭಕ್ತಶಂಕರ ಬಂದನೆಂದು ಉತ್ಸಾಹದಿಂದ ಮಣಿಪೀಠದಲ್ಲಿ ಕೂರಸಿ ಸಿದ್ಧಲಿಂಗೇಶ್ವರನ ಪಾದವನ್ನು ಪೂಜಿಸಿ ತೀರ್ಥವನ್ನು ಪಡೆದು ಭಕ್ತತಿಂಥಿಣಿ ಸಮೇತವಾಗಿ ಸೇವಿಸಿದಳು.

ಆಗ ಸಿದ್ಧೇಶ್ವರನು ಉತ್ಸಾಹಗೊಂಡು ಭಕ್ತರಿಗೆ ಶರಣರ ಪಾದತೀರ್ಥವು ಗಂಗೆಗಿಂತ ಅಧಿಕವೆಂದನು. ಇದನ್ನು ಕೇಳಿದ ಹಿರಿಯರೆಲ್ಲರೂ ವಿಶೇಷ ಸಿದ್ಧನ ಪಾದತಿರ್ಥವು ಗಂಗೆಗಿಂತಲೂ ಅಧಿಕವೆಂದರು ಹಾಗಲ್ಲವೆಂದು ಬೇರೆಯವರ ಪಾದೋದಕವನ್ನು ಮಾಡಿಸಿ ತ್ರಾಸಿನಲ್ಲಿರಿಸಿ ಗಂಗೆಯನ್ನೂ ಅದನ್ನೂ ತೂಗಿಸಲು ಪಾದೋದಕವೇ ಭಾರವಾಯಿತು. ಇದನ್ನು ನೋಡಿ ಶರಣರು ಬಸಮ್ಮ ನೊಡನೆ ಸಿದ್ಧಲಿಂಗೇಶನನ್ನು ಕೊಂಡಾಡಿದರು.

ವಿಜಯನಗರದ ಶರಣೆ ಸೋಮವಾರದ ಬಸಮ್ಮನ ಮನೆಯಲ್ಲಿ ಸಿದ್ಧಲಿಂಗೇಶನೇ ಶರಣರ ಪಾದತೀರ್ಥವು ಗಂಗೆಗಿಂತಲೂ ಅಧಿಕವೆಂದ ರೀತಿಯನ್ನು ತೋರಿಸಲು ಕೆಲವರು ಒಪ್ಪಿದರು. ಅದರೊಳ್ಳೊಬ್ಬನು ಇದು ನಿಜವಲ್ಲ, ನರದೇಹದಿಂದ ಬಂದ ಪಾದೋದಕವು ದೇವಗಂಗೆಗಿಂತ ಶ್ರೇಷ್ಠವಲ್ಲವೆಂದು ದೂಷಿಸಿದನು. ಆ ನಿಂದಕನ ಗರ್ವವನ್ನು ಬಂಧಿಸಲೆಂದು ವಜ್ರದುಂಬಿಗಳು ಝೇಂಕರಿಸುತ್ತಾ ಬಂದವು. ಆ ನಿಂದಕನನ್ನು ಮುತ್ತಿ ಅವನ ರಕ್ತಪಾನ ಮಾಡಿ ಅವನ ಶರೀರದ ರೋಮಕೂಪವನ್ನು ಕಚ್ಚಿ ಮಾಂಸವನ್ನೂ, ಮೇದಸ್ಸನ್ನೂ ತಿಂದವು.

ಕೂಗಿ ಮಾರಿಯನ್ನು ಕರೆದಂತೆ ದೂಷಕನಿಗೆ ಬಹಳ ನೋವಾಗಿ ಯಮ ಶಿಕ್ಷೆಗಿಂತಲೂ ಹೆಚ್ಚಾಯಿತು. ಆಗ ಅವನಿಗೆ ಜ್ಞಾನೋದಯವಾಯಿತು. ಸಾಧುಗಳನ್ನು ರಕ್ಷಿಸುವುದಕ್ಕೂ, ದುರ್ಜನರನ್ನು ಶಿಕ್ಷಿಸುವದಕ್ಕೂ, ಭೂಧರ್ಮ ವನ್ನುದ್ಧರಿಸುವುದಕ್ಕೂ ಸಿದ್ಧಲಿಂಗನು ಮಾನವನಾಗಿ ಕಾಣಿಸಿಕೊಂಡನು. ದುರ್ಜನರನ್ನೇ ಮರ್ದಿಸಿದರೆ ಸದ್ಗುಣ ಬರುವಂತೆ ನಿಂದಕನಿಗೆ ವಜ್ರದುಂಬಿಗಳ

ಕಾಟದಿಂದ ಸದ್ಗುಣಜ್ಞಾನವು ತಲೆದೋರಿತು. ನಾನು ಬಹು ಪಾಪಿ. ನನ್ನ ಗುಣದೋಷಗಳನ್ನು ಎಣಿಸಬೇಡೆಂದು ಸ್ತುತಿಸುತ್ತಿರಲು ಆ ದೋಷಕನಿಗೆ ಸಿದ್ಧಲಿಂಗೇಶನು ಕರುಣಿಸಿ ರುದ್ರಾಕ್ಷಿಗಳನ್ನು ಧರಿಸಿ ಪವಿತ್ರನನ್ನಾಗಿ ಮಾಡಿ ಸೋಮವಾರದ ಬಸಮ್ಮನನ್ನು ಆಶೀರ್ವದಿಸಿ ಮುಂದಕ್ಕೆ ಪ್ರಯಾಣವನ್ನು ಬೆಳೆಸಿದನು.

ವಿಜಯನಗರದಿಂದ ಹೊರಟ ಸಿದ್ಧಲಿಂಗೇಶನು ಆಂಧ್ರ ದೇಶದ ದಂಡೆಗೆ ನಡೆದನು. ಮುಂದೆ ಒಂದು ವಿಶಾಲವಾದ ಕೆರೆಯು ಕಾಣಿಸಿತು. ಬೆಟ್ಟದಂತೆ ಏರಿರುವ ಕೆರೆಯು ಸಮುದ್ರದಂತೆ ಮೊರೆಯುತ್ತಿತ್ತು. ನೀರಿನಿಂದ ತುಂಬಿರುವ ಕೆರೆಯ ತೂಬನ್ನು ಕಾಣದೆ ನೀರಗಂಟಿಯು ಹುಡುಕಿ ಹುಡುಕಿ ಬೇಸತ್ತು ಚಳಿಯಿಂದ ನಡುಗಿ ಹೋಗಿದ್ದನು ಬೇಜಾರುಗೊಂಡ ನೀರಗಂಟಿಯು ಬೇರೆ ದಾರಿ ಕಾಣದೆ ಸಿದ್ಧಲಿಂಗನನ್ನು ಧ್ಯಾನಿಸಿ ತಡಕಲು ಕೂಡಲೆ ತೂಬು ಸಿಕ್ಕಿತು ನೀರನ್ನು ತೂಬಿನಿಂದ ಮಡಿಗೇರಿಸಿ ಏರಿಯ ಮೇಲಕ್ಕೆ ಬರಲು ಎದುರಿಗೆ ಬರುತ್ತಿರುವ ಸಿದ್ಧಲಿಂಗನ ದರ್ಶನವಾಯಿತು. ಸಂತೋಷದಿಂದ ಬಂದು ನಮಸ್ಕರಿಸಿ ನಡೆದ ಸಂಗತಿಯನ್ನು ವಿವರಿಸಿ ನಿಮ್ಮ ಧ್ಯಾನ ಮಾತ್ರದಿಂದ ಮರೆಯಾಗಿದ್ದ ಕೆರೆಯ ತೂಬು ಕಾಣಿಸಿತು. ನಿಮ್ಮ ಭಕ್ತನಿಗಿಂತ ಪುಣ್ಯಾತ್ಮರಿನ್ನಿಲ್ಲ. ನಿಮ್ಮನ್ನು ಮೊರೆಹೊಕ್ಕಿದ್ದೇನೆ. ಕೈ ಬಿಡದೆ ನನ್ನನ್ನುದ್ಧರಿಸುವ ಭಾರ ನಿಮ್ಮದೆ ಎಂದು ಪಾದಗಳನ್ನು ಹಿಡಯಲು, ಕರುಣೆಯುಕ್ಕಿ ವಿಭೂತಿ ರುದ್ರಾಕ್ಷಿಗಳಿಂದ ಆ ನೀರಗಂಟಿಯನ್ನು ಪವಿತ್ರನನ್ನಾಗಿ ಮಾಡಿ ಜಂಗಮರೊಡಗೂಡಿ ಹೊರಟು ಹಂಪೆಯ ಕ್ಷೇತ್ರಕ್ಕೆ ಬಂದನು.

ಶ್ರೀಶೈಲ, ಆಹೋಬಲ, ಕಾಳಹಸ್ತಿ, ಕಂಚಿ ಮೊದಲಾದ ಕ್ಷೇತ್ರಗಳನ್ನು ನೋಡುತ್ತಾ ಹಂಪೆಯ ಕ್ಷೇತ್ರಕ್ಕೆ ಬಂದರು. ತುಂಗಭದ್ರಾ ತೀರದಲ್ಲಿರುವ ವಿರೂಪಾಕ್ಷನ ದರ್ಶನವಾಯಿತು. ಆ ವಿರೂಪಾಕ್ಷೇಶ್ವರನ ಮಠದಲ್ಲಿ ವಿರೂಪಾಕ್ಷಲಿಂಗನೆಂಬು ಅಯ್ಯಗಳಿದ್ದರು. ಅವರು ಸಿದ್ಧಲಿಂಗೇಶ್ವರನಿಗೆ ನಮಸ್ಕರಿಸಿ ಮೋಕ್ಷ ಪದವಿಯನ್ನು ಬೇಡಿದರು ಆಗಲವರಿಗೆ ಪರಮನೇ ನಿತ್ಯನು, ಮಾಯಾ ಪ್ರಪಂಚವು ಅನಿತ್ಯವೆಂದು ಚಿಂತಿಸು, ಜ್ಞಾನೇಂದ್ರಿಯ ವಿಷಯಕ್ಕೆ ಸಿಕ್ಕದೆ ಕ್ಷಮಾಶೀಲನಾಗಿ ಬಲವಾದ ಕರ್ಮೇಂದ್ರಿಯಗಳನ್ನು ವಿಷ

ಯದ ಕಡೆಗೆ ಬಿಡದೆ ನಿಗ್ರಹಿಸಿ ಆತ್ಮನಲ್ಲಿ ಬೆರೆದಿರು. ಸುಖದುಃಖಗಳನ್ನು ಸಮನಾಗಿ ಕಾಣುತ್ತಾ ಮಾಡುವ ಕರ್ಮಗಳನ್ನು ಈಶನಿಗರ್ಪಿಸುತ್ತಾ ಸದ್ಗುರು ವಾಕ್ಯದಲ್ಲಿ ಮನಸ್ಸಿಟ್ಟು ಶ್ರದ್ಧೆಯನ್ನು ಬೆಳೆಯಿಸು. ವೈರಾಗ್ಯ ಶಾಸ್ತ್ರದಲ್ಲಿ ಅಂತಃಕರಣವಿಟ್ಟು ಮೋಕ್ಷವನ್ನು ಬೆರೆಯೆಂದು ಪರೋಕ್ಷಜ್ಞಾನ ವನ್ನು ತಿಳಿಸಿ ಬ್ರಹ್ಮಸಾಕ್ಷಾತ್ಕಾರವಾಗುವ ಮಾರ್ಗವನ್ನು ತೋರಿಸಿದನು.

ಅದರಂತೆ ಸಾಧಿಸಿ ಶ್ರವಣಾಧಿಕಾರವನ್ನು ಪಡೆದು ವೈರಾಗ್ಯದಲ್ಲಿ ನಿಂತು ಮೋಕ್ಷ ಪದವಿಯನ್ನು ಬಯಸಲು ಅವನ ಮನಸ್ಸನ್ನರಿತು ಸಿದ್ಧಲಿಂಗೇಶ್ವರನು ಆಲಿಕಲ್ಲು ಸಮುದ್ರದಲ್ಲಿ ಬೆರೆಯುವಂತೆ ತನ್ನಲ್ಲಿ ಬೆರೆಯುವ ಮೋಕ್ಷಾ ನಂದವನ್ನು ಕರುಣಿಸಿದನು. ಹೀಗೆ ವಿರೂಪಾಕ್ಷಾರಾಧ್ಯರಿಗೆ ಕೈವಲ್ಯ ಪದವಿ ಯನ್ನು ಕರುಣಿಸಿ ಜಂಗಮರೊಡಗೂಡಿ ಮಹಾವಿಜೃಂಭಣೆಯಿಂದ ತುಂಗ ಭದ್ರಾ ತೀರವನ್ನು ದಾಟಿ ಮುಂದಕ್ಕೆ ಹೊರಟನು.

ಆ ಕಾಲದಲ್ಲಿ ಕ್ಷಾಮಡಾಮರಗಳು ಒಂದು ಲೋಕವನ್ನು ಮುಚ್ಚಿ ಮರಿಯುತ್ತಿದ್ದವು. ಮಾನವರು ಇನ್ನು ಜೀವ ಸಾಕೆಂದು ಅನೇಕ ಚಿಂತೆ ಯಲ್ಲಿದ್ದರು. ಹೊನ್ನಿಗೆ ಪಡಿ ಧಾನ್ಯ ಮಾರುವ ದೇಶದಲ್ಲಿ ಅನ್ನೋದಕ ಸುಖ ತಪ್ಪಿ ಜನರು ಕಂಗಾಲಾದರು. ಸಿದ್ಧಲಿಂಗನ ಬರವನ್ನು ಕಂಡು ಆ ರಾಜ್ಯದ ವರು ಗುಂಪುಗೂಡಿ ಬಂದು ನಮಸ್ಕರಿಸಿ, ಬಹಳ ಭಂಗಬಂದಿದೆ, ಅನ್ನ ನೀರು ಕೊಟ್ಟು ರಕ್ಷಿಸು ಎಂದು ಕೇಳಿಕೊಂಡರು. ಇದು ಕಲಿಮಾಯವೆಂದ ರಿತುಕೊಂಡು ಆ ಹೆಡ್ಡ ಕಲಿಯನ್ನು ಹಿಡಿದು ತರುವಂತೆ ಭೂತಗಳಿಗೆ ಅಪ್ಪಣೆ ಮಾಡಿದನು. ಆ ಭೂತಗಳನ್ನು ಕಂಡುಕೊಂಡ ಕಲಿಯು ಪಾತಾಳ ಲೋಕಕ್ಕೆ ಓಡಿಹೋದನು. ಭೂತಗಳು ಬಂದು ನಮಸ್ಕರಿಸಿ, ಆ ಕಲಿಯು ಭೂಲೋಕ ವನ್ನು ಬಿಟ್ಟು ಪಾತಾಳಲೋಕಕ್ಕೆ ಹೋದನೆಂದು ಅರಿಕೆ ಮಾಡಿಕೊಂಡವು. ಆಗ ಅಸಹಾಯಶೂರನೂ, ಕಲಿನಾಶಕನೂ, ಮಾಯಾಮರ್ದನ ಶೂರನೂ ಆದ ಸಿದ್ಧಲಿಂಗ ಮಹಾಸ್ವಾಮಿಯು ಬಾಯಿಬಾಯಿ ಬಿಡುತ್ತಿರುವ ಜನರನ್ನು ಕಂಡು ಮನನುರುಗಿ, ಆ ಭೂತಗಳನ್ನು ನಿಲ್ಲಿಸಿ ಬಹಳ ಸುಭಿಕ್ಷವನ್ನುಂಟು ಮಾಡಿದನು. ನವಧಾನ್ಯದ ಮಳೆಗರೆದು ಬೆಳೆ ಬರುವವರೆಗೂ ಪ್ರಜೆಗಳ ಜೀವನವನ್ನು ಸುಖಮಯವನ್ನಾಗಿ ಮಾಡಿದನು. ಭೂಮಿಯಲ್ಲಿ ಕ್ಷಾಮ

ಡಾಮರಗಳು ಮಾಯವಾಗಿ ಸಿದ್ಧೇಶನ ದಯೆಯಿಂದ ಸುಭಿಕ್ಷೆಯುಂಟಾಯಿತು. ಬರದಿಂದ ಬಳಲಿ ಬಿನ್ನವಿಸಿದ ಜನರಿಗೆ ಸಿದ್ಧಲಿಂಗೇಶನು ಅನ್ನಪಾನವನ್ನಿತ್ತು ಬರವನ್ನು ಓಡಿಸಿದನೆಂದು ಕೊಂಡಾಡಿ ಸೀಮೆಯ ಜನರೆಲ್ಲಾ ಹೆಡಿಗೆ ಜಾತ್ರೆ ಯನ್ನು ಮಾಡುತ್ತಿದ್ದರು.

ಆರತಿ, ನೈವೇದ್ಯ, ಕಾಣಿಕೆಗಳನ್ನು ಹೊತ್ತು, ಸಿದ್ಧೇಶ್ವರನ ಸೇವೆ ಮಾಡಿದರು ನಾಡಿನ ಜನರೆಲ್ಲಾ ಸೊಂಪೇರಿ ವಾದ್ಯಗಳು ಮೊಳಗುತ್ತಿರಲು ಜಾತ್ರೆಯನ್ನು ಮಾಡಿದರು.

ಜನರೆಲ್ಲರೂ ಸಿದ್ಧಲಿಂಗೇಶ್ವರನ ಸೇವೆಯನ್ನು ಮಾಡುತ್ತಿರುವದನ್ನು ಕಣಿಯ ಕಲ್ಲೂರಿನ ರಾಜನು ತನ್ನ ಹೆಂಡತಿಗೆ ತಿಳಿಸಿ, ನಾನು ಸಿದ್ಧೇಶ್ವರನ ಸೇವೆ ಮಾಡಬೇಕು ಹಸುವಿನ ಹಾಲನ್ನು ಮೀಸಲಾಗಿಡು ಎಂದು ಹೇಳಿದನು. ಅವಳು ಮೀಸಲಾಗಿಟ್ಟಿದ್ದ ಹಾಲನ್ನು ಬೆಳಗಾಗಲೆದ್ದು ಮರೆದು ತನ್ನ ಬಾಲಕ ರಿಗೆರೆದಳು. ಸುಳ್ಳು, ಗರ್ವ, ಮಾಯೆ, ಛಲ, ಚಪಲ, ಚಿತ್ತ, ಅಶುಚಿ, ನಿರ್ದಯಗಳು ಸ್ತ್ರೀಯರಿಗೆ ಸ್ವಾಭಾವಿಕ ಗುಣಗಳು. ಆಗಲವರ ಗೋವು ಗಳೆಲ್ಲಾ ರಕ್ತವನ್ನು ಕರೆದವು, ಮಕ್ಕಳ ಬಾಯಿಕೆಟ್ಟಿತು, ದನಗಳ ಕೆಚ್ಚಲು ಒಣಗಿತು. ಕೆಚ್ಚಲಿಗೆ ಕೈಯಿಡಲು ಒದೆದವು. ಇದೇಕೆಂದು ಯೋಚಿಸುವ ರಾಜನಿಗೆ ಸಿದ್ಧೇಶನ ಮೀಸಲಿನ ನೆನಪು ಬಂದಿತು.

ಅದೇ ಕಲ್ಲೂರಿನಲ್ಲಿ ಒಬ್ಬ ಹೊಸ ಸೊಸೆಯು ನೀರಿಗೆ ಹೋಗಿ ಬಿಂದಿಗೆ ಯನ್ನು ನೀರಿನಲ್ಲಿ ತೇಲಿಬಿಟ್ಟು ಮುಖ ತೊಳೆಯುತ್ತಿದ್ದಳು. ಬಿಂದಿಗೆಯು ಕೈಗೆ ಸಿಕ್ಕದೆ ನಡುನೀರಿಗೆ ಹೋಯಿತು.

ಎಷ್ಟು ಹೊತ್ತು ಕಾದರೂ ಬಿಂದಿಗೆ ಬರಲಿಲ್ಲ. ಇನ್ನು ಅತ್ತೆಯು ಬಯ್ಯುವಳೆಂದು ಚಿಂತಿಸುತ್ತಾ ಸಿದ್ಧಲಿಂಗ ನೀನೆ ಗತಿಯೆಂದಳು. ಸಿದ್ಧ ಲಿಂಗನು ದಯಮಾಡಲು ಬಿಂದಿಗೆ ಕೂಡಲೇ ಸಮೀಪಕ್ಕೆ ಬಂತು. ಈ ಸುದ್ದಿ ನೀರಿಗೆ ಬಂದ ಹೆಂಗಸರೆಲ್ಲರಿಗೂ ತಿಳಿಯಿತು. ಅದೇ ಸುದ್ದಿ ಮಾತ ನಾಡುತ್ತಾ ನೀರನ್ನು ಹೊತ್ತು ಬರುತ್ತಿರುವಾಗ ಅವರಲ್ಲೊಬ್ಬಳ ತಲೆಯ ಮೇಲಿನ ನೀರ ಗಡಿಗೆಯು ಪವನ ತಪ್ಪಿ ಕೆಳಕ್ಕೆ ಬಿದ್ದಿತು. ಆ ಹುಡುಗಿ

ಹೌಹಾರಿ ಸಿದ್ಧಲಿಂಗಾ ಎಂದಳು. ಕೊಡವು ಒಡೆಯದೆ ನೆಲದ ಮೇಲೆ ಕೂತಿತು. ಇದನ್ನು ಕಂಡು ಹೆಂಗಸರೆಲ್ಲಾ ಸಿದ್ಧಲಿಂಗನ ಧ್ಯಾನ, ಸಿದ್ಧಲಿಂಗನ ಆಣೆಗಳನ್ನು ಮಾಡಹತ್ತಿದರು. ಎಲ್ಲೆಲ್ಲೂ ಸಿದ್ಧಲಿಂಗನ ಹೆಸರು ಹಬ್ಬಿತು. ಭಕ್ತಿಭಾವಗಳೆಲ್ಲವೂ ಸಿದ್ಧಲಿಂಗಮಯವಾದವು.

ಈ ಸುದ್ದಿ ರಾಜನ ಕಿವಿಗೆ ಮುಟ್ಟಿತು. ರಾಜನು ಆಶ್ಚರ್ಯಚಕಿತನಾಗಲು ಅದರಲ್ಲೊಬ್ಬನು ಇದು ಸುಳ್ಳು ಎಂದು ನಿಂದಿಸಿ ಹಾಸ್ಯಮಾಡಿದನು ನಡುನೀರಿಗೆ ಹೋದ ಬಿಂದಿಗೆ ಗಾಳಿಗೆ ಬಂದಿತು. ಮರಳಲ್ಲಿ ಬಿದ್ದ ಗಡಿಗೆ ಒಡಿಯನೆ ಉಳಿದಿದೆ. ಇಷ್ಟಕ್ಕೆ ಇದನ್ನು ಅದ್ಭುತವನ್ನಾಗಿ ಮಾಡಿ ತೋರಿಸುತ್ತಿದ್ದೀರಿ. ದೂರ ದೇಶದಲ್ಲಿರುವ ಸಿದ್ಧಲಿಂಗನು ಇಲ್ಲಿಗೆ ಹಾರಿ ಬಂದು ಈ ಬಿಂದಿಗೆ ತಂದು ಕೊಟ್ಟನೆ ? ಸ್ವತಃ ಹಿಡಿದು ಗಡಿಗೆ ಒಡೆಯದಂತೆ ಮಾಡಿದನೆ ? ಇದೆಲ್ಲಾ ಬೂಟಾಟಿಕೆ. ಇದನ್ನು ನಾನು ಒಪ್ಪಲಾರೆ ಎಂದನು. ಆಸ್ಥಾನದಲ್ಲಿದ್ದವರು ಕಣ್ಣಿನಲ್ಲಿ ಕಂಡುದನ್ನು ನಂಬದಿರುವುದು ಸಾಧ್ಯವೆ ? ಬೂಟಾಟಿಕೆ ಮಾಡಿ ನಾವು ಪಡೆಯುವ ಪರಮಾರ್ಥವಾದರೂ ಏನಿದೆ ? ಹರ ನಿಂದೆ ಮಾಡಿ ಸುಮ್ಮನೆ ಕೆಡಬೇಡ. ಸಿದ್ಧೇಶ್ವರನ ಮಹಿಮೆಯನ್ನು ನಿಂದಿಸಿದವರಿಗೆ ಬಾಯಿಯಲ್ಲಿ ಹುಳುವು ಸುರಿದಿದೆ. ಮೈಯನ್ನು ವಜ್ರದುಂಬಿಗಳು ಕೊರೆದಿವೆ. ಇದು ನೀನರಿಯದ ಧರ್ಮಸೂಕ್ಷ್ಮ. ಕಾಣದ್ದನ್ನೆಲ್ಲಾ ಕಂಡೆ, ನಾನೇ ಜಾಣನೆಂದು ಕೆಡಬೇಡವೆಂದರು. ಅದಕ್ಕವನು ಶಿವನೇನು ಮಾಡಬಲ್ಲ; ಕರ್ಮಾನುಭವ ತಪ್ಪಿದ್ದಲ್ಲವೆಂದು ಉರಗು ಬಾಯಿಮಾಡಿ ಸುಳ್ಳು ಮಾಡಲು ಪ್ರಯತ್ನಿಸಿದನು.

ಆ ಗರ್ವಿಯ ಬಾಯಿಯು ಓರೆಯಾಯಿತು. ಕೊರಳು ಸುಕ್ಕೇರಿತು. ಅದನ್ನು ಕಂಡು ಸಭೆಯವರು ಮಾಯಾನಾಟಕ ಸೂತ್ರಧಾರನ ಮಹಿಮೆಗೆ ಬೆರಗಾಗಿ ಬ್ರಹ್ಮೇತಿಗೊಳಗಾದವನ ಪರಿಯನ್ನು ಕಣ್ಣಾರೆ ನೋಡಿದರು. ರಾಯನು ನಿಜವನ್ನು ಗ್ರಹಿಸಿ ಮೀಸಲಳಿದ ಹಸುಗಳಿಂದ ರಕ್ತವನ್ನು ಕರೆಸಿದೆ. ಮೋಸದಿಂದ ಹೋದ ಕುಂಭವನ್ನು ಬರಿಸಿದೆ ನಿಂದಕನ ಬಾಯಿ ಓರೆ ಮಾಡಿದೆ. ಕೆಳಗೆ ಬಿದ್ದ ಗಡಿಗೆಯನ್ನು ಕೈಹಿಡಿದೆ ಎಂದು ಸ್ತುತಿಸಲು, ಆ ರಾಯನ ನಿಜಭಕ್ತಿಗೆ ಮೆಚ್ಚಿ ಸಿದ್ಧಲಿಂಗನು ಜಂಗಮರನ್ನು ಬಿಟ್ಟು ಆ

ಕೂಡಲೆ ಬಂದು ಕಾಣಿಸಿಕೊಂಡನು. ಕೆಂಜಡೆದಲೆ ವಿಭೂತಿಯ ಮೈ ಕೊರಳ ರುದ್ರಾಕ್ಷಿಯ ಮೂರ್ತಿಯನ್ನು ಕಂಡು ರಾಜನು ನಿರಂಜನನೆಂದು ಸ್ತುತಿಸಿ ನಡುಬೀದಿಯಲ್ಲಿರುವ ಸಿದ್ಧಲಿಂಗನ ಪಾದಕ್ಕೆರಗಲು ತೆಗೆದಪ್ಪಿ ನೀನು ಶರಣ ನೆಂದೊಲಿದು ಬಂದು, ನೀನಗೇನು ಬೇಕು ಕೇಳೆನಲು, ರಾಜನು ಗುರುದೇವಾ! ನಿಂದಕನನ್ನು ನೋಡಲಾರೆ ರಕ್ಷಿಸು, ಗೋವುಗಳನ್ನು ಹಾಲು ಕರೆಯುವಂತೆ ಮಾಡು. ಎನ್ನಲು ಲಿಂಗಧಾರಣೆ ಭಸ್ಮ ಲೇಪನದಿಂದ ಪಾಪಕ್ಷಯವಾಗುವು ದೆಂದು ರಾಜನಿಗೆ ಹೇಳಿ ಕೂಡಲೆ ಜಂಗಮರಿದ್ದ ಸ್ಥಳಕ್ಕೆ ಹೋದನು.

ಆ ಗರ್ವಿಗೆ ಲಿಂಗಧರಿಸಿದ ಮೇಲೆ ಬಾಯಿ ಸರಿಯಾಯಿತು. ಗೋವು ಗಳಿಗೆ ಭಸ್ಮ ಧರಿಸಿದ ಮೇಲೆ ಹಾಲು ಕರೆದವು. ಮಡದಿಗೂಡಿ ಮೊಸಲು ಮಾಡಿ ರಾಜನು ಹರ್ಷಗೊಂಡು ಸುಖವಾಗಿದ್ದನು.

ಈಗ ಸಿದ್ಧಲಿಂಗೇಶನ ಸುದ್ದಿಯು ಮತ್ತೂ ಮುಂದುವರಿಯಿತು. ತಾನೊಬ್ಬನೇ ಮನೋವೇಗದಿಂದ ಸಂಚರಿಸುವುದಲ್ಲದೆ ತನ್ನೊಡನಿರುವವರೆಲ್ಲ ರನ್ನೂ ನೆನಹುಮಾತ್ರದ ಮನೋವೇಗದಿಂದ ಕರೆದೊಯ್ಯಲು ಶಕ್ತನಾದನು. ನೆನಹು ಮಾತ್ರದಿಂದ ಜಗತ್ ಸೃಷ್ಟಿ ಲಯಗಳನ್ನು ಮಾಡುವ ನಿರಂಜನ ಪುರುಷನಿಗೆ ಇದು ಸ್ವಾಭಾವಿಕವಲ್ಲವೇ ? ಹುಟ್ಟುಗುಣ ಮರೆಯಾಗುವುದು ಸಾಧ್ಯವೇ ? ಮರೆಸಿಟ್ಟರೂ ಪ್ರಕಾಶಿಸಿ ಪ್ರಜ್ವಲಿಸುವ ರತ್ನದಂತೆ ಹುಟ್ಟುಗುಣ ವನ್ನು ಕಟ್ಟಿ ಮರೆಮಾಡಬಹುದೆ ?

ತುಂಗಭದ್ರಾ ತೀರದ ಕಲ್ಲುಮಠದಲ್ಲಿರುತ್ತ ಸಿದ್ಧೇಶ್ವರನು ಅವನೊ ಡನೆ ಮಠವನ್ನು ಬಿಟ್ಟು ನೆನಹು ಮಾತ್ರದ ಮನೋವೇಗದಿಂದ ಒಂದೇ ಒಂದು ನಿಮಿಷಕ್ಕೆ ಗೂಳೂರು ಮಠಕ್ಕೆ ಬಂದರು. ಅದನ್ನು ನೋಡಿದವ ನೊಬ್ಬನು ಸಿದ್ಧೇಶನಿಗೆ ಜರಿದಾಡಿದನು. ಸಿದ್ಧೇಶ್ವರನು ತನ್ನ ಭಕ್ತರನ್ನು ಜರಿಯುವುದನ್ನು ಕಂಡು ಕೋಪಿಸಿದನು. ಶಿವನಿಗಿಂತ ಶಿವಭಕ್ತರಧಿಕರಲ್ಲವೇ? ಆಗ ಆತನಿಗೆ ನಾಲಿಗೆ ನಿಂತು ಮಾತೇ ಹೊರಡದೆ ಕೈಸನ್ನೆ ಬಾಯಿಸನ್ನೆಯಾ ಯಿತು. ಇದ್ದಕ್ಕಿದ್ದಂತೆ ಮೂಕನಾದವನಿಗೆ ಜ್ಞಾನಬುದ್ಧಿಗಳು ಹುಟ್ಟಿ ಸಿದ್ಧೇಶ್ವರನ ಪಾದಕ್ಕೆ ನಮಸ್ಕರಿಸಿದನು. ಆ ಕ್ಷಣವೇ ಅವನಿಗೆ ನಿಂತಿದ್ದ

ವಾಕ್ಯ ಪುನಃ ಬಂತು. ಆಗ ಅವನು ಸಿದ್ಧೇಶನನ್ನು ಸ್ತುತಿಸುತ್ತಿರಲು ಶಿವನಿಗೂ ಶಿವಭಕ್ತರಿಗೂ ಭೇದ ಕಲ್ಪಿಸದಂತೆ ಬುದ್ಧಿಯನ್ನು ಹೇಳಿ ಮುಂದಕ್ಕೆ ನಡೆದನು.

ಗೂಳೂರಿನಿಂದ ಅದೇ ಮನೋವೇಗದಿಂದ ಚರಸಮೂಹಗೂಡಿ ಶಿವಗಂಗೆಗೆ ವಾಯುವ್ಯದಲ್ಲಿ ಯೋಜನ ದೂರದಲ್ಲಿರುವ ಕೇತ್ಸಮುದ್ರವೆಂಬ ಗ್ರಾಮದ ಸಮೀಪದಲ್ಲಿ ಒಂದು ಕಲ್ಲುಬಂಡೆಯು ಬೆಳೆದು ನಿಂತಿರುವಲ್ಲಿಗೆ ಬಂದರು. ಹಿಂದಿರುವ ಗಣಂಗಳು ಇಲ್ಲಿ ನೀರು ಬಂದರೆ ಶಿವಾರ್ಚನೆಗೆ ಅನುಕೂಲವೆಂದರು. ಅವರ ಮಾತನ್ನು ಕೇಳಿ ಸಿದ್ಧಲಿಂಗೇಶನು ತನ್ನ ಪಾದವನ್ನು ಬಂಡೆಯಲ್ಲಿ ಊರಿದನು. ಆ ಕೂಡಲೇ ಮೂರು ಲೋಕಕ್ಕೆ ಮಹತ್ತಾದ ತೀರ್ಥವು ಹುಟ್ಟಿತು. ಅದಕ್ಕೆ ಸಿದ್ಧಗಂಗೆಯೆಂದು ಹೆಸರಾಯಿತು. ಆಗಲಾ ಗಂಗಾ ತೀರ್ಥವನ್ನು ಕಂಡು ಹಿರಿಯರು ಸಹ ಲಿಂಗಾರ್ಚನೆಯನ್ನು ಮಾಡುತ್ತಿರಲು ಆಕಾಶದಲ್ಲಿ ದೇವತೆಗಳು ಉತ್ಸಾಹದಿಂದ ದುಂದುಭಿಯ ನಾದವನ್ನು ಮಾಡಿದರು.

ಬಯಸಿದ ಫಲವನ್ನು ಕೊಡುವ, ಮಾಡಿದ ಪಾಪವನ್ನು ನಾಶ ಮಾಡುವ ಸಿದ್ಧಗಂಗಾ ತೀರ್ಥವನ್ನು ಸಿದ್ಧಲಿಂಗನು ಪಾದದಿಂದ ನಿರ್ಮಿಸಿದ್ದ ಸುದ್ದಿಯನ್ನು ಕೇಳಿ ತಿಗುಳ ದೇಶದ ಒಬ್ಬ ವಿಷರೋಗಿಯು ಉಬ್ಬಸಗೊಳ್ಳುತ್ತಾ ಬಂದನು.

ಸೇರದವರು ಮಾಡಿದ ಮಾಟ ಮಠವೆಯ ವಿಷವು ತುಂಬಿ ಬಳಲುತ್ತಿರುವ ವೀರಣ್ಣನೆಂಬುವನು ಬಂದು ಸಿದ್ಧೇಶ್ವರನ ಪಾದಕ್ಕೆ ನಮಸ್ಕರಿಸಿ ಭವರೋಗವೆಂಬ ಕತ್ತಲೆಗೆ ಸೂರ್ಯನೇ, ಮಹಾ ವಿಷರೋಗಕ್ಕೆ ಗರುಡನೇ, ನನ್ನ ರೋಗವನ್ನು ಪರಿಹರಿಸೆಂದು ದ್ರಾವಿಡ ಭಾಷೆಯಲ್ಲಿ ಸ್ತುತಿಸಿದನು. ಅದನ್ನು ಕೇಳಿದ ಸಿದ್ಧಲಿಂಗೇಶ್ವರನು ಈ ಸಿದ್ಧಗಂಗೆಯಲ್ಲಿ ಸ್ನಾನ ಮಾಡಿದರೆ ಭವರೋಗಹರ, ವಿಷರೋಗ ಸಂಹಾರ, ಆರೋಗ್ಯಾಭಿವೃದ್ಧಿಯಾಗುವುದೆಂದು ಆಶೀರ್ವದಿಸಿದನು. ಆ ಅಪ್ಪಣೆಯಂತೆ ವೀರಣ್ಣನು ಸ್ನಾನ ಮಾಡಲು ಎಷ್ಟೆಷ್ಟೋ ಔಷಧಿಗಳಿಗೆ ಮಣಿಯದ ವಿಷರೋಗವು ಪರುಷ ಸೋಂಕಿದ ಲೋಹವು ಬಂಗಾರವಾಗುವಂತೆ ಹರಿದು ಆರೋಗ್ಯವು ಲಭಿಸಿತು. ರೋಗ ಹರಿದೊಡನೆ ಸಂತೋಷ

ದಿಂದ ವೀರಣ್ಣನು ತಿಗುಳ ಭಾಷೆಯಿಂದ ಸಿದ್ಧೇಶ್ವರನನ್ನು ಸ್ತುತಿಸಿದನು. ಅದನ್ನು ಕೇಳಿ ಜಂಗಮರು ಸ್ವಾಮಿಗಳಿಗೆ ನಮಸ್ಕರಿಸಿ ನಮಗೆ ದ್ರಾವಿಡ ಭಾಷೆಯು ತಿಳಿಯುವುದಿಲ್ಲ. ಕನ್ನಡದಲ್ಲಿ ಮಾತನಾಡುವಂತೆ ಮಾಡಬೇಕೆಂದು ಬೇಡಿ ಕೊಂಡರು. ಭಕ್ತಚಿಂತಾಮಣಿಯಾದ ಸಿದ್ಧಲಿಂಗನು ಆ ರುದ್ರಗಣದ ವಾಕ್ಯ ಕೇಳಿ ಆ ವೀರಣ್ಣನ ಮಂಡೆಯ ಮೇಲೆ ಕರಕಮಲವಿಟ್ಟು ಕನ್ನಡ ವಾಗ್ಝರಿ ಯನ್ನು ತುಂಬಿದನು. ಕೂಡಲೇ ವೀರಣ್ಣನು ಕನ್ನಡ ಭಾಷೆಯಲ್ಲಿ ಸಿದ್ಧೇಶ ನನ್ನು ಬಗೆಬಗೆಯಾಗಿ ಸ್ತುತಿಸಿದನು. ಅದನ್ನು ಕಂಡ ಗಣಸಮೂಹವು ಅಚ್ಚರಿಗೊಂಡರು. ಹೀಗೆ ಭಕ್ತಾಭಿಷ್ಟ ಕಲ್ಪವೃಕ್ಷ ಸಮೂಹನಾದ ಸಿದ್ಧ ಲಿಂಗೇಶನು ಬೇಡಿದವರಿಗೆ ಬೇಡಿದುದನ್ನೂ, ಕೇಳಿದವರಿಗೆ ಕೇಳಿದುದನ್ನೂ, ಕಲ್ಪಿಸಿದವರಿಗೆ ಕಲ್ಪಿಸಿದುದನ್ನೂ, ಚಿಂತಿಸಿದವರಿಗೆ ಚಿಂತಿಸಿದುದನ್ನೂ ಇಲ್ಲ ವೆನ್ನದೇ ಹಿಂದು ಮುಂದು ನೋಡದೆ ಕೊಡುತ್ತಾ ಅಲ್ಲಿಂದ ಮುಂದಕ್ಕೆ ತೆರಳಿದನು.

ಗುರುಸಿದ್ಧಲಿಂಗನು ಚರಪತಿಗಳೊಡನೆ ಮತ್ತೊಂದು ಸಾರಿ ಭೂಪ್ರ ದಕ್ಷಿಣೆ ಮಾಡಿ ಕನ್ನಡ ದೇಶದಲ್ಲಿ ಸಂಚರಿಸುತ್ತಾ ದೇಶ ದೇಶಕ್ಕೆ ಒಬ್ಬೊಬ್ಬ ವಿರಕ್ತರನ್ನು ನಿಯಮಿಸಿ ಭೂಶುದ್ಧಿಯನ್ನು ಮಾಡಿ ಕಲಿಯನ್ನು ಕಟ್ಟಿ ಆಳಿ ದನು. ಮಹಿಮಾಪುರುಷನೆಂದು ಹೆಸರುವಾಸಿಯಾಗಿ ಕರೆದವರಿಗೆ "ಓಂ" ಎಂದು ಪ್ರತ್ಯಕ್ಷನಾಗುತ್ತಾ ಮೆರೆದನು. ಹೀಗೆ ಆತ್ಮಬಲವು ಪ್ರಬಲಿಸಿ ಸರ್ವ ವ್ಯಾಪಿಯಾಗಿ ಒಂದೇ ಸಮಯದಲ್ಲಿ ಸಾವಿರಾರು ಕಡೆ ಕಾಣಿಸಿಕೊಳ್ಳುವನು. ಒಂದೇ ಕಾಲದಲ್ಲಿ ನಾನಾ ಸ್ಥಳಗಳಲ್ಲಿದ್ದು ವ್ಯವಹರಿಸುವವನಾದನು. ಹೀಗೆ ಏಕಾಂತದಿಂದ ಅನಂತನಾಗಿ ವಿಶ್ವವ್ಯಾಪಕನಾದನು. ಶರಣರೊಡನಿದ್ದು ನೆನೆದವರಿಗೆ ದರ್ಶನ ಕೊಡುತ್ತಾ ಚಿನ್ಮಯನಾಗಿ ತೀರ್ಥಗಿರಿಗೆ ಬಂದು ಗವಿ ಯಲ್ಲಿದ್ದನು. ಅಲ್ಲಿ ಒಬ್ಬ ಕಾರಣಪುರುಷನು ಕಡುಬಡವನಾಗಿದ್ದು ಸಿದ್ಧೇಶ್ವರ ನನ್ನು ನಿತ್ಯವೂ ಸೇವಿಸಿ ಮೆಚ್ಚಿಸಿಕೊಂಡನು. ಸಿದ್ಧನ ಪಾದವನ್ನೇ ಸೇವಿಸು ವನು. ಶೇಷ ಪ್ರಸಾದವನ್ನು ಭುಂಜಿಸುವನು. ಒಂದು ದಿನ ಗುರುಸಿದ್ಧ ಲಿಂಗನು ತಾಂಬೂಲವನ್ನು ಸವಿದುಕೊಡಲು ಭಯಭಕ್ತಿಯಿಂದ ಕೈಯೊಡ್ಡಿ ಗ್ರಹಿಸಿ ಭುಂಜಿಸಲು ಅವನ ಭಕ್ತಿಗೆ ಮೆಚ್ಚಿ ಅಷ್ಟೈಶ್ವರ್ಯವನ್ನು ಕರುಣಿಸಿ

ದನು. ಕೆಲವೇ ದಿನಗಳಲ್ಲಿ ಅವನು ಹಾಗಲವಾಡಿಯ ರಾಜನಾಗಿ ಶಾಲಿ ನಾಯಕನೆಂಬ ಹೆಸರಿನಿಂದ ಯಶಸ್ವಿಯಾದನು.

ಜ್ಞಾನಿಯೇ ಭವಿಯು ಶಿವಭಕ್ತನು; ಅಜ್ಞಾನಿಯೇ ನಾ ನೀ ಎಂಬ ಭೇದಾಹಂಕಾರವಳಿದುಳಿದವನೇ ಶಿವಭಕ್ತನು; ಜಾತ್ಯಹಂಕಾರ, ಮತ, ಭ್ರಮೆ ಕುಲ, ಛಲಗಳೆಂಬ ಅಜ್ಞಾನಗುಣಗಳನ್ನು ಕಳೆದು ಭೂತದಯಾಪರನಾಗಿ, ಈಶಧ್ಯಾನದಲ್ಲಿ ಸುಪ್ರೀತನಾಗಿರುವವನೇ ಶಿವಭಕ್ತನು; ಸಿರಿಯಲ್ಲಿ ಹಿಗ್ಗದೇ ಬಡತನದಲ್ಲಿ ಕುಗ್ಗದೇ ಸುಖ–ದುಃಖವೆರಡೂ ಒಂದೇ ಆನಂದದ ಎರಡು ಮುಖ ವೇದರಿದಿರುವವನೆ ಶಿವಭಕ್ತನು; ಪರನಿಂದೆ, ಪರಹಿಂಸೆ, ಪರದ್ರವ್ಯಾಪಹರಣ, ಪರಸ್ತ್ರೀಯರ ಕೂಟವೆಂಬ ನರಕದ ಕುಣಿದಾಟವನ್ನು ಬಿಟ್ಟು ಧರ್ಮದಿಂದಾ ಚರಿಸುವವನೇ ಶಿವಭಕ್ತನು; ಗುರುವಿನ ಮಂತ್ರೋಪದೇಶವನ್ನು ವಿಧಿಯಂತೆ ಅನುಸರಿಸುತ್ತಾ ಅಭಿಮಾನಿಯಾಗಿ ಸದಾ ಅಥಿತಿಗಳನ್ನು ಪೋಷಿಸುವವನೇ ಶಿವಭಕ್ತನು ಎಂದು ಉಪದೇಶಿಸಲು ಗುರುವಾಕ್ಯದಂತೆ ಶಿವಭಕ್ತಿ ಮಾರ್ಗ ವಿಡಿದು ಆಚರಿಸುತ್ತಾ ಶಾಲಿನಾಯಕನು ಭೂಪಾಲಕನಾಗಿ ಶಿವಕೃಪೆಯಲ್ಲಿದ್ದು ಪ್ರಸಿದ್ಧನಾದನು.

ಇತ್ತ ಸಿದ್ಧಲಿಂಗೇಶ್ವರನು ಜಂಗಮರೊಡಗೂಡಿ ಹೆಬ್ಬೂರು ಕಲ್ಯಾಣ ಬಸವೇಶ್ವರನ ಗುಡಿಗೆ ಬಂದಿಳಿದನು. ಕರಡಿಯ ವಾದ್ಯವು ಮೊರೆಯುತ್ತಾ ನಂದಿಧ್ವಜವು ಕುಣಿಯುತ್ತಾ ಧೂಪದ ಹೊಗೆ ಆಕಾಶವನ್ನು ತುಂಬುತ್ತಿರಲು ಹೆಬ್ಬೂರಿನಲ್ಲಿ ಜಾತ್ರೆಯು ಸೇರಿತು. ಆ ಬಸವೇಶನಿಗೆ ಆರತಿಗಳು ನಡೆದವು, ಜಂಗಮಾರ್ಚನೆ ಸಾಗಿತ್ತು. ಮಧುರ ರಸಭರಿತವಾದ ನೈವೇದ್ಯಗಳು ಬರು ತಿದ್ದುವು. ಆದರಂತೆ ಒಬ್ಬ ಕನ್ಯೆಯು ಚಿನ್ನದ ಬಟ್ಟಲಲ್ಲಿ ಹಾಲು ತುಪ್ಪ ತಂದು ಬಸವನ ಮುಂದಿಟ್ಟಳು. ಅದನ್ನು ನೋಡಿ ಸಿದ್ಧಲಿಂಗೇಶ್ವರನು ಕಲ್ಲಿನ ಬಸವನಿಗೆ– ನೀನು ಉಣ್ಣುವಂತಿದ್ದರೆ ಏನು ಮಾಡುತ್ತಿದ್ದರೋ, ತಂದಿರುವುದು ಬೇಡವೆನಬೇಡ ಊಟಮಾಡು ಎಂದನು. ಅದರಂತೆ ಬಸವೇಶನು ನಿಜರೂಪ ಧರಿಸಿ ಹಾಲು ತುಪ್ಪವನುಣ್ಣುತ್ತಿರಲು ಸಿದ್ಧನು ನಕ್ಕು ಬಟ್ಟಲು ಸಹ ಸಲಿ ಸೆಂದನು. ಬಸವಣ್ಣನು ಬಟ್ಟಲನ್ನೂ ನುಂಗಿಬಿಟ್ಟನು. ಬಾವಶುದ್ಧಿಯು ಕಲ್ಲಿ ನಲ್ಲಿ ಪ್ರಾಣವನ್ನು ತುಂಬುವುದರಲ್ಲಿ ಆಶ್ಚರ್ಯವೇನಿದೆ! ಇದರಂತೆ ಭಕ್ತಿ

ಭಾವವು ಬೆಲ್ಲವಾಗುವುದರಲ್ಲಿ ಸಂದೇಹವೇನಿದೆ ? ಭಾವ ಬೆಲ್ಲವಾದರೆ ಭಕ್ತಿ ಸರಿಯಾಗಿ ಬಿಡುವುದಲ್ಲವೆ ?

ಸೂರ್ಯನು ಕಮಲಗಳಿಗೆ ಮಿತ್ರನಾಗಿದ್ದು ಸಚರಾಚರದಲ್ಲಿ ತನ್ನ ಕಿರಣವನ್ನು ಬೆಳಗಿಸುವಂತೆ ಸಿದ್ಧಲಿಂಗೇಶ್ವರನು ಒಂದು ಸ್ಥಳದಲ್ಲಿದ್ದು ನೆನೆದವರಿಗೆ ದರ್ಶನ ಕೊಡುತ್ತಾ ಕರೆದವರಿಗೆ ಓಗೊಡುತ್ತಾ ಒಂದೇ ಕಾಲದಲ್ಲಿ ಸಾವಿರಾರು ಜನರು ಕರೆದರೆ ಅವರಿಗೆಲ್ಲಾ ದರ್ಶನ ಕೊಡುತ್ತಾ ವಿಶ್ವವ್ಯಾಪಿಯಾಗಿ ವಿರಾಜಿಸಿದನು. ಅಷ್ಟರಲ್ಲೊದಗಿದ ಶಿವರಾತ್ರಿಯಲ್ಲಿ ಕೋಟ್ಯಂತರ ಶರಣರು ಪೂಜಿಸಿ ಬಯಸಿ ಕರೆದೆಡೆಗಳಿಗೆಲ್ಲಾ ದರ್ಶನವಿತ್ತು, ಅವರನ್ನೆಲ್ಲಾ ಸಂಭ್ರಮಗೊಳಿಸಿ ಮರ್ತ್ಯವನ್ನು ಶಿವಧರ್ಮಮಯವಾಗಿ ಮಾಡಿ ಕಲಿಯನ್ನು ಓಡಿಸಿದನು.

ಇದಲ್ಲವೇ ಲೀಲಾ ಮೂರ್ತಿಯ ಅವತಾರದ ಉದ್ದೇಶ ? ಸಿದ್ಧೇಶ್ವರನು ಜಂಗಮರೊಡಗೂಡಿ ಅಲ್ಲಿಂದ ತುಮುಕೂರಿಗೆ ಬಂದು ಬಸವೇಶ್ವರಾಲಯದಲ್ಲಿಳಿದನು. ಊರ ಶಿವಭಕ್ತಾಗ್ರಣ್ಯರೊಡಗೂಡಿ ತಾಳ, ಮೇಳ, ಕಲಶ, ಕನ್ನಡಿ, ಕೊಂಬು, ತಮಟೆ, ನಂದಿಯ ಧ್ವಜ, ಪಲ್ಲಕ್ಕಿಗಳೊಡನೆ ಭಕ್ತಾಗ್ರೇಸರ ಪ್ರಭು ಶೆಟ್ಟಿಯು, ಸಪ್ಪೆಯೊಡೆಯರು, ಬೋಳಬಸವಾರ್ಯರು, ಹುಪ್ಪಿನಹಳ್ಳಿಯ ಅಯ್ಯನವರು, ರಾಚೋಟಿದೇವರು, ಗುಮ್ಮಾಳಾಪುರದ ಸಿದ್ಧಲಿಂಗ ಒಡೆಯರು, ಪಟ್ಟಣದ ದೇವರು, ಚಂದ್ರಶೇಖರದೇವರು, ದೊಡ್ಡ ಸಿದ್ಧೇಶ್ವರರು, ಶೀಲವಂತೇಶ್ವರ ಗಟ್ಟಿಸಿದ್ಧಯ್ಯ, ಸುತ್ತೂರ ಸಿದ್ಧಮಲ್ಲೇಶ, ಘನಲಿಂಗದೇವರು, ಬತ್ತಲೆ ದೇಶಿಕರು, ಹುಚ್ಚ ಪರ್ವತ ದೇವರು, ಕಟ್ಟಿಯಪುರದ ನಂಜೇದೇವರು, ಕೊಡಗಿ ಹಳ್ಳಿಯಾರ್ಯ, ತಿಪ್ಪೂರ ಕಂಕಣದ ದೇವರುಗಳಾದ ಗಣವರ್ಯರೊಡನೆ ಸಾಂಗವಾಗಿ ಶಿವಾರ್ಚನೆಯೆಸಗುತ್ತಿರಲೊಬ್ಬ ಶರಣರು ಬಂದರು. ಶಿವಪೂಜೆಯನ್ನು ಮಾಡಿರೆನಲು ನನಗೆ ತುಂಬೆಯ ಹೂವಿನ ನಿಯಮವಿದೆ. ಅದಿಲ್ಲದೆ ಶಿವಾರ್ಚನೆ ಊಟೋಪಚಾರಗಳು ಸಾಧ್ಯವಿಲ್ಲವೆಂದರು. ಬೇಸಿಗೆಯಾದ್ದರಿಂದ ತುಂಬೆಯ ಹೂ ಒಂದೂ ದೊರೆಯಲಿಲ್ಲ. ಈಗ ಸರಿರಾತ್ರಿ, ಬಿಲ್ವ ಪತ್ರಾದಿಗಳಿಂದ ನಿಯಮವನ್ನು ನೆರವೇರಿಸಬೇಕೆಂದು ಭಕ್ತರು ಬೇಡಿಕೊಂಡರು. ಆದರೂ ಶರಣರು ಅದಾಗದೆನ್ನಲು ಸಿದ್ಧ

ಲಿಂಗೇಶ್ವರನು ಆ ಶರಣರ ಮನದಣಿಯುವಂತೆ ತುಂಬೆಹೂವಿನ ಮಳೆಗರೆದನು. ಆಗಲಾ ಶರಣರು ಆನಂದದಿಂದ ಶಿವಪೂಜೆ ಮಾಡಿ ಶಿವಶರಣರ ಜೊತೆ ಕುಳಿತು ಷಡ್ರಸ ಭೋಜನವನ್ನು ಮಾಡಿ ಸಂತೃಪ್ತರಾದರು. ಇದೊಂದು ಹೊಸ ಮಹಿಮೆಯೆಂದು ದೇವತೆಗಳು ಕೊಂಡಾಡಿದರು.

ಕರೆದವರ ಬಳಿಗೆ ಮಾಯದಿಂದ ಸುಳಿಯುತ್ತ ಒಂದೇ ದಿನ ರಾತ್ರಿಯಲ್ಲಿ ರಾಯದುರ್ಗ, ಚನ್ನರಾಯಪಟ್ಟಣ, ಗೂಳೂರು ಗ್ರಾಮಗಳಲ್ಲಿ ಗೋಚರಿಸಿ ಕಡಬವನ್ನು ಹೊಕ್ಕು ನಿಟ್ಟೂರು ಲಿಂಗದ ಗುಡಿಯನ್ನು ಸೇರಿ ಮುದಿಯ ಭೂಪಾಲಕನಿಗಿ ಭಸಿತವನ್ನು ಕಳುಹಿಸಿದರು. ಅದನ್ನು ಕಂಡ ಕೂಡಲೇ ಬಂದು ಪಾದಕ್ಕೆರಗಿ ನಡೆಮುಡಿಹಾಸಿ ಚಾಮರ ಬೀಸಿ ಧೂಪವನ್ನು ಸೂಸಿ ವಾದ್ಯವನ್ನು ಘೋಷಿಸುತ್ತಾ ಸಂಭ್ರಮದಿಂದ ಪಟ್ಟಣಕ್ಕೆ ಕರೆತಂದು ಮೆರವಣಿಗೆ ಮಾಡಿಸಿ ಪರ್ವವನ್ನು ಮಾಡಿದನು. ಆತನ ಭಕ್ತಿಗೆ ಮೆಚ್ಚಿ ಬದುಕೆಂದು ಹರಸಿ ಸಿದ್ಧಲಿಂಗನು ಕಾಣದವನಂತೆ ಜಂಗಮರೊಡನೆ ಇರುತ್ತಿದ್ದನು.

ಶಿವರಾತ್ರಿಯ ದಿನ ಸಿದ್ಧಲಿಂಗನು ನಮ್ಮೂರಲ್ಲಿದ್ದನು. ತಮ್ಮೂರಲ್ಲಿದ್ದನೆಂದು ಜಂಗಮರು ಮೇಲ್ಗಟ್ಟಿ ಹೇಳುತ್ತಿದ್ದರು. ಅಂದರೆ ಇವರ ಮಹಿಮೆ ಭಕ್ತಿ ವಾತ್ಸಲ್ಯ ಧರ್ಮೋತ್ತೇಜನವನ್ನು ಏನೆಂದು ಹೇಳಲಿ, ಆ ಹೆಬ್ಬೂರಿನ ಪ್ರಜೆಗಳಿಗೆ ಪರಿಣಾಮವನ್ನು ಕೊಟ್ಟು ಅಲ್ಲಿಂದ ಕುಣಿಗಲ್ಲಿಗೆ ಬಂದನು. ಕುಣಿಗಲ್ಲಿನ ಲಿಂಗಣ್ಣೊಡೆಯನೆಂಬ ಕೃತಘ್ನನು ಬಂದು ಸಿದ್ಧೇಶ್ವರನಿಗೆ ಬಿನ್ನಹವನ್ನೊಪ್ಪಿಸಿದನು. ಕೆಸರಿನಲ್ಲಿ ಹೂಳಿಸಿಟ್ಟಿದ್ದ ಎರಡು ಸಾವಿರ ಎಳೆನೀರುಗಳನ್ನು ತಂದು ಇದರಿಂದ ಶೀತವೇರಿ ಸಿದ್ಧನು ರೋಗಿಷ್ಟನಾಗುವುದಲ್ಲದೆ ಇಷ್ಟು ಎಳೆ ನೀರು ಕುಡಿಯದೇ ಸೋಲುವನೆಂದು ಕೆಡಕನ್ನು ಯೋಚಿಸಿ ಸಲಿಸಬೇಕೆಂದು ಮುಂದಿಟ್ಟನು. ಇಷ್ಟು ಎಳೆನೀರುಗಳನ್ನು ದೃಷ್ಟಿಯಿಂದ ಶಿವಾರ್ಪಿತ ಮಾಡಲು ಎಲ್ಲವೂ ಬರಿದಾದವು. ಉಳಿದ ಕಾಯಿಯನ್ನು ಭೂತಗಳಿಗೆ ತಿನ್ನುವಂತೆ ಹೇಳಲು ಇಟ್ಟಿದ್ದರ ಎಳೆನೀರು ಕಡೆಯಲ್ಲಿ ಕಡಲದಂತೆ ಬರಿಯ ಸಿಪ್ಪೆಯಾಗುಳಿದವು. ಅನಂತರ ಕಾಯಿಗಳನ್ನು ಪರೀಕ್ಷಿಸಲು ಆಶ್ಚರ್ಯಪಟ್ಟು ಇನ್ನೂ ಕೆಡುಕನ್ನೇ ಆಲೋಚಿಸುತ್ತಿರಲು ಭೂತಗಳು ಬಂದು ಅವನನ್ನು ಚೆನ್ನಾಗಿ ತುಳಿದು ಹೆಣಗಿಸಿದವು. ಲಿಂಗಣ್ಣೊಡೆಯನು

ಸ್ತಂಭನಾಗಿ ಕೈಕಾಲು ಅಲುಗದೆ ಹಂಬಲಿಸುತ್ತಾ ಜ್ಞಾನಹುಟ್ಟಿ ನಾನು ಹೆಂಬೇಡಿ ತಪ್ಪುಮಾಡಿದೆ. ನನ್ನನ್ನು ಕಾಯಿಯೆಂದು ಬೇಡಿಕೊಳ್ಳಲು ಸಿದ್ಧೇಶನು ನಿನ್ನ ಪಾಪವನ್ನು ಕಳೆದುಕೊಳ್ಳಬೇಕಾದರೆ ಹನ್ನೆರಡು ಖಂಡುಗ ಅಕ್ಕಿಯ ಅನ್ನವನ್ನು ಮಾಡಿಸಿ ಸುರಿಸೆಂದನು. ಅದರಂತೆ ಅನ್ನ ಮಾಡಿಸಿ ರಾಶಿಹಾಕಲು ಭೂತಗಳು ಉಂಡು ತೃಪ್ತಿಗೊಂಡವು. ಆಗ ಅವನಿಗೆ ಸ್ತಂಭವು ಮಾಯವಾಯಿತು. ಆಗ ಸಿದ್ಧೇಶನು ಇನ್ನೆಂದಿಗೂ ಜಂಗಮರ ಮಠಗಳ ಬಾಗಿಲಿಗೆ ಹೋಗಬಾರದೆಂದು ಶಪಥಮಾಡಿದನು.

ಗೂಬೆಯು ಸೂರ್ಯನನ್ನು ಕಂಡು ಕುಳಿತರೆ ಸೂರ್ಯನು ಅವನ ಗವಿಗೆ ಹೋಗದಿರುವುದು ಕ್ಷೇಮವಲ್ಲವೇ ? ಹೀಗಾಗಿ ಅಲ್ಲಿಂದ ಸಿದ್ಧಲಿಂಗನು ಹೊರಟು ನೀಲತ್ತಳ್ಳಿಯ ಗುಹೆಯ ಕಡೆ ತೆರಳಿದನು.

ಜಂಗಮರೊಡಗೂಡಿ ನೀಲತ್ತಳ್ಳಿಯಲ್ಲಿ ಪಟ್ಟಣಕ್ಕೆ ಪಂಚರಾತ್ರಿ ಸಂಚರಿಸಿ ಗ್ರಾಮಕ್ಕೆ ಏಕರಾತ್ರಿಯೆಂಬ ಒಂದು ರಾತ್ರಿಯಿದ್ದು ಅಲ್ಲಿನ ನಚ್ಚಿನ ಭಕ್ತರಲ್ಲೆಲ್ಲಾ ಶಿವತತ್ವದ ಜ್ಯೋತಿಯನ್ನು ಬೆಳಗಿಸಿ ಮುಂದುವರೆದನು. ಕರ್ನಾಟಕ ದೇಶದಲ್ಲಿ ಅಲ್ಲಿಂದಲ್ಲಿಗೆ ಜಾತ್ರೆ ಪರ್ವಗಳು ನಡೆಯಲಾರಂಭಿಸಿದುವು. ಅವನ್ನೆಲ್ಲಾ ನೋಡುತ್ತಾ ಹುಲಿಯೂರು ದುರ್ಗವನ್ನು ಬಂದು ಮುಟ್ಟಿದರು. ಜಂಗಮರು ಒಂದು ಕಲ್ಲರೆಯನ್ನು ತೋರಿಸಿ ಇಲ್ಲಿ ಗಂಗೆಯನ್ನು ಬರಿಸಬೇಕೆನಲು ಅವರ ಇಷ್ಟದಂತೆ ಬರಿಸಲು ಅದಕ್ಕೆ ಸಿದ್ಧಗಂಗೆಯೆಂದು ಹೆಸರಾಯಿತು. ಆ ಬೆಟ್ಟದಲ್ಲಿ ತಪಸ್ವಿಗಳು ವಾಸಿಸುತ್ತಿರುವರು. ಊರಿದ್ದಲ್ಲಿ ಹೊಲಗೇರಿ ಎಂಬಂತೆ ಸಜ್ಜನರೂ ದುರ್ಜನರೂ ಬೆರೆದು ವಾಸಿಸುತ್ತಿರುವರು. ಅವರ ನಡುವೆ ಒಬ್ಬ ಶಿವಭಕ್ತನು ಪಾರಮಾರ್ಥಿಕವಾಗಿ ಹರಕುಮುಳ್ಳು ಮೆಳೆಯಲ್ಲಿ ಸುಮಧುರವಾದ ಜೇನಿರುವಂತೆ ವಾಸವಾಗಿರುವನು. ಆ ಶಿವಯೋಗಿ ಎಂಬುವನು ಕಾಲವಶನಾಗಲು ಪತಿವ್ರತೆಯಾದ ಅವನ ಹೆಂಡತಿಯು ಶಿವಶಿವಾ ಎಂದು ದುಃಖಿಸುತ್ತಾ ಶವವನ್ನು ಶೃಂಗರಿಸಿ ಬಸವ ಗೋವುಗಳನ್ನು ಬಿಟ್ಟು ವಿಭೂತಿ ವೀಳ್ಯವನ್ನು ಕೊಟ್ಟು ಶಿವಪಾದವನ್ನು ಸೇರೆಂದು ವಿಮಾನದಲ್ಲಿ ಕೂರಿಸಿದಳು. ನಾನಾ ಜನರು ದುಃಖಿಸುತ್ತಾ ಶವವನ್ನು ಸ್ಮಶಾನಕ್ಕೆ ತರುತ್ತಿದ್ದರು. ಮೃತ್ಯುಂಜಯನೂ ದೀನಪಾಲಕನೂ ಆದ

ಸಿದ್ಧಲಿಂಗೇಶ್ವರನು ಕರಡಿಯ ವಾದ್ಯ, ನಂದಿಯ ಧ್ವಜ, ಕಹಳೆ ಸಿನಾದದೊಡನೆ ಜಂಗಮರ ಸಮೇತ ಎದುರಾದನು. ಅವನನ್ನು ಕಂಡು ಹಂಬಲಿಸುತ್ತಿದ್ದ ನಾರಿಯು ಭಕ್ತಿಯಿಂದ ಪಕ್ಕನೆ ನಮಸ್ಕರಿಸಿದಳು. ಕೂಡಲೆ ಸಿದ್ಧಲಿಂಗನು ಮಗಳೇ ಮುತ್ತೈದೆಯಾಗು ಎಂದು ಹರಸಿದನು. ಅದಕ್ಕವಳು ಕಕ್ಕಾಬಿಕ್ಕಿಯಾಗಿ, ಸ್ವಾಮಿ ! ಕೈಯಹುಣ್ಣಿಗೆ ಕನ್ನಡಿಯೇಕೆ ? ಪತಿಯು ಹೋದ ಸತಿಗೆ ಮುತ್ತೈದಿತನವೆಲ್ಲಿಯದೊಡೆಯಾ ? ಎಂದು ಶೋಕಿಸಿದಳು. ಸಿದ್ಧೇಶನು ಮಗಳೇ, ಶಿವನು ನಿನಗೆ ಅಗಣಿತವಾಗಿ ಮುತ್ತೈದಿತನವನ್ನು ಕೊಟ್ಟನು. ನೋಡು ನಿನ್ನ ಪತಿಗೆ ಪ್ರಾಣ ಬಂದಿದೆ, ಭಯಪಡಬೇಡವೆಂದನು. ಬಡತನ ಅಳಿದು ಸಿರಿತನ ಬಂದಂತೆ ರವಿಯು ಹುಟ್ಟಿ ಕತ್ತಲಳಿಯುವಂತೆ ಶಿವನ ವಾಕ್ಯದಿಂದ ಆವರಿಸಿದ್ದ ಮೃತ್ಯುವು ನಾಶವಾಗಿ ಶಿವಯೋಗಿಯು ಚಿರಂಜೀವಿಯಾದನು.

ಮೃತ್ಯುಂಜಯನ ವಾಕ್ಯಾಂಜನೆಯಿಂದ ಬದುಕಿದ ಪತಿಯನ್ನು ಕಂಡು ಸಂತೋಷಪಟ್ಟು ಕೈಹಿಡಿದು ವಿಮಾನದಿಂದೆಬ್ಬಿಸಿ ಸಿದ್ಧೇಶ್ವರನಿಗೆ ನಮಸ್ಕರಿಸಿ ಸ್ತುತಿಸಿದಳು. ಅಲ್ಲಿದ್ದವರೆಲ್ಲರೂ ಶವಕ್ಕೆ ಜೀವಬಂದಿತು, ವಿಧವೆ ಮುತ್ತೈದೆಯಾದಳೆಂದು ಆಶ್ಚರ್ಯಪಟ್ಟರು. ನಮಿಸಿದ ದಂಪತಿಗಳನ್ನು ತೆಗೆದಪ್ಪಿ ಹರಸಿದನು. ಅಲ್ಲಿಂದ ಮನೆಗೆ ಬಂದನು. ದೇವತೆಗಳು ಹೂಮಳೆಗರೆದರು.

ಆ ಹುಲಿಯೂರು ದುರ್ಗದಲ್ಲಿ ಹರಶರಣರ ಮನೆಯಲ್ಲಿ ಸಿದ್ಧೇಶ್ವರನು ಹಲವು ವಿಧವಾದ ಉತ್ಸವಗಳನ್ನು ಕೈಗೊಳ್ಳುತ್ತಿರಲು ನಿಂದಕರು ಚೇಷ್ಟೆ ಮಾಡಿದರು. ಪರದೇಶಿ ಜಂಗಮನು ಬರಲು ಸತ್ತವನನ್ನು ಬದುಕಿಸಿದನೆಂದು ಬರಿಯ ಢಂಬವನ್ನು ಮಾಡಿದನೆಂದು ಹಾಸ್ಯಮಾಡಿ ಚೇಷ್ಟೆ ನಡೆಸಿದರು. ಹಣೆಬರಹವನ್ನು ತಪ್ಪಿಸಲು ಬ್ರಹ್ಮ, ವಿಷ್ಣು, ರುದ್ರರಿಗೂ ಅಸಾಧ್ಯ. ಒಣಗು ಜಂಗಮನು ಬಂದು ಶವಕ್ಕೆ ಪ್ರಾಣವನ್ನು ಕೊಟ್ಟನೆಂಬುದು ಲೋಕದಲ್ಲಿ ನಿಜವೇ ? ಬದುಕಿದ್ದವನನ್ನು ವಿಮಾನದಲ್ಲಿಟ್ಟು ಸತ್ತನೆಂದು ದುಃಖಿಸುತ್ತಾ ಇದಿರಾಗಿ ಬಂದ ಈತನು ಪ್ರಾಣವನ್ನು ಕೊಟ್ಟನೆಂದು ಹೇಳುತ್ತಿದ್ದಾರೆ. ಗಾರುಡದ ಇಂದ್ರಜಾಲದ ಕಣ್ಣು ಕಟ್ಟಿನ ವಿದ್ಯೆಗಳಿಗಿಂತಲೂ ಸತ್ತವನನ್ನು ಬದುಕಿಸುವುದು ಅಧಿಕ. ಅರುವತ್ತುನಾಲ್ಕು ವಿದ್ಯೆಗಳನ್ನು ಕಲಿಯಬಹುದು.

ಸತ್ತವರನ್ನು ಬದುಕಿಸುವುದು ಅಸಾಧ್ಯ. ಈ ವಿದ್ಯೆಯನ್ನು ಕಂಡೆವೆಂಬವರು ಠಕ್ಕರೆಂದು ನಿಂದಿಸಿದರು.

ಆ ಕುಹಕರೆಲ್ಲರೂ ಸೇರಿ ಮರವೇರಿ ಬುಡವನ್ನು ಕಡಿಯುವವರಂತೆ ಒಂದು ಕುಚೇಷ್ಟೆಯನ್ನು ರಚಿಸಿದರು. ತಮ್ಮಲ್ಲಿ ಬಡವಳಾದ ಪರಮಾಂಗಿಯೆಂಬು ವಳನ್ನು ಕರೆದು ನಮ್ಮ ಮಾತನ್ನು ಕೇಳಿದರೆ ನಿನಗೆ ಬೇಕಾದಷ್ಟು ಸಿರಿಯನ್ನು ಕೊಡುತ್ತೇವೆ. ನಮ್ಮ ಭುವನೇಶ್ವರಿಗಿಂತಲೂ ಶಿವನನ್ನು ಅಧಿಕವನ್ನಾಗಿ ಮಾಡಲು ಬರಿಯ ಢಂಬವನ್ನು ತೋರಿಸಿರುವರು. ಯಮನು ಮುನಿದರೆ ಸಲಹಿದೆನೆಂಬ ಈ ಜಂಗಮನ ಗರ್ವವನ್ನು ಇಳಿಸಬೇಕು. ಇಲ್ಲದಿದ್ದರೆ ನಮ್ಮ ಮತವು ಭಸ್ಮವಾಗುವುದು. ಶಿವಯೋಗಿಯ ಹೆಂಡತಿಯು ಮಾಡಿದಂತೆ ನೀನೂ ಮಾಡು. ನಿನ್ನ ಗಂಡನ ಪ್ರಾಣಕ್ಕೆ ನಮ್ಮ ಪ್ರಾಣ ಕೊಡುತ್ತೇವೆಂದು ಅವಳ ಕಾಲಿಗೆ ಬಿದ್ದರು. ನಮ್ಮ ಮತವನ್ನು ಉಳಿಸೆಂದು ವಸ್ತ್ರಾಭರಣ, ಧನಧಾನ್ಯ ಳಗನ್ನಿತ್ತು ಒಪ್ಪಿಸಿದರು. ಅವರ ನುಡಿ ಸಿಂಹಗರ್ಜನೆಯಾಗಿ ಬದುಕಿರುವ ಪತಿ ಸತ್ತನೆಂಬ ಅಶುಭವನ್ನು ನುಡಿದು ಮುತ್ತೈದಿತನಕ್ಕೆ ಕಳಂಕ ಹಚ್ಚಲಾರದೆ ನಾನಾವ ಪಾಪ ಮಾಡಿದ್ದೆನೋ ಬ್ರಹ್ಮನು ತನ್ನ ಹಣೆಯಲ್ಲಿ ಹೀಗೇಕೆ ಬರೆದನೋ ಎಂದು ಚಿಂತಿಸಿದಳು.

ಚಿಂತಿಸುವ ಹೆಂಡತಿಯನ್ನು ನೋಡಿ ಅವಳ ಗಂಡನು ಏಕಾಂತದಲ್ಲಿ ಕರೆದು ಬಹಳ ಭಾಗ್ಯವು ಇದಿರಾಗಲು ಅದನ್ನು ಒದ್ದು ನೂಕಬಹುದೆ? ಕುಲದವರ ಮಾತು ಕೇಳಿ ಒಪ್ಪಿಕೊಂಡರೆ 'ಪುತ್ರಾತಿಪುತ್ರರು ತಿಂದರೂ ಮುಗಿಯದಷ್ಟು ಹೊನ್ನು ಬರುತ್ತದೆ ಎಂದನು. ಅದಕ್ಕವಳು ಮುತ್ತೈದೆಯಾದ ನಾನು ಗಂಡನ ಅಪಶಕುನವನ್ನು ಬಯಸಲು ಸಾಧ್ಯವಿಲ್ಲವೆಂದಳು. ಆಗಲವನು ಉಣಲುಡ ಲಿಲ್ಲದಂತೆ ದಾರಿದ್ರ್ಯವು ಗಂಟುಬಿದ್ದಿರುವುದು, ಲಕ್ಷ್ಮಿಯು ತಾನಾಗಿ ಹಿಡಿ ಹಿಡಿಯೆಂದು ಅಷ್ಟೈಶ್ವರ್ಯವನ್ನು ಕೊಡಲು ಮುಂದೆ ಬಂದಿರುವಳು. ನೀನು ಅದನ್ನು ಬೆಡಗಿನಿಂದ ನೋಡಬೇಕು. ಹಿರಿಯರ ಮಾತು ಮೀರಿದರೆ ಕುಲದಲ್ಲಿ ಕೂಡರು. ಆಗ ನಮಗೆ ಈಗಿರುವ ಅನ್ನವೂ ಸಿಗಲಾರದು. ನೀನು ಒಪ್ಪಿ ಕೊಂಡು ಈಗ ಕೊಟ್ಟೊಡವೆ ದಕ್ಕಬೇಕಾದರೆ ಬರಿಯ ಢಂಬವನ್ನು ನಟಿಸುತ್ತಿರು ಎಂದನು.

ಪರಮಾಂಗಿಯು, ಪತಿದೇವಾ ! ಮೂರು ದಿನದ ಬಾಳಿಗೆ ಅಪಕೀರ್ತಿ ಯನ್ನೇಕೆ ಪಡೆಯಬೇಕೆನ್ನಲು, ದಾರಿದ್ರ್ಯವನ್ನು ಅನುಭವಿಸುವುದಕ್ಕಿಂತಲೂ ಒಂದೇ ದಿನದ ಭೋಗವೇ ಸಾಕು. ಪರಲೋಕದ ಗತಿಯೆಂದರೆ ಕೀರ್ತಿ ಮತ್ತು ಭೋಗ. ಅನ್ನಕ್ಕೆ ದಾರಿಯಿಲ್ಲದ ಈ ಭೋಗವು ನನಗೆ ಬೇಡ. ಭಂಡ ತನದಿಂದಲಾದರೂ ಸುಖವುಂಡುದೇ ಬಂತು. ಅಟ್ಟಾಡಿ ಅಳಿಸುತ್ತಿರುವ ಈ ದಾರಿದ್ರ್ಯವನ್ನು ನುಣ್ಣಗೆ ಕಳೆಯಬಹುದು. ಅನ್ನವೇ ಜೀವನ. ಅನ್ನವೇ ಯೌವ್ವನ, ಅನ್ನವಿಲ್ಲದಿದ್ದರೆ ನಿನಗೆ ನಾನು, ನನಗೆ ನೀನು ಇರುವುದಿಲ್ಲಾ ಎಂದ ಗಂಡನ ಮಾತು ಕೇಳಿ ಪರಮಾಂಗಿ ಮುನಿಸಿಕೊಂಡಳು. ನೀನು ನನ್ನ ಮಾತು ಮೀರಬೇಡವೆಂದು ಕಾಲು ಕಟ್ಟಿಕೊಂಡನು. ಆಗಲವಳು ಅಪರಾಧ ವಾಯಿತೆಂದು ಬೆದರಿ ಅವನಿಗೆ ನಮಿಸಿ ನೀವು ಹೇಳಿದಂತೆ ನಡೆಯುವೆ ನೆಂದಳು.

ಪತಿಯೇ ಶ್ರೀಗುರುವು, ಪತಿಯೇ ಬಂಧುವು, ಪತಿಯೇ ಪ್ರಾಣಲಿಂಗ, ಇಹಪರಗಳೆರಡಕ್ಕೂ ಪತಿಯೇ ಸದ್ಗತಿದಾಯಕವೆಂದು ನಂಬಿದ ಪತಿವ್ರತೆ ಯಾದ ಪರಮಾಂಗಿಯು ಗಂಡನ ಹಿಂದೆ ತಮ್ಮವರೆಡೆಗೆ ಬಂದು ನಮಸ್ಕರಿಸಿ ಕಂಡದ್ದು ನುಡಿಯುವೆನೆಂದಳು. ಅವರು ಮೇಲೆ ಮೇಲೆ ನಿಯಮಗಳನ್ನೊರಿ ಸುತ್ತಿರಲು ಬೇಸರಗೊಂಡು ಇವರು ಸಾಮಾನ್ಯರಲ್ಲ. ನೀವು ದಾರಿಯಲ್ಲಿ ಹೋಗುವ ಹುಲಿಯನ್ನು ಕೆಣಕಿದ ಗೋವಿನಂತಾಗುವಿರಿ. ಹಿಂದೆ ದಕ್ಷನು ಶಿವನನ್ನು ನಿಂದಿಸಿ ಏನನ್ನನುಭವಿಸಿದನು ? ಈ ಮಧ್ಯೆ ಕೆಡುವವಳು ನಾನು. ಶಿವಭಕ್ತರು ಡಂಭಗಾರರಲ್ಲ. ನಮಗೆ ನಿಂದೆಯೂ ಬೇಡ. ನಿಂದೆ ಮಾಡಿದ ಪಾಪವೂ ಬೇಡ ಎಂದಳು. ಆಗ ಅವರೆಲ್ಲರೂ ಸೇರಿ ಮಗಳೇ, ನಿನಗೀ ವಿಚಾರವೇಕೆ ? ಸೇರಿದ ಗ್ರಹವನ್ನು ಹೊರಡಿಸದಿದ್ದರೆ ರೋಗ ವಾಸಿಯಾಗುವು ದಿಲ್ಲ. ದಿನೇ ದಿನೇ ಬಲಿಯುತ್ತದೆ. ಹೊಟ್ಟೆಯಲ್ಲಿ ಹೆಚ್ಚಿರುವ ರೋಗವನ್ನು ಕಡಿಮೆ ಮಾಡಿದರೆ ದೋಷವಿಲ್ಲ. ಮನೆಯೊಳಗಿರುವ ಹಾವನ್ನು ಹೊಡೆದು ಹಾಕದಿದ್ದರೆ ಎಲ್ಲರನ್ನು ಕಚ್ಚುವುದು. ಮುಳುಗುವ ಹಡಗವನ್ನು, ಬಲಿವ ಶತ್ರುವನ್ನೂ ಆ ಗಳಿಗೆಯಲ್ಲಿಯೇ ಕಳೆಯದಿದ್ದರೆ ಕೇಡಾಗುವುದು. ಒಡೆವ ಕೆರೆಯನ್ನು, ನಷ್ಟವಾಗುವ ಕುಲವನ್ನು, ಕೆಡುತ್ತಿರುವ ಮನೆತನ

ವನ್ನೂ ತನ್ನನ್ನು ಮೊರೆಹೊಕ್ಕವರನ್ನೂ ಬಿಡದೆ ಕೈಹಿಡಿದರೆ ಧರ್ಮ ಬರುವದು. ಸಾವಿರ ಸುಳ್ಳು ಹೇಳಿ ಒಂದು ಲಗ್ನ ಮಾಡಬಹುದು. ಅದರಿಂದ ಧರ್ಮವುಂಟು. ಬಹು ದುಷ್ಟನಾದ ಪಾಪಿಯನ್ನು ಕೊಂದರೆ ದೋಷವಿಲ್ಲ. ನಮ್ಮ ಮತವೆಂಬ ಮರಕ್ಕೆ ಕೊಡಲಿಯಾಗಿ ಬಂದಿರುವ ಜಂಗಮನಿಗೆ ತಕ್ಕ ಬುದ್ಧಿ ಕಲಿಸಲೇಬೇಕು ಎಂದು ಆಗ್ರಹಿಸಿದರು. ಅವಳನ್ನು ಒಪ್ಪಿಸಿದರು. ಮಾರಿಯನ್ನು ಕೂಗಿ ಕರೆದಂತೆ ಆಯಿತು. ತನ್ನ ಬಿಳುಪೇ ಬಿಳುಪೆಂಬ ಕೊಕ್ಕರೆಯಂತೆ ಅಹಂಭಾವ ತಾಳಿ ಬುದ್ಧಿಗೆಟ್ಟರು. ಬೆಳಗುವ ದೀಪವನ್ನು ಆರಿಸುವೆನೆಂದು ಹಾರಿ ಬಂದು ಮುಸುಕುವ ಪತಂಗಗಳಂತೆ ಆ ಕುಹಕಿಗಳು ಸಿದ್ಧೇಶನನ್ನು ತೇಜೋವಧೆ ಮಾಡಲು ಹವಣಿಸಿದರು.

ಆ ಗುಂಪಿಗೆ ಗುಂಪೇ ಸೇರಿ, ಪರಮಾಂಗಿಯ ಗಂಡನನ್ನು ಕಟ್ಟಿ ಬಿಗಿದು ಮಹಾಮೃತ್ಯುವಿನಿಂದ ಅಳಿದನೆಂದು ಹೊತ್ತು ತಂದರು. ಸಿದ್ಧೇಶನು ಮನೆಯಿಂದ ಬರುವ ವೇಳೆಗೆ ಸರಿಯಾಗಿ ಅಳುತ್ತಾ ಎದುರಿಗೆ ಬಂದರು. ಆ ಪರಮಾಂಗಿಯು ಎದೆಗೆಟ್ಟು, ಅಳುತ್ತಾ ನಾನು ಪಡೆದದ್ದು ಹೀಗಾಯಿತೆಂದು ಸಿದ್ಧಲಿಂಗೇಶನ ಪಾದಗಳಿಗೆರಗಿದಳು. ಆಗ ಅವಳ ಮುಖನನ್ನು ನೋಡಿ ಸಿದ್ಧಲಿಂಗೇಶ್ವರನು ನೀನು ಪಡೆದುದು ಹೀಗಾಯಿತೆಂದನು. ಆ ಕೂಡಲೇ ಅವಳ ಗಂಡನು ಮಲಗಿದಲ್ಲಿಯೇ ಸತ್ತನು. ಅವನನ್ನು ನಗರದಲ್ಲಿ ಮೆರೆಸಿ ತಂದು ನೋಡಲು ಹಾಸ್ಯವು ನಿಜವಾಗಿತ್ತು. ಎಬ್ಬಿಸಲು ಏಳಲಿಲ್ಲ, ಮಾತಾಡಲಿಲ್ಲ. ಕೊರಡಾಗಿ ಮಲಗಿರುವುದನ್ನು ಕಂಡು ಕಡೆಗೆ ಹಣೆಬರಹ ತೀರಿತೆಂದು ನಿರ್ಧರಿಸಿದರು. ಹುಚ್ಚನಿಟ್ಟ ಬೆಂಕಿಯಾದರೇನು ? ಮನೆಯು ಬೇಯದಿರುವುದೇ ? ತಮ್ಮ ಕುಯುಕ್ತಿಯು ಪರಮಾಂಗಿಯ ಗಂಡನನ್ನು ಕೊಂದಿತು. ಇನ್ನು ಇದರಿಂದ ತಮ್ಮ ಮತವು ನಿರ್ನಾಮವಾಗುವುದೆಂದರಿತರು. ಅತ್ತ ಪರಮಾಂಗಿಯು ಶಿವನೊಡನೆ ವಾದಿಸಿ ನನ್ನ ಗಂಡನನ್ನು ಕೊಂದಿರಿ ಎಂದು ಅತಿಯಾಗಿ ದುಃಖಿಸಿ ಹೊರಳಾಡಿದಳು. ಪತಿಯ ಪ್ರಾಣವನ್ನು ಕೊಡಿ ಇಲ್ಲದಿದ್ದರೆ ಪತಿಯು ಹೋದಂತೆ ನನ್ನನ್ನು ಕೊಲ್ಲಿರಿ ಎಂದು ಅವಳು ಅವರ ಮೇಲೆ ಆಣೆಯಿಟ್ಟು ಅಳುತ್ತಿರಲು ಅವರಿಗೆ ಬುದ್ಧಿ ಬಂದಿತು.

ಪರಮಾಂಗಿಯ ಮಾತನ್ನು ಮೊದಲೇ ಕೇಳದೆ ಗರ್ವದಿಂದ ಮೂರ್ಖರಾದೆವು. ಆ ಸಿದ್ಧನ ಚರಣಗಳನ್ನೇ ನಂಬಿ ಬದುಕುವೆವೆಂದು ರನ್ನ ಹೊನ್ನುಗಳನೇಕವನ್ನು ತೆಗೆದುಕೊಂಡು ಹಣ್ಣು, ದವನ, ಧೂಪ ಸಹಿತ ಕಾಣಿಕೆಯಿಟ್ಟು ಪರಮಾಂಗಿಯ ಸಹಿತ ನಮಸ್ಕರಿಸಿ ಕಾಪಾಡಬೇಕೆಂದು ಧ್ಯಾನಿಸಿದರು. ಪರಮಾಂಗಿಯು ತನ್ನಾಳ್ದವನ ಪ್ರಾಣವನ್ನು ಕೊಟ್ಟು ಓಲೆ ಭಾಗ್ಯವನ್ನು ಕೊಟ್ಟು ಕರುಣಿಸೆಂದು ಪಾದಕ್ಕೆ ಭಕ್ತಿಯಿಂದೆರಗಿ ದುಃಖಿಸುತ್ತಾ ಹೊರಳಾಡಿದಳು. ಸೃಷ್ಟಿ ಸ್ಥಿತಿ ಲಯ ಕಾರಣಕರ್ತ ಪರಬ್ರಹ್ಮಾ ನಿನ್ನೊಡನೆ ಚೇಷ್ಟೆ ಮಾಡಿ ಭ್ರಷ್ಟರಾದೆವು. ನರಕಿಯನ್ನು ಪಾವನ ಮಾಡುವುದೇ ನಿಮ್ಮ ಬಿರುದು, ನಾವು ಅರಿದರಿದೂ ಅಜ್ಞಾನಿಗಳಾದೆವು. ನಮ್ಮನ್ನು ಕರುಣದಿಂದ ಕಾಯಿಯೆಂದು ಬೇಡಿದರು. ಆಗ ಅವರಲ್ಲಿ ಕನಿಕರ ಹುಟ್ಟಿ ನೀವು ಮಾಡಿದ ಕರ್ಮ ನಿಮಗುಂಟಾದರೆ ನಾನೇನು ಮಾಡುವುದಿದೆ ಎಂದನು. ನಮ್ಮನ್ನು ಪಾಲಿಸಲು ನೀನಲ್ಲದೆ ಬೇರಿಲ್ಲವೆಂದು ಬೇಡಲು ಸಿದ್ಧಲಿಂಗೇಶ್ವರನು ಕರಗಿ ಮರುಗಿ ತರುಣಿಗೆ ಮುತ್ತೈದಿತನವನ್ನು ಕೊಟ್ಟನು. ಅವಳ ಗಂಡನಿಗೆ ಪ್ರಾಣ ಬಂದಿತು. ಅವನೆದ್ದು ಸಿದ್ಧಲಿಂಗೇಶನ ಪಾದಗಳಿಗೆರಗಿ ಪರಮಾತ್ಮ, ಸರ್ವೇಶ್ವರಾ, ಮೃತುಂಜಯಾ ಎಂದು ಕೊಂಡಾಡಿದನು.

ಉಳಿದವರೆಲ್ಲಾ, ನಮಗೆ ಈ ಮಾರ್ಗವನ್ನು ಬಿಡಿಸಿ ನಿನ್ನ ಶಿಷ್ಯರನ್ನಾಗಿ ಮಾಡಿಕೊಳ್ಳೆಂದು ನಮಸ್ಕಾರ ಹಾಕಿದರು. ಸಿದ್ಧೇಶನು ನಸುನಗುತ್ತಾ ಅವರಿಗೆಲ್ಲಾ ಭಸಿತ ರುದ್ರಾಕ್ಷಿ ಮಾಲೆಗಳನ್ನು ಧರಿಸಿ ಲಿಂಗದೀಕ್ಷೆಮಾಡಿ ಅನುಗ್ರಹಿಸಿದನು. ದೇವತೆಗಳು ಉಘೇ ಎಂದರು. ಪರಮಾಂಗಿಯನ್ನು ತಲೆದಡವಿ ನೀನು ಪತಿವ್ರತೆಯಾಗಿ ಬಹುಕಾಲ ಬಾಳೆಂದು ಹರಸಿ ಅಲ್ಲಿಂದ ಹೊಲಗುಂದದ ಮಾಯಾದೇವಿಯ ಆಲಯದ ಕಡೆಗೆ ನಡೆದನು.

ನಂದಿಯ ಧ್ವಜದೊಡನೆ ಶಿವಶರಣರ ಕೂಡ ಶಿವಸಿದ್ಧರು ಮಾಯಾದೇವಿಯ ದೇವಾಲಯವಿರುವ ಹೊಳಲುಗುಂದದ ಕಡೆಗೆ ಹೊರಟರು. ಎತ್ತ ನೋಡಿದರೂ ತರುಲತಾದಿ ಫಲವೃಕ್ಷಗಳ ವನ. ಪುಷ್ಪೋದ್ಯಾನಗಳ ಶೋಭೆಯು ಸಿದ್ಧರು ಬರುವರೆಂದು ಸಿಂಗರಿಸಿದಂತಿತ್ತು. ಹಣ್ಣಿನ ಗುತ್ತಿಗಳೂ, ಹೂವಿನ ಗೊಂಚಲಗಳೂ ನಯನ ಮನೋಹರವಾಗಿದ್ದವು. ಎಲ್ಲಿ

ನೋಡಿದರೂ ಶಿವಪೂಜಾರ್ಹವಾದ ಬಿಲ್ವಪತ್ರೆ, ಬನ್ನಿ, ಮರುಗ, ಕಗ್ಗೊರಲೆ, ಗರಿಕೆ ಮುಂತಾದ ಪತ್ರೆಗಳು ತುಂಬಿದವು. ಸಿದ್ಧೇಶ್ವರನು ಬರುವನೆಂದರಿತ ಜನರು ಅವನ ದರ್ಶನ ಮಾಡಿ ಧನ್ಯರಾಗಬೇಕೆಂದು ಹೆಂಡಿರು ಮಕ್ಕಳೊಡನೆ ಹೆಡಿಗೆ ಜಾತ್ರೆಯನ್ನು ನಡೆಸುತ್ತಾ ಪರಿಷೆ ಸೇರಿದವು. ಬರುವ ಸಿದ್ಧೇಶ್ವರನಿಗೆ ಧೂಪದ ಹೊಗೆ ಹಾಕಿ ದಾರಿಯುದ್ದಕ್ಕೂ ಹೊನ್ನು ರತ್ನದಾರತಿಗಳನ್ನು ಬೆಳಗಿದ ಸುಮಂಗಲೆಯರಿಗೆ ವರಗಳನ್ನೀಯುತ್ತಾ ದೇವಾಲಯಕ್ಕೆ ಬಂದನು.

ಜಯಗಂಟೆ ಶಂಖಧ್ವನಿಯಿಂದ ಹೂಮಳೆಯಲ್ಲಿ ಸಿದ್ಧಲಿಂಗೇಶನು ಚಂಡಿಪ್ರಚಂಡಿಗಳೊಂದು ಕಡೆ ಮನುಷ್ಯರೊಂದು ಕಡೆ ಹೊತ್ತಿರುವ ಪಲ್ಲಕ್ಕಿಯಲ್ಲಿ ಕುಳಿತು ಬರುವಾಗ ಸ್ತುತಿಪಾಠ ಹೇಳುತ್ತಿರುವವರೂ, ಭಾಗವತರೂ ತಂಬೂರಿಗಳನ್ನು ಮಿಡಿದು ರಾಗ ಪ್ರಬಂಧ ಗೀತೆಗಳಿಂದ ಶಿವನಾಮವನ್ನು ಹಾಡುತ್ತಿದ್ದರು. ಆಕಾಶದಲ್ಲಿ ಮನು ಮುನಿಗಳು ಭೂರುದ್ರರಾದ ಪರದೇಶಿ ಜಂಗಮರು ಗುರುಸಿದ್ಧೇಶನನ್ನು ಮಹಾದೇವಿಯ ಮನೆಗೆ ಭಿಕ್ಷಕ್ಕೆ ಬಂದನೆನ್ನುತ್ತಿದ್ದರು. ಪ್ರಮಥರೂಪಿನ ಶಿವಶರಣರೆಲ್ಲರೂ ಶಿವಾರ್ಚನೆ ಮಾಡಿ ಸಿದ್ಧನೊಡನೆ ಮಹಾದೇವಿಯ ಆಲಯಕ್ಕೆ ಬಂದರು.

ದೇವಿಯ ಆಲಯದ ಮುಂದೆ ಸಿದ್ಧೇಶ್ವರನು ಪಲ್ಲಕ್ಕಿಯಿಂದಿಳಿದು ರನ್ನದಾವುಗೆ ಮೆಟ್ಟಿ ಬಂದು ಭಿಕ್ಷಾ ಎಂದನು. ಜಂಗಿನ ಝಣತ್ಕಾರ, ಕೌಪೀನ, ಕಟಿಸೂತ್ರ, ಅಂಗದ ಭಸ್ಮಲೇಪನ, ಕಂಕುಳ ಕಂಥೆ, ಕೊರಳ ರುದ್ರಾಕ್ಷಿಯ ಸರ, ರತ್ನದ ಸಜ್ಜೆ, ಸುವರ್ಣದ ಶಿವದಾರ, ಬಣ್ಣಗಾವಿಯ ವಸ್ತ್ರ, ಸುಲಿಪಲ್ಲಿನ ಎಸಳುಗಣ್ಣಿನ ನಗೆಮೊಗದ ಅಚ್ಚಕನ್ನಡ ದೇಶಿಕ ಸಿದ್ಧೇಶನು ಬರಲು ದೇವಿಯು ಸಡಗರಗೊಂಡಳು. ಒಂದನ್ನು ಎರಡು ಮಾಡಿ ಎರಡನ್ನು ಒಂದು ಮಾಡುವ ಗಾರುಡಿಗನು ಬಂದು "ಭಿಕ್ಷ"ವೆಂದ ಕೂಡಲೆ ಸಾಕ್ಷಾತ್ ಪರಂ-ಜ್ಯೋತಿ ರೂಪನಿಗೆ ಪಾರ್ವತಿಯು ಪ್ರತ್ಯಕ್ಷಳಾಗಿ ಭಿಕ್ಷವನ್ನಿಟ್ಟಳು. ಕಲಿಯುಗದಲ್ಲಿ ಕಲ್ಲು ಪ್ರತಿಮೆಯ ಮರೆಯಲ್ಲಿ ನಿಂತು ವರವನ್ನು ಕೊಡುವ ಅಗಜೆಯು ನಿಜರೂಪ ಧರಿಸಿ ಬಂದು ತನ್ನ ಗೃಹಸ್ಥಾಶ್ರಮದಂತೆ ಬಂದ ಜಂಗಮಕ್ಕೆ ಸ್ವತಃ ಭಿಕ್ಷೆ ನೀಡಿದಳು. ಈ ಅಚ್ಚರಿಯನ್ನು ನೋಡಿ ಬಂದ ಜನರೆಲ್ಲರೂ ಪ್ರತಿಮೆಗಳಂತೆ ನಿಂತುಬಿಟ್ಟರು.

ಕಿನ್ನರಾಂಗನೆ– ಸರ್ವಾಂಗನೆಯರು ಉರುಗನಾರಿಯರು ಹಿಂದುಗಡೆ ಇರಲು ತ್ರಿಗುಣಾತ್ಮಕ ಮಹಾ ಶಕ್ತಿಯಾದ ಮಹಾ ಮಾಯಾದೇವಿಯು ಶಿವಶರಣರ ಪಂಕ್ತಿಯ ನಡುವೆ ಶೋಭಿಸುವ ಸಿಂಹಾಸನದಲ್ಲಿ ಸಿದ್ಧೇಶ್ವರನನ್ನು ಕೂರಿಸಿ ಪಾದಪೂಜೆ ಮಾಡಿ ಪರಿಣಾಮವನ್ನು ಪಡೆದು ಎಡೆಮಾಡಿ ದಿವ್ಯಾ ಮೃತಾನ್ನಪಾನಗಳನ್ನು ನೀಡಿದಳು. ಸಿದ್ಧನ ದರ್ಶನಕ್ಕೆ ಬಂದ ಜನರೆಲ್ಲರಿಗೂ ಮನದಣಿಯುವಂತೆ ಶಿವಪ್ರಸಾದವನ್ನು ಬಡಿಸಿ ಚಂಡಿಪ್ರಚಂಡಿಗಳನ್ನು ಕರೆದಳು.

ಆ ಭೂತಗಳು ಕುಡಿಮೀಸೆ ಕುಣಿಸುತ್ತಾ, ಕೆಂಗಣ್ಣು ಬಿಡುತ್ತಾ ಬಂದು ಉಮೆಯ ಪಾದಕ್ಕೆ ನಮಸ್ಕರಿಸಲು ಅವಕ್ಕೆ ಅನ್ನದ ರಾಶಿ, ಗಡಿಗೆ ಗಡಿಗೆಯ ಹಾಲು, ತುಪ್ಪ, ತರಕಾರಿಯ ಗುಡ್ಡೆ, ಹೆಡಿಗೆ ಹೆಡಿಗೆ ಕಜ್ಜಾಯ ಕರಿಗಡಬುಗಳನ್ನು ಇಟ್ಟು ತೃಪ್ತಿಪಡಿಸಿದಳು ಎಲ್ಲರೂ ತೃಪ್ತರಾದ ಮೇಲೆ ಸಿದ್ಧೇಶನೆಡೆಗೆ ಬಂದು, ಅಕಳಂಕನೇ ನಿನ್ನನ್ನು ನೆನೆದವರಿಗೆ ಇಹಪರಗಳು ಸುಖವಾಗಲಿ, ನಿನ್ನ ಕೀರ್ತಿಯು ಆಚಂದ್ರಾರ್ಕವಾಗಲಿ ಎಂದು ಸ್ತುತಿಸಿದಳು. ಶಿವರಾಣಿಯರು ಮಂಗಳಾರತಿ ಎತ್ತಿದರು. ಶಚಿಸಿರಿಯರು ಅಕ್ಷತೆ ಹಾಕಿದರು. ದೇವತೆಗಳು ಈತನೇ ಭೂರುದ್ರನೆಂದು ಹೊಗಳುತ್ತಿರಲು ಮಾಯಾದೇವಿಯು ಮೊದಲಿನ ರೂಪ ತಾಳಿ ಭಕ್ತರಿಗೆ ವರಗಳನ್ನು ಕೊಡುತ್ತಾ ನಿಂತಳು. ಈ ಸುದ್ದಿಯನ್ನು ಲೋಕಗಳಿಗೆ ಹೋಗಿ ತಿಳಿಸಿ ಬರುವೆನೆಂದು ಸೂರ್ಯನು ಪಶ್ಚಿಮಕ್ಕೆ ಸಾರಿದನು.

ಸಿದ್ಧಲಿಂಗೇಶ್ವರನು ಗುರುಮಠವನ್ನು ಸೇರುವುದನ್ನು ನೋಡಬೇಕೆಂದು ಸೂರ್ಯನು ಪೂರ್ವದಿಕ್ಕಿಗೆ ಬಂದನು. ಹೊಳಲಗುಂದಕ್ಕೆ ಸಿದ್ಧೇಶ್ವರನು ಬಂದ ಸುದ್ದಿಯು ಜನಜನಿತವಾಗಿ ಜನರು ಇದ್ದಲ್ಲೇ ಶರಣೆನ್ನುವರು. ಅಲ್ಲಲ್ಲೇ ಹಬ್ಬ ಪರ್ವಗಳನ್ನು ಮಾಡಿ ಇಷ್ಟಾರ್ಥ ಪಡೆಯುವರು.

ದೇವಾಲಯದಿಂದ ಹೊರಟ ಸಿದ್ಧೇಶ್ವರನು ಹರದನಹಳ್ಳಿಯ ಕಡೆಗೆ ಹೊರಟನು. ಕೊರಳಗಂಟೆ, ಕೊಂಬಿನ ಕಲಶ, ಪಾದದ ಅಂಡಿಗೆ, ರತ್ನದ ಶಬರದ ಬಸವನ ಮೇಲೇರಿ ಸಿದ್ಧೇಶ್ವರನು ಮುತ್ತಿನ ಕುಚ್ಚು, ಚಿನ್ನದ ಕಾವಿನ ಛತ್ರ, ಉಭಯ ಚಾಮರ ಹೊಗಳುಪಾಠಕರು, ಹಡಪದವರು,

ಗಿಂಡಿಯವರು, ಕುಂಚದವರು, ಕಾರಂಜಿಯುವರು, ಪಾದುಕೆಯ ಸೇವಕರು, ಬೆಡಗಿನ ಜಂಗಮರು, ಚರಮೂರ್ತಿಗಳು ಸಿದ್ಧೇಶ್ವರನೊಡನೆ ನಡೆದರು. ದಾರಿಯಲ್ಲಿ ಪಾನಕ, ಹೆಸರುಬೇಳೆ, ತಣ್ಣೀರು, ನೀರು ಮಜ್ಜಿಗೆಯ ಅರವಟಿಗೆ ಗಳು, ನೆಳಲ ಚಪ್ಪರಗಳು, ಅಲ್ಲಿಗಲ್ಲಿಗೆ ಪರ್ವಗಳು, ಹಬ್ಬಗಳ ಆಚರಣೆ, ಆರತಿ, ನಮಸ್ಕಾರಗಳು ನಡೆಯಲು ಅವನ್ನೆಲ್ಲಾ ಸ್ವೀಕರಿಸುತ್ತಾ ಕಾವೇರಿ ನದಿಯನ್ನು ದಾಟಿದರು. ಶರಣದಂಪತಿಗಳು ಅಲ್ಲಿಗೆ ಬಂದು ಶಿವತೇಜಸ್ಸಿನಲ್ಲಿ ಬೆರೆದ ಶಾಂತರೂಪಿನ ಶಿವಸಿದ್ಧನನ್ನು ನೋಡಿ ಸಾಷ್ಟಾಂಗವೆರಗಿ ಆನಂದ ದಿಂದ ಉಬ್ಬಿಹೋದರು. ಶರಣದಂಪತಿಗಳನ್ನು ಪಾಲಕಿಯಲ್ಲಿ ಕೂರಿಸಿ ಗುರುಗಳು ಕುಳಿತಿದ್ದ ಪಲ್ಲಕ್ಕಿಯ ಹಿಂಭಾಗದಲ್ಲಿ ಪುರವನ್ನು ಪ್ರವೇಶಿಸಿದರು.

ಭೇರಿ-ನಿಸ್ಸಾಳ ವಾದ್ಯಗಳು, ಭಟ್ಟರು, ಗಾಯಕರು, ಬೆಡಗಿನ ಅಯ್ಯ ಗಳು, ಚರಂತರು, ವಿರಕ್ತರು, ಮಲ್ಲರು, ಕೋವಿದರು, ಕಾಲಜ್ಞಾನಿಗಳು ಲಿಂಗವೀರರೊಡನೆ ಪನ್ನೀರಚಳೆಯ ಕೊಟ್ಟು ಕಸ್ತೂರಿ ಸಾರಣೆಮಾಡಿ ಮುತ್ತು ರತ್ನಗಳ ತೋರಣಕಟ್ಟಿ ಅಲಂಕರಿಸುವ ಚಂದ್ರ ಸೂರ್ಯ ಬೀದಿಗಳಲ್ಲಿ ವಾದ್ಯ ಗಳ ನಡುವೆ, ನಂದಿಯ ಧ್ವಜ ಪಟವಾಡುತ್ತಿರಲು ಶೋಭಾನೇ ಹಾಡುತ್ತಾ ಆರತಿಗಳು ಬೆಳಗುತ್ತಿರಲು ಈ ವೈಭವವನ್ನು ನೋಡಿ ನೋಡಿ ದೇವತೆಗಳು ಅನಿಮಿಷರಾದರು. ಫಣಿರಾಜನು ಇದನ್ನು ಬಿಟ್ಟು ಬೇರೆ ಏನನ್ನೂ ಕೇಳೆ ನೆಂದು ಕಿವಿಯನ್ನು ಮುಚ್ಚಿಕೊಂಡನು. ಕೇರಿ ಕೇರಿಯ ಮನೆ ಮನೆಯ ಜನರು ಈ ವೈಭವವನ್ನು ನೋಡಲು ಒಂದು ನಮ್ಮ ಕಣ್ಣ ಬರ ಹರಿಯಿತು, ಜನ್ಮ ಸಾರ್ಥಕವಾಯಿತು. ಯಾವ ಜನ್ಮದ ಪುಣ್ಯವೋ ಕೂಡಿ ಬಂದು ಈ ಶಿವಸಿದ್ಧನ ದರ್ಶನವಾಯಿತು. ನಾವೇ ಧನ್ಯರೆಂದುಕೊಂಡರು.

ಹೆಜ್ಜೆ ಹೆಜ್ಜೆಗೆ ತೊಂಗಲಿಕ್ಕಿ ಶರಣೆನ್ನುವವರು, ಹೆಜ್ಜೆ ಹೆಜ್ಜೆಗೆ ನಮ ಸ್ಕರಿಸುವವರು, ಹೆಜ್ಜೆ ಹೆಜ್ಜೆಗೆ ಹೊಗಳುವವರು, ಎರಡು ಪಾದಗಳಿಗೆ ಕಾಣಿಕೆ ಇಡುವವರ ನಡುವೆ ಗುರುಸಿದ್ಧನು ಗುರುಗಳ ಹಿಂದೆ ಗುರುಮಠವನ್ನು ಸೇವಿಸಿ ಪರಿತೃಪ್ತನಾಗಿ ಸುಖಸಂಕಥಾ ಗೋಷ್ಠಿಯಲ್ಲಿದ್ದನು.

ಇತ್ತ ಕೈಲಾಸದಲ್ಲಿ ಪರಮೇಶ್ವರನು ಸಿಂಹಪೀಠದಲ್ಲಿ ಕುಳಿತಿರಲು ಗಂಧರ್ವ–ಸಿದ್ಧ–ವಿದ್ಯಾಧರ–ಕಿನ್ನರ–ಕಿಂಪುರುಷರೆಲ್ಲಾ ಬೃಂದಾರಕ ಪ್ರಮು

ಖರು ಓಲೈಸುತ್ತಾ ನಿಂತಿರಲು ಮನಮುನಿಗಳು, ಬ್ರಹ್ಮರು, ಇಂದ್ರರು, ರುದ್ರರು ಓಲಗಗೊಟ್ಟಿರುವರು. ಗಣಪ, ಷಣ್ಮುಖ, ವೀರಭದ್ರ, ಭೈರವ ರೆಂಬ ಮಕ್ಕಳು ಹಿಂದೆ ಕುಳಿತಿರುವರು. ಆಗ ನಾರದರು ಬಂದು ಶಿವನನ್ನು ಸ್ತುತಿಸಿದರು.

ಶಿವನು ನಾರದರನ್ನು ಉಪಚರಿಸಿ ಏನು ಸುದ್ದಿ ತಂದಿರುವೆ ಎನಲು, ದೇವಾ ! ಭೂಮಿಯಲ್ಲಿ ಧರ್ಮದೇವತೆಯು ನಾಲ್ಕು ಪಾದಗಳಿಂದ ನಿಂತಿತು. ಸಿದ್ಧಲಿಂಗನ ಆಜ್ಞೆಯಿಂದ ಕಲಿಯ ಅಂತ್ಯವಾಯಿತು. ಸತ್ಯವು ಉದಿಸಿತು. ಸಜ್ಜನರು ನಿರ್ಭಯರಾದರು. ಸತ್ಕರ್ಮಗಳು ಹೆಚ್ಚಿದವು. ಗುರು–ಶಿಷ್ಯ ನ್ಯಾಯ, ಸ್ವಾಮಿ, ಭೃತ್ಯನ್ಯಾಯ, ತಂದೆ ಮಕ್ಕಳ ನ್ಯಾಯ, ಸತಿಪತಿಯ ನ್ಯಾಯಗಳು ಪರಿಷ್ಕಾರವಾದವು. ಯತಿನಿಂದೆ ಮತದ್ವೇಷ ಹಿತಶತೃತ್ವಗಳು ನಾಶವಾದವು. ದುಷ್ಟದೇವತೆಗಳು ನಾಮಮಾವಶೇಷರಾದರು. ಅತಿಥಿ ಪೂಜೆ ಪ್ರಬಲಿಸಿತು. ಸ್ತ್ರೀ, ಶಿಶು, ಗೋವುಗಳಿಗೆ ರಕ್ಷಣೆ ದೊರೆಯಿತು. ಭೂತ ದಯವು ಎಲ್ಲರಿಗೂ ತಿಳಿಯಿತು. ಈ ಸಿದ್ಧೇಶ್ವರನು ಭೂರುದ್ರನಾಗಿ ಭೂಮಿ ಯನ್ನು ಸರಿಯಾಗಿ ಪಾಲಿಸಿದನು. ಪಾಪದ ಕುಲವನ್ನು ಕೆಡಿಸಿರುವನು ಎಂದರು. ಶಿವನು ಸಂತುಷ್ಟನಾಗಿ ಗಿರಿಜೆಯ ಮುಖವನ್ನು ನೋಡಿದನು.

ಇತ್ತ ಸಿದ್ಧಲಿಂಗೇಶ್ವರನು ಹರದ ಹಳ್ಳಿಯಿಂದ ಹೊರಟು ಅಲ್ಲಲ್ಲಿ ಸಂಚ ರಿಸುತ್ತಾ ಪುರಗಳಲ್ಲೊಬ್ಬಬ್ಬ ಹಿರಿಯರನ್ನು ಮಠಗಳಲ್ಲಿ ನಿಲ್ಲಿಸಿ ಬರುತ್ತಾ ನೆನೆ ನೆನೆದವರ ಬಳಿ ಬಂದು ಸಂದರ್ಶನ ಕೊಡುತ್ತಾ ಶಿವಗಂಗೆಯಲ್ಲಿ ಕೆಲವು ದಿನಗಳು ನಿಂತನು. ಎಲ್ಲಿ ನೋಡಿದರೂ ಸಿದ್ಧೇಶನ ಗದ್ದುಗೆಗಳಾದವು. ಎಲ್ಲಿ ನೋಡಿದರೂ ಸಿದ್ಧೇಶ್ವರನ ಪೂಜೆ–ಪರಿಷೆ–ಪರ್ವಗಳು ನಡೆಯಹತ್ತಿದವು.

ಶಿವಗಂಗೆಯ ನೈಋತ್ಯ ಭಾಗದಲ್ಲಿರುವ ಬಂಡಿಹಳ್ಳಿಯ ಗವಿಯಲ್ಲಿ ಒಂದು ಘಟಸರ್ಪವು ಸೇರಿಕೊಂಡು ಸುತ್ತ ಐದು ಗಾವುದ ದೂರ ಸಂಚರಿ ಸುತ್ತಿತ್ತು. ಏಳು ಹೆಡೆ ಐವತ್ತು ಮಾರುದ್ದದ ನಾಲ್ಕು ಬಾಲದ ಆಲಿಯ ದಪ್ಪದ ಹಾವು ಸಿಕ್ಕ ಪ್ರಾಣಿಗಳನ್ನು ತಿನ್ನುತ್ತಿರಲು ಅದಕಂಜಿ ಯಾರೊ ಬ್ಬರೂ ಅತ್ತ ಕಡೆ ಸುಳಿಯುತ್ತಿರಲಿಲ್ಲ. ಅದು ಭೋರ್ಗರೆದರೆ ಗುಡುಗಿದಂತೆ ಕೇಳಿಬರುವುದು. ಆಗ ದಿಕ್ಕು ದಿಕ್ಕಿನ ಜನರು ನಡುಗುವರು. ಹಾಗೆ

ಮೊರೆದ ಮೊರೆತಕಂಜಿ ಪ್ರಾಣಿಗಳು ಹೊರಟು ಬಂದರೆ ಅವೆಲ್ಲ ನಾಗೇಂದ್ರನ ಪಾಲೆ. ಆ ಸರ್ಪಕ್ಕೆ ಇದಿರೇ ಇಲ್ಲದಂತಾಯಿತು. ವೀರಭದ್ರನ ಬೊಬ್ಬೆ ಯಂತೆ ಕಾಲ ಭೈರವನ ನಮೋರಹಿತನಂತೆ, ಭೂಮಿಯೇ ನಡುಗುವಂತೆ ಆ ಘೋರ ಸರ್ಪವು ಭೋರ್ಗರೆಯುವದು. ಹೀಗೆ ಹಗಲೂ ರಾತ್ರಿ ದಾರಿ ಗೆಟ್ಟು ಬಂದ ಪ್ರಾಣಿಯನ್ನು ಹೋಗಗೊಡದೆ ಬಿಗಿಯಾಗಿ ಕಾದಿರುವ ಸರ್ಪನ ಬಗೆಯನ್ನು ತಿಳಿದು ಸಿದ್ಧಲಿಂಗೇಶ್ವರನು ಅಲ್ಲಿಗೆ ಹೋದನು. ಅವನನ್ನು ಕಂಡ ಸರ್ಪವು ಶರಣಾಗತವಾಗಿ ಪಾತಾಳದಿಂದ ಸಿದ್ಧನನ್ನು ಎದುರುಗೊಳ್ಳ ಬಂದ ಆದಿಶೇಷನಂತೆ ಗುಹೆಯಿಂದ ದಿಕ್ಕುದಿಕ್ಕುಗಳನ್ನು ಬೆಳಗುತ್ತಾ ಬಂದಿತು.

ನಾಲಿಗೆಗಳನ್ನು ಚಾಚುತ್ತಾ ಹೆಡೆಯನ್ನಗಲಿಸಿ, ಬಾಲವನ್ನು ಕೊಡ ವುತ್ತಾ ಮಿರ್ರನೆ ಮಿಂಚುತ್ತಿರುವ ಬಿಳಿಯ ಸರ್ಪವು ಬಂದು ಸಿದ್ಧಲಿಂಗನ ಪಾದಕ್ಕೆ ನಮಸ್ಕರಿಸಿತು. ಸಿದ್ಧೇಶನು ಅದರ ತಲೆಯನ್ನು ಸವರಿ ನೈದಡವಿ ಸ್ಥಿರಜೀವಿಯಾಗೆಂದು ಹರಸಿದನು. ಅದು ಬಾಲವನ್ನು ಸುತ್ತಿ ಪೀಠವನ್ನು ಮಾಡಿ ಅದರ ಮೇಲೆ ಸಿದ್ಧೇಶನನ್ನು ಕೂರಿಸಿಕೊಂಡು ಹೆಡೆಗಳನ್ನೆತ್ತಿ ಕೊಡೆ ಹಿಡಿಯಿತು. ಕೊಂಚ ಹೊತ್ತು ಅದರ ಸೇವೆಯನ್ನು ಸ್ವೀಕರಿಸಿದ ಸಿದ್ಧ ಲಿಂಗನು, ಜನರು ಹೆದರಿದ್ದಾರೆ. ಇನ್ನು ನೀನು ಭೂಲೋಕದಲ್ಲಿರಬೇಡವೆನ್ನಲು ಗುಹೆಗೆ ಹೋಗಿ ಮಾಯವಾಯಿತು. ಜನರು ಸ್ವಾಮಿ ಸಿದ್ಧೇಶನನ್ನು ನಾನಾ ಪ್ರಕಾರವಾಗಿ ಕೊಂಡಾಡಿದರು

ಹಳ್ಳಿ, ಪಟ್ಟಣ, ನಗರ, ಪೇಟೆ ಕೋಟೆಗಳಲ್ಲೆಲ್ಲಾ ಸಿದ್ಧೇಶನ ಪರ್ವ, ಸಿದ್ಧೇಶನ ಜಾತ್ರೆ, ಸಿದ್ಧೇಶನ ಪೂಜೆಗಳು ನಡೆದವು. ಸುಖದಲ್ಲಿ ಸಿದ್ಧೇಶ, ದುಃಖದಲ್ಲಿ ಸಿದ್ಧೇಶ, ಜನನದಲ್ಲಿ ಸಿದ್ಧೇಶ, ಮರಣದಲ್ಲಿ ಸಿದ್ಧೇಶ, ಸಭೆಯಲ್ಲಿ ಸಿದ್ಧೇಶ, ಕನಸಿನಲ್ಲಿ ಸಿದ್ಧೇಶ, ಹೆಸರಿನಲ್ಲಿ ಸಿದ್ಧೇಶ, ಉಸುರಿನಲ್ಲಿ ಸಿದ್ಧೇಶ, ಎಲ್ಲೆಲ್ಲಿ ನೋಡಿದರೂ ಸಿದ್ಧೇಶಮಯವಾಯಿತು, ಅಲ್ಲಿಂದ ಸಿದ್ಧೇಶನು ಕಗ್ಗೆರೆಗೆ ಬಂದನು.

ನಾನಾ ತರುಲತೆಗಳಿಂದ ತುಂಬಿದ ಪುಷ್ಪಲತೆ ವನಗಳಿಂದ ಶಾಂತ ವಾದ ನಾಗಿಣಿ ನದಿಯ ತೀರದ ಕಗ್ಗೆರೆಯ ವನದಲ್ಲಿ ಚಿನ್ಮಯನಾದ ಸಿದ್ಧೇಶ್ವ ರನು ಶುಭ ಲಗ್ನದಲ್ಲಿ ಯೋಗಕ್ಕೆ ಮಾವಿನ ಮರದಡಿಯಲ್ಲಿ ಕುಳಿತನು.

ಸಿದ್ಧಲಿಂಗೇಶ್ವರನು ಕಗ್ಗೆರೆಯ ಉಪವನದಲ್ಲಿ ಶಿವಯೋಗಕ್ಕೆ ಸನ್ನದ್ಧ ನಾಗುತ್ತಿರುವ ಸಮಯಕ್ಕೆ ಸರಿಯಾಗಿ ಅದೇ ಕಗ್ಗೆರೆಯ ನಂಬೆಣ್ಣನೆಂಬ ಭಕ್ತನು ಬಂದು ನೋಡಿ, ಈ ದಿನ ನಮ್ಮ ಮನೆಯ ಶಿವಪೂಜೆಗೆ ದಯ ಮಾಡಿಸಬೇಕೆಂದು ಬಿನ್ನವಿಸಿದನು. ಆಗಲದಕ್ಕೆ ಸಿದ್ಧಲಿಂಗೇಶ್ವರನು ಈ ದಿನ ನಮ್ಮನ್ನು ಕರೆಯಬೇಡ, ಮುಂದಕ್ಕೆ ಬರುತ್ತೇವೆ ಎಂದನು. ನಂಬೆಣ್ಣನು ಬಲವಂತ ಪಡಿಸಿ ಬಿನ್ನಹವನ್ನು ಒಪ್ಪಿಸಿದನು. ಅದಕ್ಕೆ ಸಿದ್ಧೇಶನು ಹಾಗೆ ಆಗಲಿ. ನೀನು ಬಂದು ಕರೆಯುವವರೆಗೂ ನಾನು ಇಲ್ಲಿಯೇ ಇರುತ್ತೇನೆಂದು ಹೇಳಿ ಕಳುಹಿಸಿದನು.

ಇತ್ತ ನಂಬೆಣ್ಣನು ಸಂತೋಷಗೊಂಡು ಹೂಪತ್ರಿಗಳನ್ನು ಬಿಡಿಸಿ ಕೊಂಡು ಮನೆಗೆ ಹೋಗಿ ಮೃಷ್ಟಾನ್ನಗಳನ್ನು ಮಾಡಿಸಿದನು. ಅಡಿಗೆ ಯಾಗುವ ಸಮಯಕ್ಕೆ ಸರಿಯಾಗಿ ದೈವಗತಿಯಿಂದ ದೊಡ್ಡದಾದ ತುರಕರ ದಂಡು ಸೀಮೆ ಸೀಮೆಗಳನ್ನು ಕೊಳ್ಳೆ ಹೊಡೆಯುತ್ತಾ ಪ್ರಜೆಗಳನ್ನು ನೋಯಿಸಿ ಗೋಳೆಬ್ಬಿಸುತ್ತಾ ಕಗ್ಗೆರೆಯ ಸಮೀಪಕ್ಕೆ ಬಂದಿತು. ಕೊಲ್ಲಿರಿ, ಕುಟ್ಟಿರಿ, ಸೆರೆ ಹಿಡಿಯಿರೆಂದು ಆರ್ಭಟಿಸುವ ಮುಂಚೂಣಿ ಜನರಿಗಂಜಿ ಆ ಊರಿನ ಜನರು ಓಡಿ ಹೋದರು. ತುರುಕರ ಮತ್ತು ದೊಡ್ಡ ಬೇಡರ ಕುದುರೆಗಳ ದಾಳಿಗೆ ಕಗ್ಗೆರೆಯ ಜನರು ಭಯಪಟ್ಟು ಅಡವಿಯ ಪಾಲಾದರು. ಅವರೊಡಗೂಡಿ ಮಾಡಿದ ಅಡಿಗೆಯನ್ನು ಒಂದು ಹಗೇವಿನಲ್ಲಿಳಿಸಿ ಮುಚ್ಚಿ ನಂಬೆಣ್ಣನು ಗಿರಿಯ ಗೌಡನ ಜೊತೆಯಲ್ಲಿ ಪರದೇಶವನ್ನು ಸೇರಿ ವಾಸಮಾಡ ಲಾರಂಭಿಸಿದನು.

ಇತ್ತ ಕಗ್ಗೆರೆಯ ಉಪವನದಲ್ಲಿ ನಿರಂಜನ ಜಂಗಮನಾದ ಸಿದ್ಧಲಿಂಗೇ ಶ್ವರನು ಚಿದಾನಂದ ಯೋಗದಲ್ಲಿ ಮುಳುಗಿ ಸ್ವಪ್ರಕಾಶದಲ್ಲಿ ಮಹಿಮೆಯನ್ನು ತೋರುತ್ತಿದ್ದನು. ನಂಬೆಣ್ಣನು ಬರುವವರೆಗೂ ಬೇರೆ ಕಡೆ ಹೋಗಬಾರ ದೆಂದು ಅಲ್ಲೇ ಕುಳಿತು ತಪಸ್ಸಿನಲ್ಲಿ ಮಗ್ನನಾದನು. ಚಂಡಿ ಪ್ರಚಂಡಿಗಳು ಕಾದು ಕುಳಿತು ಸೇವೆ ಮಾಡುತ್ತಿದ್ದವು. ದೇವಾನುದೇವತೆಗಳು ಅಲ್ಲಿಗೆ ಬಂದು ಉಪಚಾರ ಮಾಡುತ್ತಿದ್ದರು. ಯೋಗ ಜ್ವಾಲೆಯು ಬ್ರಹ್ಮಾಂಡ ವನ್ನು ಮುಸುಕಲು ಆ ಬೇಗೆಗೆ ಸಕಲ ದೇವತೆಗಳೂ ಬಂದು ಕಾದಿರುವರು.

ದೇವತಾಸ್ತ್ರೀಯರು ಅವನಿದ್ದಲ್ಲಿಯೇ ಬೀಡುಬಿಟ್ಟು ಸಿದ್ಧೇಶ್ವರನ ಧ್ಯಾನದಿಂದ ಕಾಲ ಕಳೆಯುತ್ತಿದ್ದರು. ಸಿದ್ಧನನ್ನು ನೆನೆಯುತ್ತಾ ಕುಟ್ಟುವರು, ಶಿವನನ್ನು ಹೊಗಳುತ್ತಾ ಉಯ್ಯಾಲೆಯಾಡುವರು. ಶಿವನನ್ನು ನೆನೆಯುತ್ತಾ ಬೀಸುವರು. ಶಿವನಾಮುಗಳನ್ನು ಹಾಡುವರು. ಶೇಷ ಪ್ರಸಾದವನ್ನು ಭುಂಜಿಸಿ ಧನ್ಯರಾದೆವೆನ್ನುವರು. ಹೀಗೆ ಹನ್ನೆರಡು ವರುಷ ಕಳೆದವು. ಸಿದ್ಧಲಿಂಗನು ಮೇಲಕ್ಕೇಳಲಿಲ್ಲ. ಹುತ್ತವು ಬೆಳೆಯಿತು. ಇತ್ತ ಓಡಿ ಹೋಗಿದ್ದ ಜನರು ಪುನಃ ಬಂದು ಊರನ್ನು ಸೇರಿದರು. ಅವರೊಡನೆ ನಂಜಿಣ್ಣನೂ ಬಂದು ಮನೆಯಲ್ಲಿ ನಿಂತನು. ಊರು ಕಟ್ಟಿತು. ಒಕ್ಕಲು ನಿಂತಿತು.

ನಂಬೆಣ್ಣನ ಹಸುಗಳಲ್ಲೊಂದು ಮನೆಯಲ್ಲಿ ಕರುವನ್ನು ಕುಡಿಸದೆ ಬಂದು ಆ ಹುತ್ತಕ್ಕೆ ಹಾಲು ಕರೆಯುವುದು. ನಿತ್ಯವೂ ಹೀಗೆಯೇ ನಡೆಯುತ್ತಿರಲು ಇದೇಕೆಂದು ನಂಬೆಣ್ಣನು ಸಂಶಯಗೊಂಡು ದನಕಾಯುವ ಹುಡುಗನನ್ನು ದಂಡಿಸಿ ಕಾವಲು ಹಾಕಿದನು. ಅವನು ಅದರ ಹಿಂದೆ ಹಿಂದೆ ಬಂದು ಸಾಯಂಕಾಲವಾಗುತ್ತಲೆ ಹುತ್ತದ ಮೇಲೆ ಹಾಲು ಕರೆಯುವುದನ್ನು ಕಂಡು ನಂಬೆಣ್ಣನಿಗೆ ತಿಳಿಸಿದನು. ಬೆಳಗಾದ ಮೇಲೆ ಕರುವನ್ನು ಕುಡಿಸದೆ ಬಂದ ಹಸುವಿನ ಹಿಂದೆ ನಂಬೆಣ್ಣನು ಬಂದು ಹುತ್ತದ ಮೇಲೆ ಹಾಲು ಕರೆಯುವುದನ್ನು ಸ್ವತಃ ನೋಡಿದನು. ಹುತ್ತದ ಕೋರೆ ಕೋರೆಗಳಲ್ಲಿ ರತ್ನದ ಹೆಡೆಯ ಸರ್ಪಗಳು ಆಡುತ್ತಿರುವವು. ಆ ಹುತ್ತದ ಮೇಲೆ ಹಸುವು ಹಾಲು ಕರೆಯುತ್ತಿದೆ. ಆ ಕ್ಷೀರವು ಸಿದ್ಧೇಶನ ಮುಂಡೆಯ ಮೇಲೆ ಬಿದ್ದು ಶಿರವನ್ನು ಸೇರುವುದು. ನಂಬೆಣ್ಣನು ಇದನ್ನು ನೋಡಿ ಆಶ್ಚರ್ಯಪಡುತ್ತಿರಲು ದೇವತೆಗಳು ಹೂಮಳೆಗರೆದರು; ದೇವದುಂದುಭಿ ಮೊಳಗಿದವು.

ಆ ಹುತ್ತವು ಮಿರ್ರನೆ ಮಿಂಚಿತು. ಸಿದ್ಧಲಿಂಗನು ನಂಬೆಣ್ಣನಿಗೆ ವಿಶ್ವರೂಪು ತೋರಿದನು. ನೋಡಿ ನಂಬೆಣ್ಣನು ಬೆರಗಾದನು. ಆಗ ಸಿದ್ಧಲಿಂಗೇಶ್ವರನ ನಿಜರೂಪವು ಕಾಣಿಸಿತು. ತಾನು ಬಿನ್ನಹ ಮಾಡಿದ ವಿಷಯವು ನೆನಪಾಯಿತು. ಆಕಾಶವಾಣಿಯು ನಿನ್ನ ಬಿನ್ನಹದ ಜಂಗಮನು ಇಲ್ಲೇ ಇರುವನು. ಹುತ್ತವನ್ನು ಒಡೆಯಿಸಿ ನೋಡು ಎಂದಿತು.

ಆಕಾಶವಾಣಿಯನ್ನು ಕೇಳಿದ ನಂಜೆಣ್ಣನು ಎಚ್ಚೆತ್ತು ಆ ಮಹಾತ್ಮನನ್ನು ಧ್ಯಾನಿಸುತ್ತಾ ಜನರನ್ನು ಕರೆಸಿ ಕೊಪ್ಪರಿಗೆಗಳಲ್ಲಿ ಹಾಲು ತುಂಬಿಸಿ ಹುತ್ತಕ್ಕೆ ಅಭಿಷೇಕ ಮಾಡಿಸಿದನು. ಗಂಟೆ, ಜಾಗಟೆ, ಶಂಖಗಳ ಓಂಕಾರ ನಾದದೊಡನೆ ವೇದ, ಪಂಚವಾದ್ಯ, ಮಂತ್ರಗಳೊಡನೆ ಅಭಿಷೇಕ ಮಾಡುತ್ತಿರಲು ಹುತ್ತವು ಉಬ್ಬಿ ಒಡೆಯಿತು. ನಂಜೆಣ್ಣನು ನಿರಂಜನ ಜಂಗಮಕ್ಕೆ ಸಾಷ್ಟಾಂಗವಾಗಿ ನಮಸ್ಕರಿಸಿದನು. ಆಗ ಎಚ್ಚೆತ್ತ ಸಿದ್ಧಲಿಂಗನು ಭಕ್ತರನ್ನು ಹರಸಿದನು. ನಂಜೆಣ್ಣನು ಸಿದ್ಧಲಿಂಗನಿಗೆ ಎಣ್ಣೆಹಚ್ಚಿ ಎರೆದು ಸುಗಂಧಗಳನ್ನು ತೊಡೆದು ಭಸ್ಮವನ್ನು ಧರಿಸಿ ವಸ್ತ್ರಾಭರಣಗಳಿಂದಲಂಕರಿಸಿ ದಿವ್ಯಾನ್ನವನ್ನರ್ಪಿಸಲು ಹಗೇವಿನಲ್ಲಿರಿಸಿದ್ದ ಅಡಿಗೆಯನ್ನು ತರಿಸಿದನು. ಅದು ಆಗ ತಾನೇ ಮಾಡಿದ ಅಡಿಗೆಯಂತೆ ಬಿಸಿಬಿಸಿಯಾಗಿತ್ತು. ಆ ಮೀಸಲನ್ನು ಸಿದ್ಧಲಿಂಗೇಶನಿಗೆ ಬಡಿಸಿ ನೈವೇದ್ಯ ಮಾಡಿ ಆರತಿ ಎತ್ತಿದರು. ಅನಂತರ ಅನೇಕ ಭಕ್ತರು ಸೇರಿ ಶಕ್ತ್ಯಾನುಸಾರ ಕಾಣಿಕೆಗಳನ್ನರ್ಪಿಸಿ ಬೇಕು ಬೇಕಾದ ವರಗಳನ್ನು ಬೇಡಿದರು. ಅನಂತರ ಸಿದ್ಧಲಿಂಗೇಶನು ಕಗ್ಗೆರೆಯಲ್ಲಿರುವ ನಂಜೆಯ್ಯನ ಮನೆಗೆ ಬಂದು ನಂಜೆಯ್ಯನ ಪೂಜೆಯನ್ನು ಸ್ವೀಕರಿಸಿದನು. ಚಂಡಿ ಪ್ರಚಂಡಿಗಳಿಗೂ ಸುಗ್ರಾಸಾಹಾರವನ್ನು ಹಾಕಿಸಿದನು.

ಅಲ್ಲಿಂದ ಸಿದ್ಧಲಿಂಗೇಶ್ವರನು ಎಡೆಯೂರಿಗೆ ಬಂದು ಕದಂಬ ತೀರದ ಕಲ್ಲುಮಂಟಪದಲ್ಲಿ ಭಗವಾನ್ ರೇಣುಕಾಚಾರ್ಯರ ಶಾಖದ ಪಟ್ಟದ ಸ್ವಾಮಿಗಳಾಗಿ ಎಂಟು ಜಡೆಯ ಬಗೆಯ ಹಿರಿಯ ಚಿಟ್ಟೆಗದೇವರು ಸರ್ವಸಂಗ ಪರಿತ್ಯಾಗದಿಂದ ನಿಷ್ಕಾಮಿಗಳಾಗಿ ನಿರಪೇಕ್ಷ ಬುದ್ಧಿಯಿಂದ ಮಿತಹಾರ ಜಿತೇಂದ್ರಿಯರಾಗಿ ತಮ್ಮ ಆಶ್ರಮ ಧರ್ಮವನ್ನು ಪಾಲಿಸುತ್ತಾ ವಾಸಿಸುತ್ತಿದ್ದ ಕಲ್ಲುಮಂಟಪಕ್ಕೆ ಚರತಿಂಥಿಣಿಯೊಡನೆ ದಯಮಾಡಿಸಿ ಆ ಕಲ್ಲುಮಂಟಪದಲ್ಲಿ ತಂಗಿದ್ದು ಶಿವಾನುಭವ ಗೋಷ್ಠಿಯ ಸದ್ಬೋಧೆಯನ್ನು ಮಾಡುತ್ತಾ ಮತ್ತೊಂದು ತೀರದಲ್ಲಿ ಕೊಡಿಗೇಹಳ್ಳಿಯ ದೇವರಾದ ಚನ್ನವೀರಪ್ಪ ಒಡೆಯರು ಅವರ ಸತಿ ಪಾರ್ವತಮ್ಮ ಶಿವಶರಣರ ಭಕ್ತಿ ಭಿಕ್ಷೆಯನ್ನು ಕೈಗೊಂಡು ಚರತಿಂಥಿಣಿಯೊಡನೆ ಇವರು ವಾಸಿಸುತ್ತಿದ್ದ ಕಲ್ಲುಮಂಟಪ (ಗವಿಮಠ)ಕ್ಕೆ ದಯಮಾಡಿಸಿದ ಶರಣ ದಂಪತಿಗಳಿಗೆ ಪಾದೋದಕ ಪ್ರಸಾದವನ್ನಿತ್ತು

ಆಶೀರ್ವದಿಸಿ, ಚರತಿಂಥಿಣಿಯೊಡನೆ ಶಿವಾನುಭವ ಗೋಷ್ಠಿಯನ್ನು ಮಾಡುತ್ತಿರುವಾಗ ಸಿಡಿಲು ಬಂದು ಸ್ವಾಮಿಗಳ ಪ್ರದಕ್ಷಿಣೆ ಮಾಡಿದಾಗ ಕೈತೋರಿಸಿದ ಸ್ಥಳಕ್ಕೆ ಘೋರ್ಗರೆಯುತ್ತಾ ಭೂಮಿಗೆ ಹೊಕ್ಕು ಒದರಿ ಕೊರೆದುಕೊಂಡು ಹೋದ ಸ್ಮಾರಕವು ಇಂದಿಗೂ ಅಲ್ಲಿ ಇರುತ್ತದೆ. ಅಲ್ಲಿಂದೀಚೆಗೆ ಈ ಕಲ್ಲು ಮಂಟಪವು ಗವಿಯ ಮಠವಾಯಿತು. ಸಿದ್ಧಲಿಂಗ ಶಿವಯೋಗಿಗಳು ಚರ ತಿಂಥಿಣಿಯೊಡನೆ ಮೊದಲಿದ್ದ ಕಲ್ಲುಮಂಟಪದಲ್ಲಿ ವಾಸಿಸುತ್ತ ಶಿವಾನುಭವ ಗೋಷ್ಠಿಯಲ್ಲಿರುವಾಗ ಎಡೆಯೂರಿನ ಸದ್ಭಕ್ತ ಸಿದ್ಧರಾಮಪ್ಪ ಎಂಬವರು ಸ್ವಾಮಿಗಳು ತಮ್ಮ ಮನೆಯ ಪ್ರಸಾದಕ್ಕೆ ದಯಮಾಡಿಸಬೇಕೆಂದು ಸಾಷ್ಟಾಂಗವೆರಗಿ ಅನನ್ಯ ಭಕ್ತಿಯಿಂದ ಬೇಡಿಕೊಂಡದ್ದಕ್ಕೆ ಒಪ್ಪಿ ಸಿದ್ಧರಾಮಪ್ಪನ ಮನೆಗೆ ಬಿಜಯಂಗೈದು ಶಿವಪೂಜಾ ತಪೋನಿಷ್ಠೆಯಲ್ಲಿ ದೇಹೇಂದ್ರಿಯಾದಿ ಸಮಸ್ತ ಕರಣಗಳನ್ನು, ಅಸ್ತಮಯದ ಸೂರ್ಯನು ತನ್ನ ಸಮಸ್ತ ಕಿರಣಗಳನ್ನು ತನ್ನೊಳಡಗಿಸಿ ಅಡಕ ಮಾಡಿಕೊಳ್ಳುವಂತೆ ಲಿಂಗಾರ್ಪಿತವ ಮಾಡಿ ಅಚಲಿತರಾಗಿ ಲಿಂಗಾಂಗ ಸಾಮರಸ್ಯದ ಶಿವಯೋಗಾನಂದ ನಿದ್ರಾಮುದ್ರಿತರಾಗಿ ಮೂರು ದಿವಸಗಳು ಬಹಿರಂಗ ವ್ಯಾಪಾರ ಯಾವುದೂ ಇಲ್ಲದೆ ಇದ್ದು, ಅನಂತರ ಬಹಿರ್ಮುಖರಾಗಿ ಪೂಜಾ ವೈಭವವನ್ನು ಮುಗಿಸಿ ಸಿದ್ಧರಾಮಪ್ಪನ ಭಕ್ತಿ ಪ್ರಸಾದವನ್ನು ಸ್ವೀಕರಿಸಿ, ಪೂರ್ವ ಸ್ಥಳವಾದ ಕಲ್ಲುಮಂಟಪಕ್ಕೆ ದಯಮಾಡಿಸಿ ವಿಹರಿಸುತ್ತಿರುವಾಗ ಮುಖ್ಯ ಶಿಷ್ಯರಾದ ಬೋಳಬಸವ ದೇವರು, ಗುರುವೇ ! ಸದ್ಗುರುವೇ ! ಸಂಸಾರವಂಟದ ಗುರುವೇ ! ಸದ್ಯೋನ್ಮುಕ್ತಿಯ ಅನುಗ್ರಹಿಸುವ ಗುರುವೇ ! ಕೃಪೆಮಾಡಿ ಷಟ್‌ಸ್ಥಲ ಸಿದ್ಧಾಂತದ ಬೋಧೆಯನ್ನು ಮಾಡಿ ಧನ್ಯನನ್ನಾಗಿ ಮಾಡಬೇಕೆಂದು ಮಹಾ ಪಾದಕ್ಕೆ ದೀರ್ಘದಂಡ ನಮಸ್ಕಾರವನ್ನು ಮಾಡಿದ. ಬೋಳ ಬಸವಯ್ಯನನ್ನು ಶಿರವಿಡಿದೆತ್ತಿ ಮಗನೇ, ನೀನು ಅಪೇಕ್ಷಿಸಿರುವ ಷಟ್‌ಸ್ಥಲ ಸಿದ್ಧಾಂತದ ಬೋಧೆಯು ತುಂಬಾ ಉತ್ತಮವಾದುದು. ಈ ಷಟ್‌ಸ್ಥಲ ವಿದ್ಯೆಯು ಚಾರ್ವಾಕಾದಿ ಎಲ್ಲ ಮತಗಳ ಆಚರಣೆಗಿಂತಲೂ ಬೇರಾದುದು, ಮಹತ್ವವಾದುದು. ಈ ವಿದ್ಯೆಯನ್ನು ಅಚಲಿತರಾಗಿ ಸದ್ಭಕ್ತಿಯಿಂದ ನಿರ್ಮಲ ಮನಸ್ಸಿನಿಂದ ತಿಳಿದುಕೊಂಡು ಆಚರಿಸಿದರೆ ಈ ಷಟ್‌ಸ್ಥಲ ಸಿದ್ಧಾಂತವನ್ನು ಅನುಷ್ಠಾನಕ್ಕೆ ತಂದ ವೀರಶೈವ ಸದ್ಭಕ್ತನು ಸನ್ಯಾಸಿಗಳಿಗಿಂತಲೂ ದೊಡ್ಡವನಿರು

ತ್ತಾನೆ. ಇವನಿಗಿಂತ ದೊಡ್ಡವರಾರು ಇರುವುದಿಲ್ಲವೆಂದು ಅಪ್ಪಣೆ ಕೊಡಿಸಿ ಸಮೀಪದಲ್ಲಿದ್ದ ಸಪ್ಪೆದೇವರು, ಉಪ್ಪಿನ ಹಳ್ಳಿಯ ಸ್ವಾಮಿ ಸಿದ್ಧೇದೇವರು, ನಂಜೇದೇವರು, ಬೋಳ ಬಸವರಾಜ ದೇವರು, ಗುಮ್ಮಳಾಪುರದ ಸಿದ್ಧಲಿಂಗ ದೇವರು, ಪಟ್ಟಣದೇವರು, ರೇವಣಸಿದ್ಧೇದೇವರು, ಶೀಲವಂತ ದೇವರು, ಚಿಟ್ಟಗದೇವರು ಇಂತಿವರು ಮುಖ್ಯವಾದ ಭಕ್ತಮಹೇಶ್ವರರ್ಗೆ ಷಟ್‌ಸ್ಥಲ ಜ್ಞಾನ ಲಿಂಗಾಂಗ ಸಂಬಂಧ ಸಮರಸ ಏಕಾರ್ತಂ ಬೋಧಿಸಿ ಮುಕ್ತರಂ ಮಾಡಿ ಷಟ್‌ಸ್ಥಲ ಏಕಾರ್ಥವಾಗಿ ಮಾಡುವ ಕ್ರಿಯೆಗಳೆಲ್ಲಾ ನಿಷ್ಪತ್ತಿ ಯಾಗುವಂತೆ ಬೋಧಿಸಿದ ಷಟ್‌ಸ್ಥಲಸಾರಾಮೃತವೆಂಬ ವಚನಗ್ರಂಥವು ಎಲ್ಲರ ಅವಗಾಹನೆಯಲ್ಲಿರುತ್ತದೆ.*

ಅನಂತರ ಸಿದ್ಧಲಿಂಗ ಶಿವಯೋಗಿಗಳು ತಮ್ಮ ಶೂನ್ಯಪೀಠದ ಹತ್ತೊಂಬ ತ್ತನೆಯ ಶಿವಾನುಭವ ಪಟ್ಟಾಧಿಕಾರವನ್ನು ಮಾಡುವುದಕ್ಕೆ ಮುಂಚೆ ಸಹಜ ಷಟ್‌ಸ್ಥಲ ಬ್ರಹ್ಮೋಪದೇಶಮಂ ಮುಮುಕ್ಷುಗಳಿಗೆ ಹೇಳುವುದು ಎಂದು ಬೋಳ ಬಸವ ದೇವರಿಗೆ ಅಪ್ಪಣೆ ಕೊಡಿಸಿದಾಗ, ದೇವ ! ಸದ್ಗುರುವೆ ! ಚಿತ್ಕಾಂತನೆ ! ಕಾಲಾಂತಕನೇ ! ಕಪರ್ದಿಯೇ ! ಮಾಯಾತಿಮಿರಹರಣ ಭಾಸ್ಕರನೇ ! ಮಹೇಶ್ವರನೇ ! ಸಂತಸ ಆನಂದ ಸಿಧಿಯೇ ! ಸಕಲ ಲೋಕಾ ರಾಧ್ಯನೇ, ಚಿಂತಾರಹಿತನೇ, ನಿರಾಧಾರನೆ ! ನಿಷ್ಕಾಮನೇ ! ಈ ರೀತಿ ಬೋಧಿಸಿದಂತೆ ನಡೆಸಲು ನನಗೆ ಶಕ್ತಿಯಿದೆಯೇ ಎಂದು ಅರಿಕೆ ಮಾಡಿದಾಗ, ಮಗನೇ ನಿನಗೆ ಚಿಂತೆ ಬೇಡ. ಕೈಲಾಸದಿಂದ ಬಂದು ಭೂಲೋಕದಲ್ಲಿ ಷಟ್ ಸ್ಥಲ ಸಿದ್ಧಾಂತದ ರಹಸ್ಯವನ್ನುಪದೇಶಿಸಿ ವೀರಶೈವ ಧರ್ಮೋದ್ಧಾರ ಮಾಡು ವುದಕ್ಕಾಗಿ ಬಂದಿರುವ ನಮ್ಮ ಕಾರ್ಯವು ಮುಗಿದಿದೆ. ನೀವು ನಿರ್ಭಯ ವಾಗಿ ಈ ಸದ್ಬೋಧೆಯನ್ನು ಬೋಧಿಸತಕ್ಕದ್ದೆಂದು ಅಪ್ಪಣೆ ಕೊಡಿಸಿದಾಗ, ದೇವ, ನನ್ನ ಮೇಗಳ ಪ್ರೀತಿಯಿಂದ ತಾವು ಅಪ್ಪಣೆ ಕೊಡಿಸಿದ ಷಟ್‌ಸ್ಥಲ ಸಿದ್ಧಾಂತವನ್ನು ಯಾರಿಗೆ ಹೇಳಬೇಕು. ಮತ್ತಾರಿಗೆ ಹೇಳಬಾರದೆಂಬುವುದು

---

* ಈ ವಿಚಾರವಾಗಿ ಕವಿಚರಿತ್ರೆಕಾರರು ತಮ್ಮ ಎರಡನೆಯ ಸಂಪುಟ ಎಪ್ಪತ್ತೆ ರಡನೆಯ ಪುಟದಲ್ಲಿ ಶ್ರೀ ಸಿದ್ಧಲಿಂಗ ಶಿವಯೋಗಿಗಳು ತುಂಬಾ ಪಂಡಿತರೂ, ಕವಿ ಗಳೂ ಆಗಿರುತ್ತಾರಲ್ಲದೆ ಇವರ ಶಿಷ್ಯ ಪರಂಪರೆಯುವರೆಲ್ಲರೂ ಕವಿಗಳೇ ಆಗಿರು ತ್ತಾರೆಂದು ಮುಂತಾಗಿ ಉದಾಹರಿಸಿರುತ್ತಾರೆ.

ಅರಿವಾಗುವುದಿಲ್ಲವೆನಲು, ಪರಮಶೈವಾಗಮಂಗಳು ಹೇಳುವ ಮಾರ್ಗದಿಂದ ಆಚರಿಸದವರಿಗೆ, ವಿಷಯಾಸಕ್ತರಿಗೆ, ಚಂಚಲ ಮನಸ್ಸಿನವರಿಗೆ, ಢಂಬಕರಿಗೆ, ದುಷ್ಟರಿಗೆ, ದುಃಖದಿಂದಿರುವವರ್ಗೆ, ಇಷ್ಟ ಲಿಂಗವನ್ನು ಬಿಟ್ಟವರಿಗೆ, ಅನ್ಯ ದೈವವನ್ನು ಪೂಜಿಸುವವರಿಗೆ, ನಿಂದಕರಿಗೆ, ನಿರ್ಮಲವಲ್ಲದವರಿಗೆ, ಬಹುಸುಳ್ಳರಿಗೆ, ಬಾಯ್ಬಡಕರಿಗೆ, ಶಿವಮಾರ್ಗದ ಅಂದವನ್ನು ಅರಿಯದವರಿಗೆ, ಭಕ್ತಿ ಹೀನರಿಗೆ, ಪರಸ್ತ್ರೀಯರ ಭೆಟ್ಟಿಯನ್ನು ಬಿಡದ ಮಂದಮತಿಗಳಿಗೆ, ತನು ಮನ ಧನಗಳನ್ನು ಗುರುಲಿಂಗ ಜಂಗಮಕ್ಕೆ ಸವೆಸದ ಮೂರ್ಖರಿಗೆ ಈ ಷಟ್ ಸ್ಥಲ ಬ್ರಹ್ಮವನ್ನು ಹೇಳುವುದು ಸರಿಯಲ್ಲ.

ಪರರೊಡವೆಯನ್ನು ವಂಚಿಸುವವರಿಗೆ, ತೀರ್ಥಕ್ಷೇತ್ರ ಯಾತ್ರೆ ಮಾಡದವರಿಗೆ, ಗುರು, ಲಿಂಗ, ಜಂಗಮ ಒಂದೆಂದು ತಿಳಿಯದವರಿಗೆ, ತಾನಾರು ಎಂಬುದನ್ನು ತಿಳಿಯದವರಿಗೆ, ಸಂಸಾರಯೋಗದಲ್ಲಿ ಅತಿಕಾಮಿಯಾಗಿರ್ಪರ್ಗೆ, ಭವಿಜನ ಸಂಘದಲ್ಲಿರುವವರಿಗೆ, ಪಾದೋದಕ ಪ್ರಸಾದ ಸ್ವೀಕರಿಸದವರಿಗೆ ಹೇಳಬಾರದು.

ವರಸತ್ಯವಂತರಿಗೆ, ಸದ್ಭಕ್ತಿಯುಕ್ತರಿಗೆ, ಇಷ್ಟಲಿಂಗ ಪೂಜಾನಿರತರಿಗೆ, ಸುಸ್ಥಿರ ಸದಾಚಾರವಂತರಿಗೆ, ನಿರ್ಮಲ ಶಿವಜ್ಞಾನವಂತರಿಗೆ, ಮಾಯಾವಿರಹಿತ ಶಿವಾದ್ವೈತಯುಕ್ತರಿಗೆ, ಗುರುಲಿಂಗ ಚರಪಾದ ಪೂಜಕರುಗಳಿಗೆ, ನಿಜ ಮೋಕ್ಷದ ಅಪೇಕ್ಷೆಯುಳ್ಳವರಿಗೆ, ಭೂಲೋಕದ ಇಹಪರಗಳ ಆಸೆಯನ್ನು ಮರೆತವರಿಗೆ, ನಿರ್ಮಲ ಮನಸ್ಸಿನವರಿಗೆ, ನಿಜಲಿಂಗಾಂಗಿಗಳಿಗೆ, ಸದ್ಗುಣ ಮಹಾ ಶಾಂತಿಯುಕ್ತರಿಗೆ, ಸಕಲೇಂದ್ರಿಯಗಳನ್ನು ಜಯಿಸಿದವರಿಗೆ, ಹಲವು ವಿಧ ಸಂಚಿತ ಆಗಾಮಿ ಪ್ರಾರಬ್ಧವೆಂಬ ತ್ರಿಮಲವನ್ನು ಗೆದೆಯಬೇಕೆಂಬುವವರಿಗೆ ಇವರುಗಳಿಗೆ ಈ ಮಹಾಬೋಧೆಯನ್ನು ಬೋಧಿಸಬಹುದೆಂದು ಅಪ್ಪಣೆ ಕೊಡಿಸಿ, ಉನ್ನತ ಸಿಂಹಾಸನದ ಮೇಲೆ ಬೋಳಬಸವ ದೇವರನ್ನು ಕುಳ್ಳಿರಿಸಿ ಸತ್ಕರುಣದಿಂದ ಪ್ರಸಾದ ವೀಳ್ಯವನ್ನು ಅವರ ಬಾಯಿಗೆ ಇಟ್ಟು ಪ್ರಮಥರ ಜಯಘೋಷದಿಂದ ಗುರುತೋಂಟದಾರ್ಯನು ಮನದ ಅನಂತ ಸಂತೋಷದಿಂದ ಲೋಕಹಿತಕ್ಕೋಸ್ಕರ ಷಟ್‌ಸ್ಥಲಾಚಾರ್ಯ ಪಟ್ಟವನ್ನು ಕಟ್ಟಿದರು.

ಈ ಸಮಯದಲ್ಲಿ ಸಪ್ಪೆಯದೇವರು ನಿರ್ಮಲತರನಾದ ಪಟ್ಟಣದ ದೇವ, ಗುರು ಚಂದ್ರಶೇಖರ ದೇವ, ದೊಡ್ಡ ಸಿದ್ಧೇಶ, ಚಿಟ್ಟಿಗದೇವ, ಉರುತರದ ಶೀಲವಂತೇಶ, ಉಪ್ಪಿನಳ್ಳಿಯಯ್ಯ ಇನ್ನೂ ಮುಂತಾದವರ ಸಮ್ಮುಖದಲ್ಲಿ ಷಟ್‌ಸ್ಥಲದ ಶೂನ್ಯ ಸಿಂಹಾಸನದ ಪಟ್ಟಾಧಿಕಾರವನ್ನು ಮಾಡಿದುದನ್ನು ನೋಡಿ ಸಿದ್ಧಲಿಂಗೇಶ್ವರನ ಕೃಪಾಶೀರ್ವಾದದಿಂದ ಈ ಬೋಳಬಸವದೇವರು ಷಟ್‌ಸ್ಥಲ ಪಟ್ಟದ ಸಿದ್ಧಿಪುರುಷರಾಗಿ ನಮ್ಮನ್ನು ಸಮಸ್ತ ಭಕ್ತಮಂಡಲಿ ಯನ್ನು ಷಟ್‌ಸ್ಥಲ ಮಾರ್ಗದಿಂದ ಉದ್ಧಾರ ಮಾಡುತ್ತಾರೆಂದು ಹೊಗಳಿ ಜಯಘೋಷ ಮಾಡುತ್ತಿದ್ದರು.

ಪ್ರಪಂಚದ ಸದ್ಭಕ್ತರು ವಿರಕ್ತರು ಈ ವಿಚಾರವನ್ನು ತಿಳಿದು ಎಲ್ಲರೂ ಬಂದು ಬೋಳಬಸವರಾಜ ದೇವರ ಪಾದಕ್ಕೆ ನಮಿಸಿ ಸದ್ಬೋಧೆಯಿಂದ ಕೃತಾರ್ಥರಾಗುತ್ತಿದ್ದರು. ಎಲ್ಲೆಲ್ಲೂ ಸದ್ಭಕ್ತರ ವಿತತಿ ತುಂಬಿ ಸನ್ಮಾರ್ಗಿ ಗಳಾಗುತ್ತಿದ್ದರು. ಇತ್ತ ಎಡೆಯೂರು ರೇಣುಕಾಚಾರ್ಯರ ಶಾಖಾ ಸ್ಥಳದ ಮಠದ ಜಾಗದಲ್ಲಿ ಗವಿಯಮಠದ ಶಿವಶರಣರಾದ ಚನ್ನವೀರಪ್ಪ ಒಡೆಯರು ಸತಿ ಪಾರ್ವತಮ್ಮನ ಪ್ರಾರ್ಥನೆಯಂತೆ ಕದಂಬ ನದಿಯ ದಡದ ಕಲ್ಲು ಮಂಟಪದಿಂದ ಎಡೆಯೂರಿಗೆ ಬಿಜಯಂಗೈದು ಪಟ್ಟದ ಎಂಟು ಬಗೆಯ ಜಡೆಯ ಹಿರಿಯರು ಚಿಟ್ಟಿಗದೇವರು ತಮ್ಮ ಮಠದ ಜಾಗದಲ್ಲಿ ಕಲ್ಲುಮಠ ವನ್ನು ಕಟ್ಟಿಸಿದರು.

ಸಿದ್ಧಲಿಂಗ ಶಿವಯೋಗಿಗಳು ಸದರೀಮಠಕ್ಕೆ ದಯಮಾಡಿಸಿ ಮಠದ ಆವರಣದಲ್ಲಿ ಶಾಸ್ತ್ರಪದ್ಧತಿಯಂತೆ ಶಿಲಾಲೇಖನವನ್ನು ಬರೆಸಿ ನೆಡಿಸಿ ಸದರೀ ಮಠದಲ್ಲಿ ಶ್ರೀಮತ್ ಸಚ್ಚಿದಾನಂದ ನಿತ್ಯ ಪರಿಪೂರ್ಣವನ್ನುಳ್ಳ ಅನಾದಿ ಭಕ್ತ, ಆ ಭಕ್ತನ ಹೃದಯದಲ್ಲಿ ಜಂಗಮ, ಜಂಗಮದ ಮುಕುಟದಲ್ಲಿ ಶೂನ್ಯಲಿಂಗ, ಆ ಲಿಂಗದಲ್ಲಿ ಚಿದಂಬರ ಶಿವಶಕ್ತಿ, ಪಂಚಶಕ್ತಿ, ಪಂಚನಾದ, ಪಂಚಬ್ರಹ್ಮ, ಈಶ್ವರಾಷ್ಟಕ, ಮಹೇಶ್ವರ, ಪಂಚವಿಂಶತಿ, ರುದ್ರಏಕಾದಶತ್ರಯ, ವಯು, ಹಿರಣ್ಯಗರ್ಭ, ವಿರಾಟಮೂರ್ತಿ ಇಂತು ಈ ಎಂಬತ್ತೊಂದು ಮೂರ್ತಿಯೇ ಅಂಗವಾಗಿರ್ಪಾತನೇ ಅನಾದಿ ಭಕ್ತನು. ಆ ಭಕ್ತನ ಪ್ರಾಣಚಿತ್‌ಕಳಾ

ಚೈತನ್ಯವೇ ಚಿತ್ಕಲಾಸ್ವರೂಪಿಯಾಗಿ ಸಿದ್ಧಲಿಂಗೇಶನು ತಮಗಾಗಿ ಕಟ್ಟಿಸಿದ್ದ ಮಠದಲ್ಲಿ ನಿರ್ವಿಕಲ್ಪ ಶಿವಯೋಗ ಸಮಾಧಿಗೆ ಸನ್ನದ್ಧರಾದರು.

ಆ ತೋಂಟದ ಸಿದ್ಧೇಶ್ವರನ ಮೂರ್ತಿ ಕ್ರಮವೆಂತೆಂದರೆ ಪ್ರಣಮವೆ ಶಿರಸ್ಸು ನಮು ಕಾರವೇ ಭುಜ, ಶಿ ಕಾರವೇ ದೇಹ ವಾಯ ಕಾರವೇ ಪಾದ ಅನಂತ ಕೋಟಿ ಬ್ರಹ್ಮಾಂಡಗಳೇ ಮುಕುಟ, ಸಮಸ್ತ ಲೋಕಾದಿಲೋಕಂಗಳೇ ದೇಹದ ಒಳವಲಯ, ಆಕಾಶವೇ ಮುಖ, ದಶದಿಕ್ಕುಗಳೇ ತೋಳು, ಚಂದ್ರ ಸೂರ್ಯಾದಿಗಳೇ ನಯನ, ಪಾತಾಳವೇ ಪಾದ, ಮೇಘಂಗಳೇ ಜಟಾಬಂಧದಲ್ಲಿ ಶೂನ್ಯಲಿಂಗ, ವೇದ ಪುರಾಣಂಗಳೇ ಕ್ರಿಯೆ, ತ್ರಿನೇತ್ರಂಗಳೇ ಪುಷ್ಪ, ಚಂದ್ರ ಪ್ರಕಾಶವೇ ವಿಭೂತಿ, ಅಷ್ಟಕುಲ ಪರ್ವತಂಗಳೇ ರುದ್ರಾಕ್ಷಿ, ಸಪ್ತ ಸಮುದ್ರಂಗಳೇ ಕಮಂಡಲ, ಭುವನ ಸೃಷ್ಟಿಯೇ ಕಂತೆ, ದಿವರಾತ್ರಿಗಳೇ ಮಠ, ಷಡುರುತುಗಳೇ ಷಡಸ್ಥಲ, ಮಹಾಶೇಷನೇ ಕಟಿಸೂತ್ರ, ಪರಿಪೂರ್ಣ ಜ್ಞಾನವೇ ಪಂಚಮುದ್ರೆ, ತ್ರಿಕಾಲಜ್ಞಾನವೇ ಮಹದೈಶ್ವರ್ಯ, ಮಹಾಮೇರು ದಂಡ ಸದ್ಗುಣವೇ ಕರ್ಪುರ, ಕುಲವೇ ಶಿವಕುಲ ಇಂತಪ್ಪ ಅನಾದಿ ಜಂಗಮನೇ ಜಗಹಿತಾರ್ಥವಾಗಿ ಚರಿಸಿ ಜ್ಞಾನಕ್ರಿಯಾಸ್ವರೂಪನಂ, ಸರ್ವಾಂಗ ಲಿಂಗಿ, ಷಟ್‌ಸ್ಥಲ ಜ್ಞಾನಿ, ಸರ್ವಾಚಾರ ಸಂಪನ್ನ, ಪಾದೋದಕ ಪ್ರಸಾದ, ಪ್ರತಿಷ್ಠಾಚಾರ್ಯರು ಅಷ್ಟಾವರ್ಣಾಲಂಕಾರನು, ದ್ವೈತತಿಮಿರಮಾರ್ತಾಂಡನು ಇಂತಪ್ಪ ಶಿವಯೋಗಿ ಸಿದ್ಧಲಿಂಗೇಶ್ವರನು ಪರಾಜಂಗಮರಾಗಿ ಎಡೆಯೂರ ಶ್ರೀ ಗದ್ದುಗೆಯಲ್ಲಿ ಪರೋಕ್ಷದಲ್ಲಿದ್ದರು. ವಾಂಛಿತ ಫಲಗಳನ್ನು ಕೊಡುತ್ತಾ ಭಕ್ತೋದ್ಧಾರ ಮಾಡುತ್ತಾ ಶೂನ್ಯಪೀಠದ ಮೂಲ ಪರಂಪರೆಯಾಗಿ ನಿರ್ವಿಕಲ್ಪ ಶಿವಯೋಗ ಸಮಾಧಿ ಸನ್ನದ್ಧರಾಗಿ ಆರಾಧಿಸುತ್ತಿರುವರು. ಶ್ರೀ ಸಿದ್ಧಲಿಂಗೇಶ್ವರನ ಭಕ್ತಶಿರೋಮಣಿಗಳಾದ ಚಂಡಿ ಪ್ರಚಂಡಿಗಳೂ ಇಂದಿನ ಸ್ವಾಮಿಯ ಸೇವೆಗೈಯುತ್ತಾ ಕಾವಲಿರುವವು.

ಕರ್ನಾಟಕದಲ್ಲಿ ವಿಪುಲವಾಗಿ ವೀರಶೈವ ಮಂಡಲಿ ಇದ್ದರೂ ಲಕ್ಷಿಸದೇ, ಈ ಎಡೆಯೂರು ಕ್ಷೇತ್ರದಲ್ಲಿ ನೆಲಸಿರುವುದು ಪರಾಜಂಗಮ ಸ್ಥಿತಿಯೆಂಬುದು ನಿರ್ಧರವಾಗಿರುತ್ತದೆ. ಹೇಗೆಂದರೆ ಪರಶಕ್ತಿ ಮನಸ್ಥಿತಿಯೆಂದರೆ ಬ್ರಹ್ಮ,

ವಿಷ್ಣು, ಇಂದ್ರಾದಿದೇವತೆಗಳು, ಅಷ್ಟ ಭೋಗಗಳು, ಅಷ್ಟೈಶ್ವರ್ಯಗಳು, ಇತರ ಲೌಕಿಕ ಐಶ್ವರ್ಯಗಳು ಇವೆಲ್ಲವನ್ನೂ ಹುಲ್ಲುಕಡ್ಡಿಗೆ ಸಮವೆಂದು ಭಾವಿಸುವವನೇ ಪರಜಂಗಮನು ಮತ್ತು ತಪಶ್ಶಕ್ತಿಯಿಂದ ಪಡೆಯುವ ಎಲ್ಲ ರೀತಿಯ ಸಿದ್ಧಿಗಳು, ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳು ನಶ್ವರಗಳೆಂದು ಅರಿಯಬೇಕಲ್ಲದೆ ಮೂರು ಲೋಕಗಳನ್ನೂ ತೃಣ ಸಮಾನ ಗಳೆಂದು ಭಾವಿಸಬೇಕು.

ಈ ಭೂಲೋಕ ಮುಂತಾದ ಸಕಲ ಲೋಕಗಳಲ್ಲಿ ದೊರೆಯುವ ಸಕಲ ಭೋಗ್ಯ ವಸ್ತುಗಳೂ, ಸುವರ್ಣ, ರತ್ನ, ಇವುಗಳ ಆಭರಣಗಳೂ ಕೂಡ ತೃಣಸಮಾನವೆಂದು ಭಾವಿಸಿ, ಎಲ್ಲವನ್ನೂ ತ್ಯಜಿಸಿ, ಇತರ ಸಂಪತ್ತುಗಳನ್ನು ಲಕ್ಷಿಸದೆ ಎಲ್ಲಿ ತನ್ನ ಮನಸ್ಸು ಆಸೆಗೆ ಒಳಪಡುವುದಿಲ್ಲವೊ ಅಲ್ಲಿ ಮಾತ್ರ ಸಂಚ ರಿಸಬೇಕು. ಅವನೇ ಪರಜಂಗಮನು.

ಪರಜಂಗಮನ ದೃಷ್ಟಿಯಲ್ಲಿ ಸುವಾಸನೆ ಕೊಡುವ ಶ್ರೀಗಂಧ, ದುರ್ವಾ ಸನೆಯುಳ್ಳ ಕೆಸರು ಇವೆರಡೂ ಒಂದೇ. ಇದೇ ರೀತಿ ಮಲ್ಲಿಗೆ ಹೂ, ದತ್ತೂರಿ ಹೂ, ಕಬ್ಬಿಣ, ಚಿನ್ನ, ವಿಷ, ಅಮೃತ, ರುಚಿಕರವಾದ ಪೃಷ್ಟಾನ್ನ ಮತ್ತು ರೊಟ್ಟಿ, ತರಕಾರಿ, ಶಾಲ್ಯನ್ನ, ಹಾಲು, ನೀರು, ಮಂಚ, ನೆಲ, ಹತ್ತಿ ಬಟ್ಟೆ, ರೇಷ್ಮೆವಸ್ತ್ರ, ಗಾಜು, ರತ್ನ, ವಜ್ರ, ಭಿಕ್ಷುಕ, ಶ್ರೀಮಂತ, ಬಡವ, ಗಂಗಾನದಿ, ಚಿಕ್ಕಕೊಳ, ಸ್ಮಶಾನ, ದೇವಸ್ಥಾನ, ಮನುಷ್ಯರ ಮಾತು, ಮಂತ್ರ ಇವೆಲ್ಲವು ಸಮಾನವಾದವು. ಸತ್ಯ–ಅಸತ್ಯ–ಶುಭ, ಹುಲಿ–ಆಡು, ಹಾವು–ಕ್ರಿಮಿ ಇಂತಹ ಪರಸ್ಪರ ವಿರುದ್ಧ ವಸ್ತುಗಳಲ್ಲಿಯೂ ಪರಜಂಗಮನು ವಿರುದ್ಧ ಭಾವನೆಯುಳ್ಳವನಾಗುವುದಿಲ್ಲ.

ಪರಜಂಗಮನಿಗೆ ಅತ್ಯಾವಶ್ಯಕವಾಗಿ ಬೇಕಾಗುವ ವಸ್ತುಗಳೂ ಇರುವು ದಿಲ್ಲ. ಬೇಡವಾದ ವಸ್ತುಗಳೂ ಇರುವುದಿಲ್ಲ. ಎಲ್ಲ ವಸ್ತುಗಳಲ್ಲಿಯೂ ಏಕ ಭಾವನೆಯಿಂದ ಅಥವಾ ಸಮದೃಷ್ಟಿಯಿಂದ ವರ್ತಿಸುವನು, ಭೋಗ್ಯವಸ್ತು ಗಳಲ್ಲಿ, ದ್ರವ್ಯರಾಶಿಗಳಲ್ಲಿ ಅವನಿಗೆ ಆಸೆ ಎಂಬುದೇ ಇರುವುದಿಲ್ಲ. ಎಲ್ಲ ವಸ್ತುಗಳಿಂದಲೂ ಅವನು ತೃಪ್ತಿಪಡುವನು. ಎಂತಹ ಪದಾರ್ಥಗಳಿಂದಲೂ

ಅವನು ಸದಾ ಆನಂದ ಪಡುವನು. ತನ್ನ ಪಾದ ದರ್ಶನದಿಂದ ತನ್ನ ಭಕ್ತರಿಗೂ, ಇತರರಿಗೂ, ಮೃಗಪಕ್ಷಿಗಳಿಗೂ ಮುಕ್ತಿಯನ್ನು ಕರುಣಿಸುವನು.

ಬ್ರಹ್ಮ, ಇಂದ್ರ ಮುಂತಾದ ಸಕಲ ದೇವತೆಗಳಿಗೂ ದುರ್ಲಭವಾದ ಮುಕ್ತಿಯನ್ನು ಈ ಪರಜಂಗಮನು ಕರುಣಿಸಬಲ್ಲನು. ತನ್ನ ಪಾದೋದಕವನ್ನೇ ಪವಿತ್ರ ತೀರ್ಥವನ್ನಾಗಿ ಮಾಡಿಕೊಂಡು, ಪಾಪರಹಿತನಾಗಿ ಲೋಕಕ್ಕೆ ಕ್ಷೇಮವನ್ನು ಹಾರೈಸುತ್ತಾ ಎಲ್ಲೆಲ್ಲೂ ಅರಸುವನು. ಇದೇ ಪರಜಂಗಮನ ವೈಶಿಷ್ಟ್ಯ.

ಈ ಪರಜಂಗಮನೇ ಸಾಕ್ಷಾತ್ ಬ್ರಹ್ಮನು, ಪರಿಶುದ್ಧಾತ್ಮನು; ಮಹಾಯೋಗಿಯು. ಈತನೇ ಸತ್‌ರೂಪವೆನಿಸಿ ಸ್ಥಿರನಾಗಿರುವವನು. ಈತನಿಗೆ ದೇಹವಿದ್ದರೂ ದೇಹವಿಲ್ಲದ ಆತ್ಮಸ್ವರೂಪವೆನಿಸಿ, ಗುಣವುಳ್ಳವನಾಗಿದ್ದರೂ ನಿರ್ಗುಣಿಯಾಗಿ ವ್ಯವಹರಿಸುವನು. ಇಂಥವನೇ ಪರಜಂಗಮನು.

ಅಪ್ರಾಕೃತ ವೀರಶೈವರ

ಅರವತ್ತುನಾಲ್ಕು ಶೀಲಸಂಪಾದನೆಯು ರಹಸ್ಯಗಳು

ಈ ಅರವತ್ತುನಾಲ್ಕು ಶೀಲಸಂಪಾದನೆಯು, ಪಾಲ್ಕುರಿಕೆಯ ಸೋಮಾರಾಧ್ಯರ ಸಿದ್ಧಾಂತದ ಪ್ರಕಾರ ಪಂಚಾಚಾರ, ಲಿಂಗಾಚಾರ, ಸದಾಚಾರ, ಭೃತ್ಯಾಚಾರ, ಶಿವಾಚಾರ, ಗಣಾಚಾರವೆಂದು ಐದು. 'ಲಿಂಗಸಾರ'ದಲ್ಲಿ ಇದರ ಭೇದವು ವಿಸ್ತಾರವಾಗಿರುವುದು. ಸರ್ವಲೋಕದಲ್ಲಿ ಸೂಕ್ಷ್ಮವಾಗಿ ಗಣ ಶ್ರೇಷ್ಠನಂ ಮಾಡುವುದರಿಂದ ಲಿಂಗಾಚಾರವೆಂತೆಂದರೆ (೧) ಸಂಧ್ಯಾ, ಕರ್ಮ, ಧ್ಯಾನ, ಜಪ, ಹೋಮ, ಸ್ವಾಧ್ಯಾಯ, ಪಿತೃತರ್ಪಣ, ವೃದ್ಧಾಚಾರ, ತದ್ದಿನ, ಸೋಮವಾರ, ವ್ಯತೀಪಾತ, ಪಂಚಮ, ಏಕಭುಕ್ತ, ಉಪವಾಸ ಮೊದಲಾದವುಗಳಂ ಮಾಡಿದರೇ ನರಕವು. ಮರಣ ಸೂತಕಾದಿಗಳಲ್ಲಿ ಶಿವ ಭಜನೆಯನ್ನು ಬಿಡಬಾರದು. ದೇಹವು ಅಸ್ಥಿರವೆಂದು ತಿಳಿದು ಶಿವಮಾರ್ಗದಲ್ಲಿರದ ತಂದೆ ತಾಯಿಗಳು ಬಿಡದಿದ್ದರೆ ಪಾತಕವು. ವಾದಿ, ವೈದ್ಯ, ಪಿಶುನ, ಅಜ್ಞಾನಿ, ಅನ್ಯದೈವಜ್ಞ ಭಜಕರು ತನ್ನವರೆಂದು ಅವರಂ ಬೆರೆವುದೇ ದೋಷ. ಭವಿಪಾಕವಂ ಬಿಡುವುದು ಲಿಂಗಾಚಾರವು (೨) ಮುಂದೆ ಶಿವಜ್ಞಾನ ವಿದ್ಯೆಯಲ್ಲಿ ವೇದಾಗಮ ರಹಸ್ಯ ಶರಣರಿಂದ ಕಲಿಸಿದುದೇ ಆಚಾರ ಧರ್ಮವೆಂಬ ಧನವು. ಆಚಾರವಿಲ್ಲದವನ ಜ್ಞಾನವು ವಿದ್ಯೆಯು, ತತ್ವಗಳಿಲ್ಲದ ಚಾಂಡಾಲ ಭಾಂಡದಲ್ಲಿ ತುಂಬಿದ ಭಾಗೀರತಿಯ ಜಲದಂತೆ ಅಯೋಗ್ಯವೆಂದರಿತು ಆಚರಿಸುವುದು ಸದಾಚಾರವು. (೩) ಜಂಗಮ ಭಕ್ತ ಸಮೂಹವೆಂಬ ಒಡೆಯರಿಗೆ ತಾನು ಭೃತ್ಯರೂಪ ಸರ್ವವಸ್ತುಗಳನ್ನರ್ಪಿಸಿ ಅವರನುಭವಿಸಿ ಮಿಕ್ಕುದುಂ ಕೊಂಡಿರುವುದು ಭೃತ್ಯಾಚಾರವು.

(೪) ಶಿವಭಕ್ತನನ್ನು ಶಿವನೆಂದೇ ಭಾವಿಸದೆ ಅವನ ಕುಲವನ್ನು ವಿವರಿಸಿದರೆ ತನ್ನ ಲಿಂಗವನ್ನು ಕಲ್ಲೆಂದು ನುಡಿದವನ ದೋಷವಾಗುವುದು, ತಾಮ್ರ ಲೋಹಾದಿಗಳನ್ನು ಪರುಷವಂಟೆ ಅದು ಚಿನ್ನವಾದ ಮೇಲೆ ಲೋಹಾದಿಗುಣ

ವಿರುವುದೇ? ಕೆಸರಲ್ಲಿ ಕಮಲವು, ಕಲ್ಲೊಳಗೆ ಚಿನ್ನವು, ಕಾಷ್ಠದಲ್ಲಿ ಅಗ್ನಿಯು ಹುಟ್ಟಿದಂತೆ, ಯಾವ ಕುಲದಲ್ಲಿ ಹುಟ್ಟಿದ ಭಕ್ತನಾದರೂ ಶಿವನೆನಿಸುವನು. ಸ್ತ್ರೀ, ಪುರುಷ, ಷಂಡ, ದ್ವಿಜ, ಪುಲ್ಕಸರೆನ್ನದೇ ಎಲ್ಲರೂ ಶಿವನೆನಿಪ ಸದ್ಭಾವದಿಂದ ಇರಬೇಕು.

'ವೀರಭದ್ರೀಯ'ದಲ್ಲಿ ಕಲ್ಲು,ಕಟ್ಟಿಗೆ, ಲೋಹದ ಮಣ್ಣು, ನವರತ್ನಗಳಿಂದ ಮಾಡಿದ ಲಿಂಗಕ್ಕೆ ಶಿವನೆಂಬ ಭಾವದಿಂದ ಹೇಗೆ ಪೂಜೆ ಸಲ್ಲುವುದೋ ಅದರಂತೆ ಎಲ್ಲಾ ಭಕ್ತರು ಶಿವನೆಂದಿರುವುದು, ಶಿವಧರ್ಮದಲ್ಲಿ ಅಷ್ಟಾದಶ ವರ್ಣಕ್ಕೆ ಶಿವನೇ ಶ್ರೇಷ್ಠನು. ಅವನು ನೆಲೆಸಿದ ದೇಶವು ಪವಿತ್ರವು ಎನ್ನುವಲ್ಲಿ ಅವನ ಬಂಧುಗಳನ್ನು ವರ್ಣಿಸಬಹುದೆ? ಆಗದು ಎಂದು ಆಚರಿಸುವುದೇ ಶಿವಾಚಾರವು.

(೫) ಶಿವನ ನಿಮಿತ್ತವಾಗಿ ಮಾಡಿದ ಕರ್ಮವೇ ಧರ್ಮವು, ಶಿವ ವಿರಹಿತವಾದ ಧರ್ಮವೇ ಕರ್ಮವೆನಿಸುವುದಾದ ಕಾರಣ ಸಕಲ ಜೀವರ ನೋವು ತನ್ನಂತೆ ಎಂದು ಕಾಣುವದಲ್ಲದೆ ಶಿವದ್ರೋಹಿಯಾದವನು ಕುಲಜ ನಾಗಲಿ, ಶ್ರೇಷ್ಠನಾಗಲಿ ನಿಸ್ಸಂದೇಹದಿಂದಿರದು. ಭಕ್ತರನ್ನು ನೋಯಿಸದೆ ನಡೆವುದೇ ಧರ್ಮವು. ಅವರನ್ನು ನೋಯಿಸಿದ ಪಾಪಿಗಳನ್ನು ಕೊಲ್ಲುವುದೇ ಗಣಾಚಾರವು.

(೬) ಇನ್ನು ಷಡ್ವ್ರತಗಳನ್ನು ಕೇಳು, ಗುರು–ಶಿವ–ಜ್ಞಾನವೆಂಬ ಈ ತ್ರಿವಿಧವು ಏಕವೆಂಬ ವಿಚಾರದಿಂದ ಗುರುವಲ್ಲದೆ ಅನ್ಯವನ್ನು ವಿಚಾರಿಸದೆ ಈ ಷಡ್ವ್ರತದಲ್ಲಿಹುದೇ ಗೌರವವ್ರತವು; ಗುರುದತ್ತಲಿಂಗವೇ ಪ್ರಾಣಲಿಂಗವೆಂದು ಬಹಿರಂಗದಲ್ಲಿ ಭೇದವಿಲ್ಲದೆ ಸಕಲ ತಪಸ್ಸು ತೀರ್ಥ ಯಜ್ಞಫಲಾಧಿಕವೆಂದು ಲಿಂಗವನ್ನು ಪೂಜಿಸುವುದೇ ಲಿಂಗವ್ರತವು; ಚರಲಿಂಗವೇ ಮಹಾಲಿಂಗವೆಂದು ಅವರ ಚರಣಕ್ಕೆ ಇಷ್ಟಾರ್ಥವನ್ನರ್ಪಿಸಿ ಅವರ ಪಾದತೀರ್ಥ ಪ್ರಸಾದಗಳನ್ನು ಲಿಂಗನಿವೇದನವನ್ನು ಮಾಡುವುದೇ ಆಚಾರ ವ್ರತವು; ಗುರು ಲಿಂಗ ಜಂಗಮ ವನ್ನು ತ್ರಿಕರಣದಿಂದ ಭಜಿಸಿ ಅದರ ಶ್ರೇಷ್ಠವನ್ನು ಲಿಂಗಾರ್ಪಿತವನ್ನು ಮಾಡುವುದೇ ಪ್ರಸಾದ ವ್ರತವು; ಜಂಗಮ ಗುರುಪಾದೋದಕವೇ ತ್ರಿಲೋಕ

ಪಾವನವು. 'ಲಿಂಗಸಾರ'ದಲ್ಲಿ ಗುರು ಲಿಂಗ ಜಂಗಮ ಪಾದೋದಕವಲ್ಲದೆ ಇತರವನ್ನು ಕೊಂಡರೆ ಚಂಡಾಲೋದಕವೆಂದಿರುವುದು. ಆಚಾರ ಪಾದೋದಕದಿಂದ ಮಜ್ಜನವನ್ನು ಮಾಡಿ ಆ ತೀರ್ಥ ಸ್ವೀಕರಿಸುವುದೇ ಪಾದೋದಕ ವ್ರತವು; ಗುರು ಲಿಂಗ ಜಂಗಮ ಪೂಜೆಯನ್ನು ಮಾಡಿ ಪ್ರಸಾದ ವನ್ನು ಪಡೆಯುವುದಲ್ಲದೆ ನಿರಾಯಾಸ, ಶೌಚ, ದಯೆ, ಶಾಂತಿ, ಅಕಾಮ, ಅನಸೂಯಗಳೇ ಅಂಗವಾಗಿ ಈ ತ್ರಿವಿಧ ಭಕ್ತಿಯ ಆಚರಣೆಯೇ ಭಾಕ್ತಿಕ ವ್ರತವು.

ಇನ್ನು ಶೀಲಗಳು ಕೇಳು. ಶಿವಭಾವವಂ ಬಿಟ್ಟು, ಗುರುಲಿಂಗ ಜಂಗಮ ಭಕ್ತಿನಿರತನಾಗಿ ಜಂಗಮ ತೀರ್ಥವನ್ನು ಲಿಂಗಕ್ಕರ್ಪಿಸಿಕೊಳ್ಳುವ ಮಾರ್ಗದಿಂದಿರುವುದೇ ಉತ್ಪನ್ನ ಶೀಲವು. (೧) ತನ್ನ ಮಂದಿರದಲ್ಲಿ ಸದಾ ಚಾರದೊಡನೆ ಸಾವಧಾನದಿಂದಿರುವುದೇ ಆಚಾರಶೀಲವು. (೨) ಸತಿ, ಪುತ್ರ ಪುತ್ರಿ ಮುಖ್ಯರು, ಬಾಂಧವಸ್ತ್ರದಿಂದ ಕೂಡಿದುದು ಮೊದಲಾದ ಶಿವಸತ್ಕ್ರಿಯೆ ಗಳನ್ನು ನಿಶ್ಚಯಿಸಿ ಮಾಡುವ ಸೇವೆಯು ಉದ್ಯೋಗಶೀಲವು. (೩) ನದೀ ತಟಾಕಾದಿಗಳಲ್ಲಿ ಸರ್ವಾಂಗ ಪಾವನೆಯ ಶುದ್ಧ ಜಲವನ್ನು ತಂದು ಜಂಗಮ ತೃಪ್ತಿಯನ್ನು ಮಾಡಿ ತತ್‌ಪ್ರಸಾದವನ್ನು ಲಿಂಗಾರ್ಪಿತ ಮಾಡುವುದೇ ಉತ್ಕಲಿತ ಶೀಲ. (೪) ಸರ್ವಧಾನ್ಯ, ಗುಡ, ಭವಿಪಾಕಗಳನ್ನು ವರ್ಜಿಸಿ ಪೂರ್ವವಿಧಿಯಂತೆ ಕೂಪಾದಿ ಜಲವನ್ನು ತರುವುದೇ ಸಂಬಂಧ ಶೀಲವು. (೫) ಈಶಸೇವಾ ನಿಮಿತ್ತದಿಂದ ಒದಗಿದ ಪರಿಕರಗಳಲ್ಲಿ ಕಟ್ಟಿಗೆ, ಬೆಂಕಿ, ಮೊದಲಾದವರನ್ನು ಭವಿಗಳಿಗೆ ಕೊಡದಿಹುದೆ ಪ್ರಸನ್ನಶೀಲವು. (೬) ಲಿಂಗ ಜಂಗಮದ ಸೇವೆಯನ್ನು ತಾನೇ ಮಾಡಿ ಉಳಿದ ಪ್ರಸಾದವನ್ನು ಪರಜನರಿಗೆ ಕೊಡದೆ ಲಿಂಗಕ್ಕೆ ಅರ್ಪಿಸಿ ತಾನೆ ಭುಂಜಿಸುವುದು ಉತ್ತಮ ಶೀಲವು. (೭) ಭೂಮಿಯಾದಿ ಭವಿಸಂಬಂಧವನ್ನು ಬಿಟ್ಟು ಪದಾರ್ಥಗಳನ್ನು ಕರಣ ವ್ಯಾಪಾರ ಗಳನ್ನು ಲಿಂಗಕರ್ಪಿಸಿ ಜಂಗಮವೇ ಪರಮ ಕರ್ತೃವೆಂದರಿಯುವುದೇ ಜ್ಞಾನ ಶೀಲವು. (೮) ಭವಿ ಶಬ್ದ, ಕುಶಬ್ದ, ಹಿಂಸಾಶಬ್ದ, ಶ್ವಪಚಶಬ್ದ, ಕರ್ಕ ಶಬ್ದ, ಡಾಂಭಿಕ ಶಬ್ದ, ಉಗ್ರಶಬ್ದ, ಭೀಭತ್ಸಕ ಶಬ್ದಗಳೆಂಟನ್ನು ಬಿಡುವುದೇ ವಿಸರ್ಜನಶೀಲವು. (೯) ಹಿಂದೆ ಸತ್ಯವು ಮೊದಲು ಮಾಡಿ ಹೇಳಿದಂತೆ

ನಡೆವುದೇ ಧರ್ಮಾಚಾರತೆ ಶೀಲವು. (೧೦) ಅಥರ್ವಣವೇದ ಬೃಹಜ್ಜಾಬಾಲೋಪನಿಷತ್ ಸೂತಸಂಹಿತೆ ಶಿವಧರ್ಮಗಳಲ್ಲಿ, ಮದ್ಯ, ಮಾಂಸ, ಉಳ್ಳಿ–ನುಗ್ಗೆ–ಸೆಳ್ಳೆ–ಹಂದಿ, ಕೋಳಿಗಳು ಮುಟ್ಟಿದ ವಸ್ತುಗಳು, ಅಣಬೆ, ಆಲಿಕಲ್ಲು, ಗುಂಡುಸೋರೆಕಾಯಿ, ಬಿಳಿಯ ಬದನೆಕಾಯಿ ಮೊದಲಾದವು ಅಯೋಗ್ಯಗಳೆಂದಿರುವವು. ಲವಣವನ್ನು ಬಿಡತಕ್ಕದ್ದು. ಅದು ಪದಾರ್ಥಕ್ಕೆಲ್ಲ ಸವಿಯನ್ನುಂಟು ಮಾಡುವ ಮುಖ್ಯ ದ್ರವ್ಯವು. ಹೇಗೆಂದರೆ ನವರತ್ನಗಳಲ್ಲಿ ಮುತ್ತಿನಂತೆಯೂ, ದೇಹಕ್ಕೆ ಜೀವಸ್ವರೂಪದಂತೆಯೂ ವಿವಿಧ ವಸ್ತುಗಳಿಗಾಧಾರವಾದ ಭೂಮಿಯಂತೆ ಅಖಿಲ ಶಾಕ ಪಾಕಾದಿಗಳಿಗೆ ಮುಖ್ಯವಾದದ್ದು ಈ ಲವಣವು. ಆದರೂ ಇದು ಇಲ್ಲದಿದ್ದರೆ ರುಚಿಸದಲ್ಲದೆ ದೂಷ್ಯವೆಂದರಿತು ಬಿಡುವುದು. ಪತಿತಾನ್ನವು, ಎಮ್ಮೆಯ ಹಾಲು, ಜೇನುತುಪ್ಪ ಮೂಲಂಗಿ, ತಾಮ್ರ ಪಾತ್ರೆಯ ಹಾಲು, ಕಂಚಿನಲ್ಲಿ ಹಾಕಿದ ನಾರಿಕೇಳದ ನೀರು, ಅಗಸರ ಕೆರೆಯ ನೀರು, ಕಪಾಲೆಯ ನೀರು, ಭಂಗಿಬಳ್ಳಿ ಮೊದಲಾದವನ್ನು ಬಿಡುವುದು ದ್ರವ್ಯನಿರಸನ ಶೀಲವು. (೧೧) ಸಾಮಾನ್ಯ ಜನರ ಗೃಹವನ್ನು ಪ್ರವೇಶಿಸದೆ ಇರುವುದೇ ಗೃಹನಿರಶನ ಶೀಲವು. (೧೨) ನಾಯಿ ಮುಟ್ಟಿದ ಚರ್ಮ ಮೊದಲಾದವು ಅಂಟಿದ ಪದಾರ್ಥಗಳನ್ನು ಬಿಡುವುದೇ ಅಂತರಾಯ ನಿರಶನ ಶೀಲವು. (೧೩) ಭವಿಯನ್ನು ನುತಿಸದಿರುವುದೇ ಅನ್ಯ ನುತಿ ವರ್ಜನ ಶೀಲವು (೧೪) ಆಸನಶಯನಗಳನ್ನು ಭವಿಸಂಸರ್ಗವನ್ನು ಬಿಡುವುದೇ ಸಂಸರ್ಗನಿರಶನ ಶೀಲವು. (೧೫) ವಿಷದ ಮುಳ್ಳು, ಶಸ್ತ್ರ, ಹಂದಿ, ನಾಯಿ, ಬೆಕ್ಕು, ಕೋಳಿಗಳು ನೋಡಿ ಮುಟ್ಟಿದವುಗಳನ್ನು ಬಿಡುವುದು ಸ್ಪರ್ಶ ನಿರಶನವು. (೧೬) ಭಕ್ತಿಯೆಂಬ ಸ್ತ್ರೀಯಳಲ್ಲಿ ಕಾಮ ಮೊದಲಾದುದೆಂದು ಹಿಂದೆ ತಿಳಿಸಿದುದೇ ಭಕ್ತಿರತಿಯೆಂಬ ಶೀಲವು. (೧೭) ಷಡ್ವಿಧ ದ್ರವ್ಯ ಸಂಸಾರಕ್ಕೆ ಗೃಹವೆಂದು ಹಿಂದೆ ಹೇಳಿರುವೆವು. (೧೮) ಹದಿನಾರುವಿಧ ದ್ರವ್ಯ ಸಂಸ್ಕಾರಕ್ಕೂ ಆರು ವಿಧ, ಸಂಸ್ಕಾರಕ್ಕೂ ಸದಾಚಾರ ವಿಷಯದಲ್ಲಿ ಹೇಳಿರುವೆವು. (೧೯) ಹಿಂದೆ ತಿಳಿಸಿದ ಸಜ್ಜನ ಷಡ್ವಿಧ ಸಂಬಂಧ ಶೀಲವು. (೨೦) ದಾಸತ್ವ ವೀರದಾಸತ್ವವೆಂದು ಹೇಳಿರುವುದರಲ್ಲಿ ಸಪ್ತವಿಧ ಶುದ್ಧಶೀಲವೆಂತೆಂದರೆ: ಅಕಾರ್ಪಣ್ಯ ನಿರಾಯಾಸ ಶೌಚ–ಶಾಂತಿ–ದಯೆ–ಅಕಾಮ, ಅನಸೂಯೆ–ಪ್ರತಿಜ್ಞೆಗಳು. (೨೧) ಸಪ್ತವ್ಯಸನ, ಅಷ್ಟಮದ, ಅರಿಷಡ್ವರ್ಗ,

ವಾದವಶ್ಯಸ್ತಂಭನಗಳಲ್ಲದೆ ಹಂದಿ ಮಾಂಸ, ಮದ್ಯ ಮಾಂಸಗಳೆಂಬುವನ್ನು ಬಿಟ್ಟಿರುವುದೇ ಭವಿವಿಸರ್ಜನ ಶೀಲವು. (೨೨) ಪಾಪಗಳಲ್ಲಿ ಸುಳ್ಳೆಂಬುದು ಮಹಾಪಾಪವೆಂದು ಅದನ್ನು ಬಿಡುವ ಶೀಲವು. (೨೩) ಗುರುಪ್ರಸಾದ ಲಿಂಗವನ್ನು ದೇಹದಿಂದಗಲಿಸುವ ಭವಿಯನ್ನಲ್ಲದೆ ಅಭಕ್ತರನ್ನು ಕೂಡದೆ ಲಿಂಗಧಾರಿಯಾಗಿ ಅಭಕ್ಷ್ಯಭಕ್ಷಣಗಳನ್ನು ಮಾಡುವವರನ್ನು ಬೆರೆಯದುದೇ ಲಿಂಗಾಂಗ ಸಂಬಂಧ ಶೀಲವು.

ಶಿವನಿಗಲ್ಲದೆ ಪಾರ್ವತಿಗೂ ವಂದಿಸುವನಲ್ಲವೆಂಬ ಏಕಲಿಂಗನಿಷ್ಠಾಪರನಾದ ಭೃಂಗೇಶ್ವರನೇ ಪಾಲ್ಕುರಿಕೆಯ ಸೋಮೇಶ್ವರನು. ಆತನು ೬೪ ಶೀಲಗಳನ್ನು ಹೇಳಿರುವ ಆಗಮಾರ್ಥಕ್ರಮವೆಂತೆಂದರೆ: ಈ ಮೇಲೆ ಹೇಳಿದ (೨೩) ಶೀಲಗಳನ್ನು ಕೈಗೊಂಡು ನಡೆಸುವ ಶೀಲವು. (೧) ತನ್ನ ಪತಿಗೆ ಈ ವ್ರತವನ್ನು ತಪ್ಪದೇ ಮಾಡಿಸುವದು. (೨) ತನ್ನ ತನ್ನ ಬಂಧು ಮಿತ್ರರ ಸಹವಾಗಿ ಶೀಲಗಳನ್ನು ನಡೆಸುವುದನ್ನು ಹೇಳುತ್ತಾನೆ. ರಜಸತ್ಸೂತಕವನ್ನು ಕಳೆಯುವುದು. (೩) ಕರ್ಮವನ್ನು ಕಳೆಯುವುದು. (೪) ಗರ್ಭಿಣಿಯಾದ ತನ್ನಂಗನೆಗೆ ಲಿಂಗದ ಹಸ್ತದಿಂದ ಭಸಿತ ಗರ್ಭ ಸಂಸ್ಕಾರವನ್ನು ಮಾಡುವುದು. (೫) ಜಂಗಮ ತೀರ್ಥ ಪ್ರಸಾದಗಳನ್ನು ಲಿಂಗಕ್ಕೆ ಕೊಟ್ಟುಕೊಂಬುದು. (೬) ಜಂಗಮವೇ ಶಿವನೆಂಬುದು. (೭) ಭಾಂಡವನ್ನು ತುಂಬಿ ಸರ್ವಾಂಗ ಪಾವಡವನ್ನು ಕಟ್ಟುವುದು. (೮) ಎಮ್ಮೆಯ ಹಾಲು ಬಿಡುವುದು. (೯) ಭವಿಗೆ ಕೆಲಸವನ್ನು ಮಾಡುವುದಿಲ್ಲವೆಂಬ ಭಕ್ತನ ಕೈಯಲ್ಲಿ ಕ್ಷೌರ ಕಾರ್ಯವನ್ನು ಮಾಡಿಸಿಕೊಳ್ಳುವುದಲ್ಲದೆ ತಾನೇ ಶಸ್ತ್ರಾದಿಗಳನ್ನೊದಗಿಸಿ ಕಾಲಾನುಕೂಲವಾಗಿ ಭಕ್ತರಿಂದ ಮಾಡಿಸಿಕೊಳ್ಳುವುದು. (೧೦) ಸಲಕ್ಷಣ ಪಶುವ್ರತಗಳಿಗೆ ಲಿಂಗಮುದ್ರೆಯನ್ನು ಕರೆಯುವದು. (೧೧) ಶಿವಭಕ್ತರಿಂದಲೇ ಹುಲ್ಲನ್ನು ತರಿಸಿ ನೀರು ಕುಡಿಸುವುದು. (೧೨) ಜಿಹ್ವಾಲಂಪಟಂ ಬಿಟ್ಟು ದೋಷವಾದ ಉಪ್ಪನ್ನು ಸೇರಿಸದೇ ಸಪ್ಪೆಯನ್ನು ಕೊಡುವುದು. (೧೩) ಲಿಂಗಮುದ್ರೆಯ ಪಶುವಿಗೆ ಲಿಂಗಮುದ್ರೆಯ ಬಸವನನ್ನು ಹತ್ತಿಸುವುದು. (೧೪) ಶಿವಭಕ್ತನಾದ ಕುಂಬಾರನಿಂದ ಶುದ್ಧ ಜಲದಿಂದ ಭಾಂಡವನ್ನು ಮಾಡಿಸುತ್ತ ಅವುಗಳಿಗೆ ಲಿಂಗಮುದ್ರೆಯನ್ನು

ಒತ್ತಿಸುವುದು. (೧೫) ಬೇವು ತೊಗಲು ಕಿವಿಗಳನಂಟದ ಹತ್ತಿಯನ್ನು ಶಿವಭಕ್ತೆಯರಿಂದ ನೇಯಿಸಿ ಆ ವಸ್ತ್ರಕ್ಕೆ ಲಿಂಗಮುದ್ರೆ ಇಡುವುದು. (೧೬) ಆ ವಸ್ತ್ರವನ್ನು ಚಲಮೇಯಗ್ಗಣಿಯಲ್ಲಿ ತೊಳೆಯುವುದು. (೧೭) ತೊಗಲ ಪಾದುಕೆಯನ್ನು ಬಿಟ್ಟು ಹಾವುಗೆಯನ್ನು ಮೆಡುವುದು. (೧೮) ಹೂವಿನ ತೋಟಕ್ಕೆ ಭವಿದೃಷ್ಟಿಯಂಟದಂತೆ ಬೇಲಿಯನ್ನು ಮಾಡುವುದು. (೧೯) ಶಿವ ಭಕ್ತನಾದ ದೊರೆಯ ಕೈಗೆ ವಿಭೂತಿಯನ್ನು ಕೊಟ್ಟು ಕ್ಷೇತ್ರವನ್ನು ಕೈಗೊಂಡು ಆ ಭೂಮಿಗೆ ಲಿಂಗಾಂಕಿತವನ್ನು ಮಾ ಡಿ ಸಿ ಶೋಧಿಸುವುದು. (೨೦) ಆ ಕ್ಷೇತ್ರವನ್ನು ಉಳುವ ಎತ್ತುಗಳಿಗೆ ಲಿಂಗಮುದ್ರೆಯುಳ್ಳ ಕೊರಳಲ್ಲಿ ಮಿಣಿಯನ್ನು ಕಟ್ಟದೆ ಹಗ್ಗವನ್ನು ಕಟ್ಟುವುದು. (೨೧) ಗುರು ಲಿಂಗ ಜಂಗಮ ದಲ್ಲಿ ಸುಗುಣ, ದುರ್ಗುಣ, ಮೃದು, ಕಠಿಣ, ಕರುಣ, ದ್ವೇಷಗಳನ್ನು ಹುಡುಕದೆ ಅವರು ಅಹುದೆಂಬುದನ್ನೆ ತಾನು ಅಹುದೆಂದು ಮತ್ತವರಿಂದ ಅಹುದೆನಿಸಿಕೊಳ್ಳುವುದು. (೨೨) ಭವಿಯನ್ನು ನೆಂಟನೆನದೆ ಅವನಿಗೇನೂ ಕೊಡದೆ ಕೊಳ್ಳದೆ ಗಣಿಸದಿರುವುದು. (೨೩) ಅನ್ಯದೇವರ ಭಜನೆಯನ್ನು ಕೇಳದಿರುವುದು. (೨೪) ಶಿವಭಕ್ತನೇ ಕುಲಜ, ಈಶ್ವರನೇ ದೈವ, ಪಂಚಾ ಕ್ಷರಿಯೆ ಮಂತ್ರವೆಂದು ಕೇಳುವಂತೆ ದೃಷ್ಟಾಂತವನ್ನು ತೋರುವುದು. (೨೫) ಜಾತಿಸೂತಕ ಪ್ರೇತಸೂತಕಗಳನಳಿವುದು. (೨) ಪರಧನ ಪರಸ್ತ್ರೀಯರನ್ನು ತ್ರಿಕರಣದಲ್ಲಿಯೂ ನೆನೆಯದಿರುವುದು. (೨೭) ಕಾಮಿಸಿ ಕಲ್ಪಿಸಿ ನೇಮಿಸಿ ಶಿವನನ್ನು ಬೇಡದಿಹುದು. (೨೮) ಭಕ್ತರಲ್ಲಿ ಜಾತಿಗಳನ್ನು ಹುಡುಕದಿರುವುದು (೨೯) ಭಕ್ತರಲ್ಲಿ ಬಲ್ಲತನವನ್ನು ಹುಡುಕದಿರುವುದು. (೩೦) ಭಕ್ತರಲ್ಲಿ ತರ್ಕ ವನ್ನು ಮಾಡದಿರುವುದು. (೩೧) ನಾಯಿ, ಹಂದಿ, ಕೋಳಿ, ಬೆಕ್ಕುಗಳಿಂದ ತನ್ನ ಭೂಮಿಯನ್ನು ಮೆಟ್ಟಿಸದಿರುವದು. (೩೨) ನೂರೆಂಟು ವ್ಯಾಧಿಗಳು ಬಂದರೂ ನಾರು, ಬೇರು, ಮಣಿ, ಮಂತ್ರೌಷಧಗಳನ್ನು ಬಿಡುವುದು. (೩೩) ತಿಥಿ, ಲಗ್ನ, ವಾರ, ಶಕುನಗಳನ್ನು ಬಗೆಯದಿರುವುದು. (೩೪) ಭವಿಯು ನೆರೆ, ಭವಿಯು ಬೆಳೆದ ಧಾನ್ಯಗಳನ್ನು ಬಿಟ್ಟು ಭವಿಯಲ್ಲಿ ನುಡಿಯದಿರುವುದು. (೩೫) ತಿಥಿ, ವಾರ, ಸಂಕ್ರಾಂತಿ ಶಿವರಾತ್ರಿಗಳಲ್ಲಿ ಏಕ ಭುಕ್ತಾದಿಗಳನ್ನು ಮಾಡದಿರುವುದು. (೩೬) ಗುರು ಲಿಂಗ ಜಂಗಮಕ್ಕೆ ಯಾವುದನ್ನೂ ವಂಚಿಸ

ದಿರುವುದು. (೩೭) ತೀರ್ಥಯಾತ್ರೆಯಲ್ಲಿ ವಿಶ್ವಾಸವನ್ನು ಬಿಡುವುದು. (೩೮) ಯಾರಿಗೂ ಉಪದೇಶವನ್ನು ಕೊಡದಿರುವುದು. (೩೯) ಜಂಗಮಕ್ಕೆ ಉಪಾಧಿ, ನಿರುಪಾಧಿ ಸಹಜ ಆಟಗಳ ಆಚರಣೆಯಲ್ಲಿ ನೀತಿಯಿಂದ ಸಹಜ ಮಾಟವನ್ನು ಮಾಡುವುದು. (೪೦) ತನ್ನ ಮನೆತನದಲ್ಲಿ ಗುರುಗಳಿಗೆ ಸಮಾನ ಶೀಲನಾಗಿದ್ದು ಅವರ ದೇವರ ಸಮ್ಮುಖದಲ್ಲಿ ಅವರ ಪಾದದಲ್ಲಿ ಸಹ-ಗಮನವು. (೪೧) ಶೀಲಾಚರಣೆಯನ್ನು ಹಿಡಿದು ಅನುಸರಿಸಲು ಬಿಡಲು ತಾನು ಅಧರ್ಮಕ್ಕೆ ಸ್ಥೈರಿಸದೆ ದೇಹದಾಸೆಯನ್ನು ಬಿಟ್ಟು ನಿಸ್ಪೃಹದಿಂದಿರುವುದು. (೪೨) ಮತ್ತೆ ಆಚಾರ ಜ್ಞಾನಗಳಲ್ಲಿ ದೇಹಕ್ಕಾಚಾರವು, ಮನಕ್ಕೆ ಅರಿವು ಎಂದು ಆಚರಿಸುತ್ತಾ ಪ್ರಾಣವೇ ಜಂಗಮವೆಂದು ಮನ ಭಾವಗಳಿಂದು ಶುದ್ಧ ಚಿತ್ತದಲ್ಲಿನ ಅರಿವೇ ಶೀಲ. (೪೩) ಕಾಲ ಕಲ್ಪನೆಗಳ ಬೆನ್ನಂಟದಿರುವುದು. (೪೪) ಜಿಹ್ವೆಯಲ್ಲಿ ಕುಶಬ್ದವನ್ನು ನುಡಿಯದು. (೪೫) ತಾನು ಕಿವಿಯಲ್ಲಿ ಕುಶಬ್ದವನ್ನು ಕೇಳದುದು. (೪೬) ಜಾಗ್ರತ ಸ್ವಪ್ನ ಸುಷುಪ್ತಿಗಳಲ್ಲಿ ಶಿವನಲ್ಲದೆ ಅನ್ಯವನ್ನು ಅರಿಯದೇ ಇರುವುದು. (೪೭) ಚಂದ್ರ ಸೂರ್ಯರನ್ನು ನೋಡದಿರುವುದು. (೪೮) ಬಿಸಿಲು ಬೆಳದಿಂಗಳುಗಳಲ್ಲಿ ಕಾರ್ಯಾರ್ಥವಾಗಿ ಚರಿಸಿದರೂ ಸೀಮಾಲಂಗನೆಯನ್ನು ಮಾಡಿಕೊಳ್ಳುವುದು. (೪೯) ಕಾರ್ಯಕಾರಣಗಳಾಗಿ ಪ್ರಯಾಣಕ್ಕೆ ಬಂಡಿಗೆ ಬಸವಗಳನ್ನು ಕಟ್ಟಿ ಪರಸ್ಥಳಕ್ಕೆ ಹೋಗುವುದು. (೫೦) ದಶವಾಯುಗಳಿಚ್ಛೆಯಲ್ಲಿ ನಡೆಯದಿರುವುದು. (೫೧) ಅರಿಷಡ್ವರ್ಗ ಅಷ್ಟಮದಗಳನ್ನು ಕಳೆದು ತತ್ವ ಸಮೂಹವನ್ನು ತಿಳಿಯುವುದು. (೫೨) ಕಸ್ತೂರಿ, ಪಚ್ಚಕರ್ಪೂರ, ಪುನುಗು, ಜವ್ವಾಜಿ, ಕುಂಕುಮ, ಹೂವುಗಳ ಮೇಲಿನ ಮನದಿಚ್ಛೆಯಲ್ಲಿ ಇರದಂತೆಯೂ (೫೩) ರುದ್ರಾಕ್ಷಾಭರಣವಲ್ಲದೆ ಮಿಕ್ಕ ರತ್ನಾಭರಣವನ್ನು ಧರಿಸದಿರುವುದು. (೫೪) ಎಲ್ಲಿ ಜೀವನೋ ಅಲ್ಲಿ ಶಿವನು ಎಂಬ ಮನೆಮಾತನ್ನು ಧಿಕ್ಕರಿಸಿ ಶರಣನ ಮಧ್ಯದಲ್ಲಿ ಲಿಂಗವು, ಲಿಂಗ ಮಧ್ಯದಲ್ಲಿ ಶರಣನು ಎಂಬ ಶ್ರುತಿ ವಾಕ್ಯದಿಂದ ಶರಣನಲ್ಲಿ ಲಿಂಗವೇ ತುಂಬಿಹುದೆಂದು ತಿಳಿಯುವುದು. (೫೫) ದಶವಿಧ ಪಾದೋದಕ ಏಕಾದಶ ಪ್ರಸಾದಗಳರಿವುದು. (೫೬) ಸಾಲೋಕ್ಯ ಸಾಮೀಪ್ಯ, ಸಾರೂಪ್ಯ ಸಾಯುಜ್ಯ

ಗಳನ್ನು ಬಯಸದೇ ಇರುವುದು. (೫೭) ಕಾಮಿತ ಕಲ್ಪಿತಗಳಿಲ್ಲದೆ ಲಿಂಗ ವಿಡಿದು ಆ ಮಹತ್ಸಕಲ ಭೋಗಗಳನ್ನು ಭೋಗಿಸುವುದು. ಹೇಗೆಂದರೆ, ಪಂಚೇಂದ್ರಿಯದಲ್ಲಿ ಲಿಂಗ ಸ್ವಾಯುತವನ್ನು ಮಾಡುವುದು. (೫೮) ಷಟ್‌ಸ್ಥಲ ಸಂಪನ್ನನಾಗಿ ಮೇಲೆ ತೆರವು ಮರಹಿಲ್ಲದಿರುವುದು. ಇವುಗಳೊಳಗೆ ಭವಿ ಪಾಕ–ಪರಪಾಕ-ಬಹುಜಲ ಅನ್ಯದೈವವನ್ನು ಬಿಟ್ಟು ಸರ್ವಾಚಾರ ಸಂಪನ್ನ ನಾಗಿ ನಿರ್ಮಲತೆಯಿಂದ ನಡೆಯುವುದೇ ವಿಶೇಷ ವೀರಶೈವವು.

ಸಮಸ್ತ ಸನ್ಮಂಗಳಾನಿ ಭವಂತು



ಮು. ಮು. ರಾಮಸ್ವಾಮಿ
ಮುತ್ತವಳನಿ. ರಾಮಸ್ವಾಮಿ

10/-

